
ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಶಾಸ್ತ್ರಗಳ ಅರ್ಥ - ಅಂತರಾರ್ಥ

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್




ಅನುವಾದ : ಉಮಾಲೋಕೇಶ್

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಶಾಸ್ತ್ರಗಳ ಅರ್ಥ – ಅಂತರಾರ್ಥ

ತಟವರ್ತಿ ವೀರರಾಘವರಾವು



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ

ಕನ್ನಡ ಅನುವಾದ : **ಉಮಾ ಲೋಕೇಶ್**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ರಾಮನಗರ ಬೆಂಗಳೂರು

**Shastragala Aartha Antarartha :** Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066. **M : 9449695503, 8050082689**

| | | |
|---|---|---|
| ಮೊದಲನೆಯ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 80 /– |
| ಪುಟಗಳು | : | iv+80=84 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್. ಎನ್. ಶ್ರೀನಿವಾಸ** ಮತ್ತು

**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯಾನುಕ್ರಮಣಿಕೆ


| | |
|---|---|
| – ಶಾಸ್ತ್ರಗಳ ಅರ್ಥ – ಅಂತರಾರ್ಥ | 1 |
| –ಪುಣ್ಯವೆಂದರೆ? | 5 |
| –ಉಪವಾಸ | 7 |
| –ಮೌನ | 12 |
| –ಜಾಗರಣೆ | 14 |
| –ಪೂಜೆ | 18 |
| –ಸ್ತೋತ್ರ | 23 |
| –ಜಪ | 27 |
| –ದೇವರು ಯಾರು? | 29 |
| –ದೇವರು ಎಲ್ಲಿರುತ್ತಾನೆ? | 32 |
| –ದೇವರನ್ನು ಸೇರುವುದು ಹೇಗೆ? | 38 |
| –ದೇವಾಲಯಗಳು ಏಕಿವೆ? | 44 |
| –ಪವಿತ್ರ ಸ್ನಾನಗಳು | 54 |
| –ಪ್ರದಕ್ಷಿಣೆಗಳು | 55 |
| –ಸಾಷ್ಟಾಂಗ ನಮಸ್ಕಾರ –ಶಠಗೋಪ | 56 |
| –ಪ್ರಸಾದ | 62 |
| –ಹುಂಡಿಯಲ್ಲಿ ಕಾಣಿಕೆಗಳು | 66 |
| –ಮುಡಿ ನೀಡುವುದು (ಕೂದಲು ಕೊಡುವುದು) | 68 |
| –ಅಖಂಡ ದೀಪ – ದೇವಸ್ಥಾನದ ಗಂಟೆ | 69 |
| –ಮಂತ್ರಪುಷ್ಪ – ಅದರ ಅರ್ಥ | 72 |

# ಶಾಸ್ತ್ರಗಳ ಅರ್ಥ- ಅಂತರಾರ್ಥ



ಲೋಕದಲ್ಲಿ ತುಂಬಾ ಶಾಸ್ತ್ರಗಳಿವೆ, ಸರಾಸರಿ ಎಲ್ಲರೂ ಶಾಸ್ತ್ರಗಳನ್ನು ಪ್ರಾಮಾಣಿಕವಾಗಿ ತೆಗೆದುಕೊಳ್ಳುತ್ತಾರೆ. ಯಾವುದೇ ಕೆಲಸವನ್ನಾದರೂ ಶಾಸ್ತ್ರ ಪ್ರಕಾರವೇ ಮಾಡುತ್ತಿರುತ್ತಾರೆ.

ಯಾರಾದರೂ ಯಾವ ಕೆಲಸ ವಾದರೂ ಮಾಡುವಾಗ ಹಿರಿಯರು ಶಾಸ್ತ್ರೋಕ್ತವಾಗಿ ಮಾಡುತ್ತಿದ್ದೀರಾ? ಶಾಸ್ತ್ರೋಕ್ತವಾಗಿ ಮಾಡಿ ಎಂದು ಹೇಳುತ್ತಿರುತ್ತಾರೆ. ಅಂದರೆ ಶಾಸ್ತ್ರಗಳಲ್ಲಿ ಹೇಗೆ ಇದ್ದರೆ, ಹಾಗೆ ಮಾಡಿ ಎಂದು ಹೇಳುತ್ತಿರುತ್ತಾರೆ. ಕೆಲವರು ಅವರಿಗೆ ಯಾವುದಾದರೂ, ಸಂದೇಹ ಬಂದಾಗ ಯಾವ ಕೆಲಸವಾದರೂ ಮಾಡಬೇಕೆಂದುಕೊಂಡಾಗ, ಬ್ರಾಹ್ಮಣರನ್ನು, ಪಂಡಿತರನ್ನು ಶಾಸ್ತ್ರಗಳಲ್ಲಿ ಏನಿದೆ? ಎಂದು ಕೇಳುತ್ತಾರೆ. ಆಗ ಅವರು ಪುಸ್ತಕಗಳನ್ನು  ನೋಡಿ ಏನು ಹೇಳಿದ್ದರೆ ಅದು ಮಾಡುತ್ತಾರೆ.

ಹಾಗೆ ಆಲಯವನ್ನು ನಿರ್ಮಿಸುವಾಗ, ಗೋಪುರಗಳನ್ನು ಕಟ್ಟುವಾಗ, ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡುವಾಗ ಹಾಗೆ ಆಲಯಕ್ಕೆ ಸಂಬಂಧಿಸಿದ ಯಾವುದೇ, ಕೆಲಸವನ್ನಾದರೂ, "ಆಗಮ ಶಾಸ್ತ್ರ" ಪ್ರಕಾರ ನಿರ್ಮಿಸುತ್ತಾರೆ. ಬದಲಾವಣೆಗಳು ತಿದ್ದುಪಡಿಗಳು ಕೂಡ ಮಾಡುತ್ತಿರುತ್ತಾರೆ.

ಹೀಗೆ ಹೇಳುತ್ತಾ ಹೋದರೆ ಶಾಸ್ತ್ರಗಳ ಪ್ರಾಮುಖ್ಯತೆ ಎಷ್ಟಾದರೂ ಕಾಣಿಸುತ್ತದೆ. ಎಲ್ಲರೂ ಹಾಗೆ ಶಾಸ್ತ್ರಗಳನ್ನು, ಪುರಾಣಗಳನ್ನು ಅನುಸರಿಸುತ್ತಿದ್ದಾರೆ. ಆದರೆ, ಅವುಗಳ ಕುರಿತು ಆಲೋಚಿಸುವವರು ಅಧ್ಯಯನ ಮಾಡುವವರು ತುಂಬಾ ಕಡಿಮೆ. ಆದರೆ ಅವುಗಳನ್ನು ಅನುಸರಿಸುವವರು ಯಾರಾದರೂ ಸರಿ ತಪ್ಪದೆ ಆಲೋಚಿಸಬೇಕು. ಏಕೆಂದರೆ, ನಿಜವಾಗಿಯೂ ಶಾಸ್ತ್ರಗಳು ಎಷ್ಟಿವೆ? ಈ ಶಾಸ್ತ್ರಗಳನ್ನು ಯಾರು ಬರೆದಿದ್ದಾರೆ? ಯಾವ ಸ್ಥಾಯಿಯಲ್ಲಿ ಬರೆದವರು ಇದ್ದರು? ಈ ಶಾಸ್ತ್ರವನ್ನು ಏಕೆ ಬರೆದಿದ್ದಾರೆ? ಏನನ್ನು ಆಶಿಸಿ ಬರೆದಿದ್ದಾರೆ? ಆ ಶಾಸ್ತ್ರದ ಮೂಲಕ ಪ್ರಜೆಗಳಿಗೆ, ಭವಿಷ್ಯದ ಪೀಳಿಗೆಗೆ ಏನು ಹೇಳಬೇಕೆಂದುಕೊಂಡಿದ್ದಾರೆ? ಆ ಶಾಸ್ತ್ರವನ್ನು ಅನುಸರಿಸಿದರೆ ಎಂತಹ ಫಲಗಳು ಬರುತ್ತವೆ? ಸಂವತ್ಸರಗಳ ಕಾಲ ಅವುಗಳನ್ನು ಅನುಸರಿಸುತ್ತಿರುವ ಅವರಿಗೆ ಅವರು ಆಶಿಸಿದ

ಫಲಗಳು ಬರುತ್ತಿವೆಯೇ? ಇಲ್ಲವೇ? ಆಶಿಸಿದ ಫಲಗಳು ಬರದಿದ್ದರೆ.... ಏಕೆ ಬರುತ್ತಿಲ್ಲ? ಅದಕ್ಕೆ ಕಾರಣವೇನು? ಹೀಗೆ ಎಷ್ಟೋ ವಿಷಯವಾಗಿ ಆಲೋಚಿಸಬೇಕು.

ಹಾಗೆಯೇ ಕಾಲಕ್ಕನುಗುಣವಾಗಿ ಈ ಶಾಸ್ತ್ರಗಳಲ್ಲಿ ಏನಾದರೂ ಬದಲಾವಣೆಗಳು ನಡೆದಿದೆವೆಯೇ? ಈ ಶಾಸ್ತ್ರಗಳನ್ನು ಬರೆದಾಗ ಅಂದಿನ ಪರಿಸ್ಥಿತಿಗಳು ಏನು? ಆಗ ಸಮಾಜ ಹೇಗಿತ್ತು? ಅಂದಿನ ಮಾನವರ ಜೀವನ ವಿಧಾನ ಹೇಗೆ ಇತ್ತು? ಅಂದಿನ ಪರಿಸ್ಥಿತಿಗಳು, ಇಂದಿನ ಪರಿಸ್ಥಿತಿಗಳು ಒಂದೇ ವಿಧವಾಗಿ ಇದ್ದಾವೆಯೇ!? ಅಥವಾ ಏನಾದರೂ ಬದಲಾವಣೆ ಬಂದಿದೆಯೇ? ಆ ಪರಿಸ್ಥಿತಿಗಳಲ್ಲಿ ಬರೆದ ಶಾಸ್ತ್ರ ಇಂದಿನ ಪರಿಸ್ಥಿತಿಗಳಿಗೆ ಸರಿ ಹೊಂದುವುದೇ? ಇಂದಿನ ಮಾನವರ ಜೀವನ ವಿಧಾನಕ್ಕೆ ಅನುಗುಣವಾಗಿ ಇದೆಯೇ? ಎಲ್ಲಾ ಬದಲಾಗುತ್ತಿರುವಾಗ, ಶಾಸ್ತ್ರಗಳಲ್ಲಿ ಕೂಡಾ ಬದಲಾವಣೆ ಅವಶ್ಯವೇ? ಇಂತಹ ವಿಷಯಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯ, ಆಲೋಚಿಸಬೇಕಾದ ಅಗತ್ಯ ಎಷ್ಟೋ ಇದೆ.

ಏಕೆಂದರೆ ಈ ಶಾಸ್ತ್ರಗಳನ್ನು ಬರೆದವರು ವಿವಿಧ ಸ್ಥಾಯಿಯಲ್ಲಿರುವವರು ಆಗಿರುತ್ತಾರೆ. ಯಾರ ಸ್ಥಾಯಿ ಅನುಸಾರ ಅವರು ಬರೆಯುತ್ತಾ ಇರುತ್ತಾರೆ. ಹಾಗೆಯೇ ತಪಸ್ಸಂಪನ್ನರಾದ ಋಷಿಗಳು, ಯೋಗಿಗಳು ಬರೆದ ಶಾಸ್ತ್ರಗಳು ತುಂಬಾ ಅತ್ಯುನ್ನತವಾಗಿ ಇರುತ್ತವೆ. ಅವುಗಳನ್ನು ಸಾಮಾನ್ಯ ಸ್ಥಿತಿಯಲ್ಲಿರುವವರು, ಪಂಡಿತರು ಅರ್ಥ ಮಾಡಿಕೊಳ್ಳಬಲ್ಲರೇ? ಅಂದರೆ ಖಂಡಿತವಾಗಿ ಅರ್ಥ ಮಾಡಿಕೊಳ್ಳಲಾರರು ಎಂದೇ ಹೇಳಬಹುದು. ಆದ್ದರಿಂದ ಶಾಸ್ತ್ರಗಳ ಕುರಿತು ಹೇಳುವವರು, ಬೋಧಿಸುವವರು ಕೂಡ ಅವರ ಸ್ಥಾಯಿಯ ಅನುಸಾರ ಅವರು ಅರ್ಥ ಮಾಡಿಕೊಂಡಿರುವಷ್ಟರವರೆಗೆ ವಿವರಿಸುತ್ತಾರೆ, ಬೋಧಿಸುತ್ತಾರೆ. ಏಕೆಂದರೆ, ಅಂತಹ ಯೋಗಿಗಳು ಯಾವ ಅರ್ಥದೊಂದಿಗೆ ಹೇಳಿದ್ದಾರೋ! ಯಾವ ಉದ್ದೇಶದೊಂದಿಗೆ ಹೇಳಿದ್ದಾರೋ! ಇವರಿಗೆ ತಿಳಿದಿರುವುದಿಲ್ಲ ಅಲ್ಲವೇ? ಇವರು ಎಷ್ಟು ಹೊತ್ತೂ ತಮಗೆ ಅರ್ಥವಾದಷ್ಟರವರೆಗೆ ಹೇಳಬಲ್ಲರು. ಅವರು ಹೇಳಿದ್ದು ಇದೇ ಎಂದು ಹೇಳಲು ಇವರು ಸರಿಹೋಗುವುದಿಲ್ಲ. ಕಾರಣ ಇವರಿಗೆ ಅಷ್ಟು ಮಾತ್ರವೇ ಅರ್ಥವಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ನೋಡಿ ಶ್ರೀ ಕೃಷ್ಣಪರಮಾತ್ಮನನ್ನು ತೆಗೆದುಕೊಂಡರೆ, ಆತ ದೊಡ್ಡ ಯೋಗೀಶ್ವರ. ಆತ ಬೋಧಿಸಿದ ಗೀತೆಯನ್ನು ತೆಗೆದುಕೊಳ್ಳೋಣ... ಭಗವದ್ಗೀತೆಗೆ ಯಾರಿಗೆ ಅವರೇ ಎಷ್ಟೋ ವಿಧವಾಗಿ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಗಮನಿಸಿದರೆ ಒಬ್ಬರು ಮಾಡಿದ ವ್ಯಾಖ್ಯಾನಕ್ಕೆ, ಇನ್ನೊಬ್ಬರು ಮಾಡಿದ ವ್ಯಾಖ್ಯಾನಕ್ಕೆ ಖಂಡಿತವಾಗಿ ವ್ಯತ್ಯಾಸ ಇದ್ದೇ ಇರುತ್ತದೆ. ಕೆಲವರು ಮಾಡುವ ವ್ಯಾಖ್ಯಾನಗಳಿಗೆ ಅಸಲು ಸಂಬಂಧವೇ ಇರುವುದಿಲ್ಲ. ಆಲೋಚಿಸಿ, ಎಲ್ಲರೂ ಒಂದೇ ವಿಧವಾದ ಅರ್ಥ ಹೇಳಿದರೆ ವಿವರಣೆ ನೀಡಿದರೆ ವ್ಯಾಖ್ಯಾನ ಮಾಡಿದರೆ

ಇಷ್ಟು ವಿಧದ ಭಗವದ್ಗೀತೆಗಳು ಅಗತ್ಯವಿದೆಯೇ? ಯಾರೋ ಒಬ್ಬರು ಬರೆದಿರುವುದೇ ಎಲ್ಲರೂ ಅನುಸರಿಸುತ್ತಿದ್ದರು ಅಲ್ಲವೇ? ಮತ್ತೆ ಒಬ್ಬೊಬ್ಬರು ಪ್ರತ್ಯೇಕವಾಗಿ ಬರೆಯಬೇಕಾದ ಅಗತ್ಯವೇನಿದೆ?

ಸ್ವಲ್ಪ ಆಲೋಚಿಸಿ, ಈ ಮಧ್ಯೆ ರಷ್ಯಾದಲ್ಲಿ ಕೆಲವರು ಭಗವದ್ಗೀತೆಯನ್ನು ಓದಿ ಶ್ರೀ ಕೃಷ್ಣ ಭಗವಾನನನ್ನು ಭಯೋತ್ಪಾದಕನನ್ನಾಗಿ ಹೆಸರಿಸಿದ್ದಾರೆ!! ಆತ ಹಿಂಸೆಯನ್ನು ಪ್ರೋತ್ಸಾಹಿಸಿದ, ಆದ್ದರಿಂದ ಭಗವದ್ಗೀತೆಯನ್ನು ಬಹಿಷ್ಕರಿಸಬೇಕು ಎಂದು ಕೋರ್ಟಿಗೆ ಹೋಗಲಾಯಿತು. ಅದರ ಮೇಲೆ ಯಾರಿಗವರು ವಿಧವಿಧವಾದ ವ್ಯಾಖ್ಯಾನಗಳನ್ನು ಮಾಡಿದರು. ಹಾಗಾದರೆ ನಿಜವಾಗಿ ಭಗವಾನ್ ಶ್ರೀ ಕೃಷ್ಣ ಹಿಂಸೆಯನ್ನು ಪ್ರೋತ್ಸಾಹಿಸಿದನೇ? ಧರ್ಮವನ್ನು ರಕ್ಷಿಸುವ ಪ್ರಯತ್ನ ಮಾಡಿದನೇ? ಅಂದರೆ, ಜನರು ಯಾರಿಗೆ ಅವರು ಸ್ಥಾಯಿಯ ಅನುಸಾರ ಅರ್ಥಮಾಡಿಕೊಂಡಿದ್ದಾರೆಂದು ಹೇಳಬಹುದು. ಯಾರಿಗೆ ಅವರೇ ತಮ್ಮದೇ ಸರಿ ಎಂದು ಹೇಳುವವರು ಇರುತ್ತಾರೆ ಇಷ್ಟಕ್ಕೂ, ಯಾರು ಸರಿ ಅಂದರೆ, ಯಾರಿಗೆ ಎಷ್ಟು ಅರ್ಥವಾದರೆ ಅದೇ ಸರಿ ಎಂದು ಅನ್ನುವುದು ಲೋಕದಲ್ಲಿ ಅಭ್ಯಾಸವಾಗಿದೆ. ಅವರಿಗೆ ಅವರೇ, ತಾವು ಹೇಳಿದ್ದೇ ಸರಿ, ತನಗೆ ತಿಳಿದಿರುವುದೇ ಸರಿ, ತಾನು ಮಾಡುವುದೇ ಸರಿ ಎಂದು ಹೇಳುತ್ತಿರುತ್ತಾರೆ.

ಆಲೋಚಿಸಿ, ತಾನು ಹೇಳುವುದೇ, ತಾನು ಮಾಡೋದೇ ಸರಿ ಎಂದಾದರೆ, ಇತರರು ಏಕೆ ಅಂಗೀಕರಿಸುತ್ತಿಲ್ಲ? ಇಷ್ಟಕ್ಕೂ ಯಾವುದು ಸರಿ? ಅಂದರೆ, ಯಾರ ಸ್ಥಾಯಿಯ ಅನುಸಾರ ಅವರಿಗೆ ಅದು ಸರಿ... ಆದರೆ ಅವರ ಸ್ಥಾಯಿ ಬದಲಾದಾಗ ಮತ್ತೆ ಅವರ ಅಭಿಪ್ರಾಯವೂ ಬದಲಾಗುತ್ತದೆ.

ಏಕೆಂದರೆ ಲೋಕದಲ್ಲಿರುವ ಮಾನವರೆಲ್ಲರೂ ಒಂದೇ ಸ್ಥಾಯಿಯಲ್ಲಿ ಇರುವುದಿಲ್ಲ. ಒಬ್ಬೊಬರೂ ಒಂದೊಂದು ಸ್ಥಾಯಿಯಲ್ಲಿ ಇರುತ್ತಾರೆ. ಏಕೆಂದರೆ ಮಾನವರಲ್ಲಿ 'ದೇಹ' ಸ್ಥಿತಿಯಲ್ಲಿರುವವರು, 'ಮನಸ್ಥಿತಿ'ಯಲ್ಲಿ ಇರುವವರು, 'ಬುದ್ಧಿ' ಸ್ಥಿತಿಯಲ್ಲಿ ಇರುವವರು ಇರುತ್ತಾರೆ. ಆತ್ಮಸ್ಥಿತಿಯಲ್ಲಿರುವವರೂ ಇದ್ದಾರೆ. ಆದ್ದರಿಂದ ದೇಹ ಸ್ಥಿತಿಯಲ್ಲಿ ಇರುವವರ ಕೆಲಸಗಳು, ಆತ್ಮ ಸ್ಥಿತಿಯಲ್ಲಿ ಇರುವವರ ಕೆಲಸಗಳು ಒಂದೇ ರೀತಿ ಇರುವುದಿಲ್ಲ. ಹಾಗೆ ಬುದ್ಧಿ ಸ್ಥಿತಿಯಲ್ಲಿರುವವರ ಕೆಲಸಗಳು, ಮನೋಸ್ಥಿತಿಯಲ್ಲಿರುವವರ ಕೆಲಸಗಳು ತಿಳುವಳಿಕೆ ಒಂದೇ ವಿಧವಾಗಿ ಇರುವುದಿಲ್ಲ.

ಏಕೆಂದರೆ ಮಾನವರನ್ನು ಶರೀರ ಪರವಾಗಿ ನೋಡಿದರೆ ಒಂದೇ ವಿಧವಾಗಿ ಇರುತ್ತಾರೆ. ಆದರೆ ಮನಸ್ಥಿತಿಯಲ್ಲಿ ತುಂಬಾ ವ್ಯತ್ಯಾಸ ಇರುತ್ತದೆ. ಮಾನವನ ವರ್ತನೆ ತಿಳುವಳಿಕೆಯು, ಮನಸ್ಸಿನ ಅನುಸಾರವಾಗಿಯೇ ಇರುತ್ತದೆ. ಈ ವಿಷಯವನ್ನೇ

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನನು ಹೇಳಿದ್ದಾನೆ. ಆತನು ಏನು ಹೇಳಿದ್ದಾನೆಂದರೆ ಲೋಕದಲ್ಲಿ ಮಾನವರು ನಾಲ್ಕು ವಿಧದ ಗುಣಗಳೊಂದಿಗೆ ಇರುತ್ತಾರೆ. ಅವು 1. ತಮೋಗುಣ, 2. ರಜೋಗುಣ, 3. ಸಾತ್ವಿಕಗುಣ, 4. ನಿರ್ಗುಣ

ಆದ್ದರಿಂದ ಯಾರಾದರೂ ಸರಿ ಅವರ ಗುಣದ ಅನುಸಾರ ಅರ್ಥ ಮಾಡಿಕೊಳ್ಳುತ್ತಾರೆ. ಅವರ ತಿಳುವಳಿಕೆಯ ಅನುಸಾರ ಅವನ ವರ್ತನೆ ಇರುತ್ತದೆ. ಆದ್ದರಿಂದ ಅವನು ಹಾಗೆ ಏಕೆ ವರ್ತಿಸುತ್ತಿದ್ದಾನೆ? ಎಂದು ಇನ್ನೊಬ್ಬರು ಪ್ರಶ್ನಿಸುವುದಕ್ಕೆ, ಅಂದುಕೊಳ್ಳುವುದಕ್ಕೆ ಸರಿ ಹೋಗರು. ಕಾರಣ ಅವರ ಗುಣದ ಅನುಸಾರ ಅವರ ಸ್ಥಾಯಿಯ ಅನುಸಾರ ಅವರು ವರ್ತಿಸುತ್ತಾರೆ. ಅದಕ್ಕೆ ಬ್ರಹ್ಮರ್ಷಿ ಪತ್ರೀಜಿ ಯಾರನ್ನು ವಿಮರ್ಶಿಸಬಾರದು, ಯಾರ ಕುರಿತು ನಿರ್ಣಯಿಸಬಾರದು ಎನ್ನುತ್ತಾರೆ.

ನಮಗೆ ರಾಮಾಯಣದಲ್ಲಿಯೂ, ಈ ನಾಲ್ಕು ವಿಧದ ಗುಣಗಳನ್ನು ಹೊಂದಿದವರು ಕಾಣಿಸುತ್ತಾರೆ. ಗಮನಿಸಿದರೆ ತಮೋ ಗುಣದಲ್ಲಿ ಕುಂಭಕರ್ಣ, ರಜೋಗುಣದಲ್ಲಿ ರಾವಣಾಸುರ, ಸಾತ್ವಿಕ ಗುಣದಲ್ಲಿ ವಿಭೀಷಣ, ನಿರ್ಗುಣ ಸ್ಥಿತಿಯಲ್ಲಿ ಶ್ರೀರಾಮಚಂದ್ರನು ನಮಗೆ ಕಾಣಿಸುತ್ತಾರೆ. ಹಾಗೆ ಒಬ್ಬರ ವರ್ತನೆಗೆ ಮತ್ತೊಬ್ಬರ ವರ್ತನೆಗೂ ಸಂಬಂಧವಿರುವುದಿಲ್ಲ. ಅದಕ್ಕೆ ಕಾರಣ ಅವರ ಗುಣಗಳೇ... ಕುಂಭಕರ್ಣನು ರಾಮನಂತೆ ಏಕಿಲ್ಲ? ಅಂದರೆ ಯಾರೇನು ಹೇಳಬಲ್ಲರು? ವಿಭೀಷಣನಂತೆ ಏಕೆ ಆಲೋಚಿಸುವುದಿಲ್ಲ? ಎಂದರೆ, ಯಾರೇನು ಹೇಳಬಲ್ಲರು?

ಏಕೆಂದರೆ ಪ್ರತಿ ವಿಷಯವನ್ನು ದೇಹಕ್ಕೆ ಅನ್ವಯಿಸಿಕೊಳ್ಳಬಹುದು, ಆತ್ಮಕ್ಕೆ ಅನ್ವಯಿಸಿಕೊಳ್ಳಬಹುದು. ದೇಹಕ್ಕೆ ಅನ್ವಯಿಸಿಕೊಂಡರೆ ಒಂದು ವಿಧವಾದ ಅರ್ಥ ಬರುತ್ತದೆ. ಆತ್ಮಕ್ಕೆ ಅನ್ವಯಿಸಿಕೊಂಡರೆ, ಇನ್ನೊಂದು ವಿಧವಾದ ಅರ್ಥ ಬರುತ್ತದೆ.

ಉದಾಹರಣೆಗೆ ಶ್ರೀಕೃಷ್ಣ ಭಗವಾನನು ನನ್ನನ್ನು ಆಶ್ರಯಿಸು ಎಂದು ಹೇಳಿರುವ ಮಾತಿಗೆ, ಆತನನ್ನು ದೇಹವಾಗಿ ಅರ್ಥಮಾಡಿಕೊಂಡವರು ವಿಗ್ರಹವನ್ನು ಆಶ್ರಯಿಸುತ್ತಾರೆ. ಪೂಜೆಗಳನ್ನು ಮಾಡುತ್ತಾರೆ. ಅದೇ ಆತನನ್ನು 'ಆತ್ಮ'ವಾಗಿ ಅರ್ಥ ಮಾಡಿಕೊಂಡವರು ಆತ್ಮವನ್ನು ಆಶ್ರಯಿಸುತ್ತಾರೆ. ಧ್ಯಾನ ಮಾಡುತ್ತಾರೆ. ಶ್ರೀಕೃಷ್ಣ ಭಗವಾನನು ಹೇಳಿದ ಒಂದೇ ಮಾತಿಗೆ ವಿಧವಿಧವಾದ ಅರ್ಥಗಳನ್ನು ತೆಗೆದುಕೊಳ್ಳಬಹುದು. ತೆಗೆದುಕೊಳ್ಳುತ್ತಿದ್ದಾರೆ ಕೂಡಾ. ಆದರೆ ಶ್ರೀ ಕೃಷ್ಣ ಭಗವಾನನು ಇರುವುದು ಆತ್ಮ ಸ್ಥಿತಿಯಲ್ಲಿಯೇ, ಹೇಳಿದ್ದೂ ಆತ್ಮ ಸ್ಥಿತಿಯಲ್ಲಿಯೇ.

ಹಾಗೆ ಈ ಶಾಸ್ತ್ರಗಳನ್ನೂ, ಅವರವರ ಸ್ಥಾಯಿ ಅನುಸಾರ ವಿಧವಿಧವಾದ ಅರ್ಥಗಳು ಹೇಳುವವರು ಇದ್ದಾರೆ. ಅದರಿಂದ ಈ ಶಾಸ್ತ್ರಗಳ ಅರ್ಥ – ಅಂತರಾರ್ಥವನ್ನು ವಿಶ್ಲೇಷಿಕೊಳ್ಳೋಣ.

# ಪುಣ್ಯವೆಂದರೆ ?

ಶಾಸ್ತ್ರಗಳಲ್ಲಿ 'ಪುಣ್ಯ' ಎನ್ನುವ ಪದ ಹೆಚ್ಚಾಗಿ ಕಾಣಿಸುತ್ತದೆ. ಹಿರಿಯರು, ಪಂಡಿತರು, ಗುರುಗಳು ಲೋಕಕ್ಕೆ ಎಷ್ಟೋ ವಿಷಯಗಳ ಬೋಧಿಸಿ ಆ ಕೆಲಸಗಳನ್ನು ಮಾಡಿ ನಿಮಗೆ 'ಪುಣ್ಯ' ಬರುತ್ತದೆ. ಅಥವಾ ಈ ಕೆಲಸಗಳನ್ನು ಮಾಡಿ 'ಪುಣ್ಯ' ಬರುತ್ತದೆ ಎನ್ನುತ್ತಾರೆ. ಶಾಸ್ತ್ರಗಳನ್ನು ಓದಿ, ಬೋಧಿಸುವವರು ಕೂಡಾ ಹಾಗೆ ಹೇಳುತ್ತಾ ಇರುತ್ತಾರೆ. ಒಳಿತನ್ನು ಮಾಡಿ, ಪುಣ್ಯ ಕಾರ್ಯಗಳನ್ನು ಮಾಡಿ, ಆರಾಧನೆಗಳನ್ನು ಮಾಡಿ, ಸೇವೆಗಳನ್ನು ಮಾಡಿ ನಿಮಗೆ ಪುಣ್ಯ ಬರುತ್ತದೆ ಎಂದು ಹೇಳುತ್ತಿರುತ್ತಾರೆ.

ಯಾರಿಗಾದರೂ 'ಪುಣ್ಯ' ಎನ್ನುವ ಪದ ಎಂದ ಕೂಡಲೇ ಆ ಕೆಲಸ ಮಾಡಬೇಕು ಎನಿಸುತ್ತದೆ. ಪುಣ್ಯ ಬರುತ್ತದೆ ಎಂದರೆ ಆ ಕೆಲಸ ಮಾಡಲು ಯಾರಾದರೂ ಸರಿಯೇ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಾರೆ. ಹಾಗೇ, ಪುಣ್ಯ ಬರುತ್ತದೆ ಎಂದು ಮಾಡುವ ಕೆಲಸಗಳು ತುಂಬಾ ಇವೆ. ಹಾಗೆ ಎಲ್ಲರೂ ಪುಣ್ಯ ಎನ್ನುವ ಪದ ಕೇಳಿದ ಕೂಡಲೇ ಆ ಕೆಲಸ ಮಾಡುತ್ತಿರುತ್ತಾರೆ. ಆದರೆ ಅದಕ್ಕಿಂತ ಮುಂದೆ ಆಲೋಚಿಸುತ್ತಿಲ್ಲ.... ಆದರೆ ಆಲೋಚಿಸಬೇಕಾದ ಅಗತ್ಯ ಎಷ್ಟೋ ಇದೆ.

ನಿಜಕ್ಕೂ 'ಪುಣ್ಯ' ಎಂದರೇನು? ಪುಣ್ಯ ಮಾಡಿದರೆ ಏನು ಬರುತ್ತದೆ? ಯಾವಾಗ ಬರುತ್ತದೆ? ಎಷ್ಟು ಬರುತ್ತದೆ? ಎಂದು ಯಾರೂ ಯೋಚಿಸುತ್ತಿಲ್ಲ. ಆದರೆ ಎಲ್ಲರಿಗೂ ಇರುವ ನಂಬಿಕೆ ಏನೆಂದರೆ, ಪುಣ್ಯ ಮಾಡಿದರೆ ಏನು ಜರುಗುವುದೋ ತಿಳಿಯದು. ಆದರೆ ಏನೋ ಒಂದು ಒಳ್ಳೆಯದು ನಡೆಯುತ್ತದೆ ಎಂದು ನಂಬುತ್ತಾರೆ. ಅಷ್ಟೇ ಅಲ್ಲ ಅಂತಹ ಕೆಲಸಗಳು ಮಾಡುತ್ತಾ ಇದ್ದರೆ ಪುಣ್ಯ ಹೆಚ್ಚುತ್ತದೆ ಎಂದು, ಅದರಿಂದ ಜೀವನದಲ್ಲಿ ಧನವಂತರಾಗಬಹುದೆಂದು, ದೊಡ್ಡವ್ಯಕ್ತಿ ಆಗಬಹುದು ಎಂದು, ಕೋರಿಕೆಗಳು ನೆರವೇರುವವು ಎಂದು, ಕಷ್ಟಗಳೆಲ್ಲವೂ ಹೋಗುತ್ತವೆ ಎಂದು ಭಾವಿಸುತ್ತಾರೆ. ಪಾಪಗಳು ಸಹಾ ಹೋಗುವುವು ಎಂದು ಭಾವಿಸುವವರೂ ಇದ್ದಾರೆ. ಹಾಗೆ ಯಾರಿಗೆ ಬೇಕಾದ ಲಾಭವನ್ನು ಊಹಿಸಿಕೊಂಡು ಪುಣ್ಯ ಎಂದ ಕೂಡಲೇ ಆ ಕೆಲಸ ಮಾಡುತ್ತಿದ್ದಾರೆ. ಹಾಗೆ ಮಾಡುತ್ತಿದ್ದಾರೆಯೇ, ಹೊರತು ಅದಕ್ಕಿಂತ ಹೆಚ್ಚು ಆಲೋಚಿಸುತ್ತಿಲ್ಲ.

ಏಕೆಂದರೆ 'ಪುಣ್ಯ' ಎಂದರೆ ಏನು ತಿಳಿದುಕೊಳ್ಳದೆ ಆ ಕೆಲಸ ಮಾಡಿದರೆ ಏನು ಬರುತ್ತದೆ ಎಂದು ತಿಳಿದುಕೊಳ್ಳದೆ, ಆ ಕೆಲಸವನ್ನು ಜೀವನ ಪರ್ಯಂತ ಮಾಡಿದರೆ ಒಂದು ವಿಧವಾಗಿ ಜೀವನದಲ್ಲಿ ನಿರಾಶೆಯೇ ಉಳಿಯುತ್ತದೆ. ಕಾರಣ ಇವರು ಆಶಿಸುವುದು, ಬಯಸುವುದು ಒಂದು, ಇವರು ಮಾಡಿರುವುದರಿಂದ ಬರುವ ಫಲವು ಇನ್ನೊಂದು ಆಗಬಹುದು. ಆಗ ಇವರು ಕೋರಿಕೊಂಡಿರುವುದು ಬರುವುದಿಲ್ಲವಲ್ಲ? ಆಶಿಸಿದ್ದು

ನಡೆಯುವುದಿಲ್ಲವಲ್ಲಾ? ಕೊನೆಗೆ ನಿರಾಶೆಯೇ ಉಳಿಯುತ್ತದೆ. ಆದ್ದರಿಂದ ಯಾವ ಕೆಲಸವನ್ನಾದರೂ ತಿಳಿವಳಿಕೆಯೊಂದಿಗೆ ಮಾಡಬೇಕು. ಕುರುಡುತನದಿಂದ ಮಾಡಬಾರದು ಅದರಿಂದ ಪುಣ್ಯ ಎಂದು ಮಾಡುವ ಕೆಲಸಗಳ ಕುರಿತು ಸ್ವಲ್ಪ ಆಲೋಚಿಸೋಣ. ಪುಣ್ಯದ ಕುರಿತು ಕೂಡಾ ಸ್ವಲ್ಪ ತಿಳಿದುಕೊಳ್ಳೋಣ.

ನೆನಪಿಟ್ಟುಕೊಳ್ಳಿ 'ಪುಣ್ಯ' ಎಂದರೆ ಯಾವುದೋ ಒಂದು ಮೂಟೆಯ ಮೇಲೆ ಎಲ್ಲೋ ಬೆಳೆಯುವುದಲ್ಲ. ಪುಣ್ಯ ಅಂದರೆ ನಮಗೆ ಆಗುವ ಒಳಿತು, ನಮಗೆ ಉಂಟಾಗುವ ಲಾಭ. ಅಂದರೆ ನಮ್ಮ ಜೀವನದಲ್ಲಿ ನಮಗೆ ನಡೆಯುವ ಒಳಿತನ್ನು ನಮಗೆ ಉಂಟಾಗುವ ಲಾಭವನ್ನು ಪುಣ್ಯ ಎನ್ನುತ್ತಾರೆ. ಅಂದರೆ, ಯಾವ ಕೆಲಸ ಮಾಡುವುದರಿಂದ ನಮ್ಮ ಜೀವನದಲ್ಲಿ ಒಳಿತಾಗುವುದೋ! ಲಾಭ ಉಂಟಾಗುವುದೋ! ಆ ಕೆಲಸವನ್ನು ಪುಣ್ಯಕಾರ್ಯ ಎನ್ನುತ್ತಾರೆ. ಅವುಗಳನ್ನೇ ಒಳ್ಳೆಯ ಕೆಲಸಗಳು ಎನ್ನುತ್ತಾರೆ, ಸತ್ಕರ್ಮಗಳು ಎನ್ನುತ್ತಾರೆ. ಒಂದು ವಿಧವಾಗಿ ಸೇವಾ ಕಾರ್ಯಗಳೆಲ್ಲವೂ ಕೂಡ ಪುಣ್ಯಕಾರ್ಯಗಳೇ.

ಆದರೆ ಇಲ್ಲಿಯೇ ಆಲೋಚಿಸಬೇಕು. ಪುಣ್ಯ ಮಾಡಿದರೆ ಒಳ್ಳೆಯ ಫಲಿತವೇ ಬರುತ್ತದೆ.. ಲಾಭವೇ ಬರುತ್ತದೆ. ಆದರೆ ಎಲ್ಲಾ ವಿಧದ ಪುಣ್ಯಕಾರ್ಯಗಳಿಗೆ ಒಂದೇ ವಿಧವಾದ ಒಳಿತಾಗುವುದಿಲ್ಲ. ಫಲವು ಬರುವುದಿಲ್ಲ, ಲಾಭವೂ ಬರುವುದಿಲ್ಲ. ಎಂತಹ ಕಾರ್ಯ ಮಾಡುವೆವೋ, ಅಂತಹ ಫಲವನ್ನೇ ಹೊಂದುವೆವು. ಅಂದರೆ, ಮಾಡುವ ಕೆಲಸದ ಅನುಸಾರ ಬರುವ ಲಾಭವು ಆಧಾರವಾಗಿರುತ್ತದೆ. ಇದೇ ನಾವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅಷ್ಟೇ ಹೊರತು ಪುಣ್ಯ ಎಂದ ಕೂಡಲೇ ಏನೇನೋ ಮಾಡಿ ಏನೇನೋ ಆಶಿಸಿದರೆ, ಆಶಿಸಿದ ಫಲಿತ ಬರದೇ ಕೊನೆಗೆ ನಿರಾಶೆಯೇ ಉಳಿಯುತ್ತದೆ. ಮಾಡಿದ್ದು ವ್ಯರ್ಥವಾಗುತ್ತದೆ. ಮತ್ತೊಮ್ಮೆ ನೆನಪಿರಲಿ, ಎಂತಹ ಪುಣ್ಯ ಮಾಡಿದರೆ ಅಂತಹ ಲಾಭವೇ ಬರುತ್ತದೆ.

ಪುಣ್ಯದ ಕುರಿತು ತುಂಬಾ ಜನರಿಗೆ ಇರುವ ನಂಬಿಕೆ ಏನೆಂದರೆ, ಈ ಪುಣ್ಯ ಎನ್ನುವುದು ಯಾವಾಗಲೂ ಸತ್ತ ನಂತರ ನಮ್ಮ ಖಾತೆಯಲ್ಲಿ ಬರುತ್ತದೆ, ನಂತರ ಜನ್ಮದಲ್ಲಿ ಅನುಭವಿಸುತ್ತೇವೆ ಎಂದುಕೊಳ್ಳುತ್ತಾರೆ. ಆದರೆ ಪುಣ್ಯವಾದರೂ, ಪಾಪವಾದರೂ (ಪಾಪವೆಂದರೆ ನಮಗೆ ಉಂಟಾಗುವ ಕೆಡಕು, ನಮಗೆ ಆಗುವ ನಷ್ಟ) ಈ ಜನ್ಮದಲ್ಲಿ ಇಲ್ಲಿಯೇ ಅನುಭವಿಸುತ್ತೇವೆ. ಒಂದು ಸ್ವಲ್ಪ ಭಾಗ ಮಾತ್ರ ನಂತರದ ಜನ್ಮಕ್ಕೆ ಅನ್ವಯಿಸುತ್ತದೆ. ಸ್ವಲ್ಪ ಗಮನಿಸಿದರೆ ನಾವು ಮಾಡಿದವುಗಳ ಫಲವನ್ನು ಇಲ್ಲಿಯೇ! ಒಂದೊಂದು ಸಾರಿ ಕೂಡಲೇ ಅನುಭವಿಸುತ್ತೇವೆ ಎಂದು ತಿಳಿಯುತ್ತದೆ. ಆದ್ದರಿಂದ ಮೊದಲು ನಮಗೆ ಬೇಕಾದ ಫಲವೇನು? ಆ ಫಲವನ್ನು ಹೊಂದಬೇಕೆಂದರೆ, ಎಂತಹ ಪುಣ್ಯಕಾರ್ಯ...ಅಂದರೆ ಯಾವ ಕೆಲಸ ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕು. ಆ ಕೆಲಸವನ್ನೇ ಮಾಡಬೇಕು. ಇಲ್ಲದಿದ್ದರೆ ಮಾಡಿದ್ದು ವ್ಯರ್ಥ. ಕಾರಣ ಬೇಕಾದದ್ದು ಒಂದು, ಮಾಡಿದ್ದು ಮತ್ತೊಂದು ಆಗಿರುತ್ತದೆ. ಆದ್ದರಿಂದ ಎಂತಹ ಪುಣ್ಯ ಮಾಡಿದರೆ ಜೀವನದಲ್ಲಿ ಎಂತಹ ಲಾಭಗಳು ಉಂಟಾಗುತ್ತವೆ ಎಂದು ಒಮ್ಮೆ ನೋಡೋಣ.

# ಉಪವಾಸ

ಕೆಲವು ಹಿರಿಯರು, ಪಂಡಿತರು ಉಪವಾಸ ಇದ್ದರೆ ಪುಣ್ಯ ಬರುತ್ತದೆ ಎಂದು ಹೇಳುತ್ತಾರೆ. ಶಿವರಾತ್ರಿಯಂತಹ ವಿಶೇಷ ದಿನಗಳಲ್ಲಿ ಉಪವಾಸ ಇರಿ ಎಂದು ಹೇಳುತ್ತಾರೆ. ಹಾಗೆ ವಿಶೇಷ ದಿನಗಳಲ್ಲಿ ಉಪವಾಸವಿದ್ದರೆ, ದೇವರ ದೃಷ್ಟಿಯನ್ನು ಆಕರ್ಷಿಸಬಹುದೆಂದು ಕೂಡ ಹೇಳುತ್ತಾರೆ.

ಉಪವಾಸದ ಮೇಲೆ ಹೆಚ್ಚು ಆಸಕ್ತಿ ಇರುವವರು, ಪ್ರತಿ ಏಕಾದಶಿಗೆ ಉಪವಾಸವಿರುತ್ತಾರೆ. ಇನ್ನು ಇರಬಲ್ಲವರು ಪ್ರತಿ ಶನಿವಾರ ಉಪವಾಸ ಇರುತ್ತಾರೆ. ಹಾಗೆ ಇದ್ದರೆ ಇನ್ನೂ ಹೆಚ್ಚು ಪುಣ್ಯ ಬರುತ್ತದೆ ಎಂದು ಭಾವಿಸುತ್ತಾರೆ. ಹಾಗೆ ಕೊನೆಗೆ ಯಾರ ಶಕ್ತಿಯ ಮೇರೆಗೆ ಅವರು ಉಪವಾಸ ಇರುತ್ತಿದ್ದಾರೆ. ಆದರೆ ಅದಕ್ಕಿಂತ ಹೆಚ್ಚು ಆಲೋಚಿಸುತ್ತಿಲ್ಲ. ಆದರೆ ಉಪವಾಸವೆಂದರೆ ಬರುವ ಪುಣ್ಯವೇನು? ಲಾಭವೇನು? ಎನ್ನುವುದನ್ನು ತಿಳಿದುಕೊಳ್ಳಬೇಕು.

ಮೊದಲು ಉಪಾಸವೆಂದರೆ ಏನೆಂದು ನೋಡೋಣ. ಉಪವಾಸವೆಂದರೆ ಹೊಟ್ಟೆಗೆ, ಅಂದರೆ ಜೀರ್ಣಕೋಶಕ್ಕೆ ಪೂರ್ತಿಯಾಗಿ ವಿಶ್ರಾಂತಿ ನೀಡುವುದು. ಅಂದರೆ ಆ ದಿನ ಹೊಟ್ಟೆಯಲ್ಲಿ ಏನು ಹಾಕದಿರುವುದು ಅಂದರೆ, ಏನು ತಿನ್ನದಿರುವುದು ಇದನ್ನೇ ಉಪವಾಸ ಎನ್ನುತ್ತಾರೆ. ಆದರೆ ಕಾಲಕ್ರಮೇಣ ಉಪವಾಸಕ್ಕೆ ಯಾರಿಗೆ ಅವರು ಇಷ್ಟವಾದ ರೀತಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಏಕೆಂದರೆ ಕೆಲವರು ಉಪವಾಸವೆಂದು ನೀರನ್ನು ಸಹಾ ಕುಡಿಯದಂತೆ ಕಠಿಣವಾಗಿ ಆಚರಿಸುತ್ತಾರೆ. ಕೆಲವರು ನೀರು ಬಿಟ್ಟು ಮತ್ತೇನು ತೆಗೆದುಕೊಳ್ಳುವುದಿಲ್ಲ. ಇನ್ನೂ ಕೆಲವರು ಉಪವಾಸವೆಂದು ದ್ರವಾಹಾರ ಮಾತ್ರವೇ... ಅಂದರೆ ಹಾಲು, ಮಜ್ಜಿಗೆ, ಹಣ್ಣಿನ ರಸಗಳು ಇಂತವುಗಳನ್ನು ತೆಗೆದುಕೊಳ್ಳುತ್ತಾರೆ. ಕೆಲವರು ಹಣ್ಣುಗಳನ್ನು ಮಾತ್ರವೇ ತಿನ್ನುತ್ತಾರೆ. ಇನ್ನು ಕೆಲವರು ಊಟವನ್ನು ಬಿಟ್ಟು ಅಲ್ಪಾಹಾರ ಅಂದರೆ ಟಿಫನ್ ತಿನ್ನುತ್ತಾರೆ. ಹೀಗೆ ಕೊನೆಗೆ ಅವರಿಗೆ ಇಷ್ಟವಾದ ರೀತಿಯಲ್ಲಿ, ಯಾರಿಗೆ ಇಷ್ಟ ಬಂದಂತೆ ಅವರು ಉಪವಾಸ ಮಾಡುತ್ತಿರುತ್ತಾರೆ. ಆದರೆ ಯಾರು ಹೇಗೆ ಮಾಡಿದರೂ, ಅಷ್ಟು ಹೆಚ್ಚು ಪುಣ್ಯವು ಬರುತ್ತದೆ ಎಂದು ಭಾವಿಸುತ್ತಾರೆ. ಆದರೆ ಆ ಪುಣ್ಯ ಎಂತಹದೋ? ಎಷ್ಟು ಬಂದಿದೆಯೋ? ಆ ಫಲವು ಅಂದರೆ, ಆ ಲಾಭ ಯಾವಾಗ ಅನುಭವಿಸುತ್ತಾರೋ! ಎನ್ನುವುದು ಅವರಿಗೆ ತಿಳಿದಿಲ್ಲ. ಇದು ಅರ್ಥವಾಗದೆ ಇರುವುದರಿಂದಲೇ ಆಲೋಚಿಸದೇ ಇರುವುದರಿಂದಲೇ, ಉಪವಾಸಕ್ಕೆ ಇಷ್ಟು ಬದಲಾವಣೆಗಳು ಬಂದಿದೆ.

ಆದರೆ ನೆನಪಿರಲಿ "**ಉಪವಾಸ ಎಂದರೆ ಹೊಟ್ಟೆಗೆ ಪೂರ್ತಿಯಾಗಿ ವಿಶ್ರಾಂತಿ ಕೊಡುವುದು**" ಪೂರ್ತಿ ವಿಶ್ರಾಂತಿ ಎಂದರೆ, ನೀರನ್ನೂ ಹಾಕದಿರುವುದು.

ಹಾಗೆ ಮಾಡಿದರೆ ಬರುವ ಪುಣ್ಯವೇನು? ಅಂದರೆ ಲಾಭವೇನು? ಎನ್ನುವುದು ಆಲೋಚಿಸೋಣ. ನೋಡಿ ನಾವು ತೆಗೆದುಕೊಂಡ ಆಹಾರವನ್ನು ಹೊಟ್ಟೆಯಲ್ಲಿರುವ ಜೀರ್ಣ ವ್ಯವಸ್ಥೆ ಜೀರ್ಣ ಮಾಡಿ, ಶಕ್ತಿಯಾಗಿ ಬದಲಾಯಿಸಿ ಶರೀರವು ಕೆಲಸ ಮಾಡಲು ಬೇಕಾದ ಶಕ್ತಿಯನ್ನು ಶರೀರಕ್ಕೆ ನೀಡುತ್ತದೆ. ಈ ಜೀರ್ಣವ್ಯವಸ್ಥೆಯೂ ಕೂಡಾ ಒಂದು ಉಪಕರಣದಂತಹದು. ಅತಿಯಾಗಿ ಉಪಯೋಗಿಸಿದರೆ ಅಂದರೆ ಬಳಸಿದರೆ, ಬೇಗ ಹಾಳಾಗುತ್ತದೆ. ಕಾರನ್ನು ನೋಡಿ ನಿಲ್ಲಿಸದೆ ಸುತ್ತಾಡಿದರೂ, ಹೆಚ್ಚು ಭಾರ ಹಾಕಿದರೂ, ಬೇರೊಂದು ಇಂಧನವನ್ನು ಹಾಕಿದರೂ, ಬೇಗ ಬೋರ್‌ಗೆ ಬರುತ್ತದೆ. ಅಂದರೆ ಇಂಜಿನ್ ಕೆಟ್ಟು ಹೋಗುತ್ತದೆ. ಆದರೆ ಮಧ್ಯ ಮಧ್ಯೆ ಕೆಲವು ಗಂಟೆಗಳು ನಿಲ್ಲಿಸುತ್ತಾ ಇದ್ದರೆ ಎಷ್ಟೋ ಕಾಲ ಕೆಲಸ ಮಾಡುತ್ತದೆ.

ಹಾಗೆ ನಮ್ಮ ಹೊಟ್ಟೆಯೂ ಕೂಡ... ಕೆಲವರು ಭೋಜನಕ್ಕೆ, ಭೋಜನಕ್ಕೆ ಮಧ್ಯೆ ಹೊಟ್ಟೆಗೆ ವಿಶ್ರಾಂತಿ ನೀಡದೇ ಯಾವುದೋ ಒಂದು ಆಹಾರ ಹಾಕುತ್ತಿರುತ್ತಾರೆ. ಅಂದರೆ ಆ ಸಮಯದಲ್ಲಿ ಹೊಟ್ಟೆಯನ್ನು ವಿಶ್ರಾಂತಿ ತೆಗೆದುಕೊಳ್ಳಲು ಬಿಡುವುದಿಲ್ಲ. ಹಾಗೆ ಕೆಲಸ ಮಾಡಿಸುತ್ತಲೇ ಇರುತ್ತಾರೆ. ಅವರಿಗೆ ತಿನ್ನೋದು ತಿಳಿದಿದೆ ಹೊರತು, ತಿಂದ ನಂತರ ಒಳಗಿರುವ ಜೀರ್ಣ ವ್ಯವಸ್ಥೆ ಎಷ್ಟು ಶ್ರಮಪಡಬೇಕಾಗಿ ಬರುತ್ತದೆ ಎನ್ನುವುದು ಅವರಿಗೆ ಅರ್ಥವಾಗುತ್ತಿಲ್ಲ. ಅವರು ಎಷ್ಟು ಹೊತ್ತು ರುಚಿಗೆ, ಪದಾರ್ಥಕ್ಕೆ ಪ್ರಾಮುಖ್ಯತೆ ನೀಡುತ್ತಾರೆ ಹೊರತು, ಹೊಟ್ಟೆ ಕುರಿತು ಆಲೋಚಿಸುವುದಿಲ್ಲ. ಕೆಲವರು ರುಚಿಯಾಗಿದ್ದರೆ ಇನ್ನೂ ಹೆಚ್ಚು ತಿನ್ನುತ್ತಿರುತ್ತಾರೆ. ಹಾಗೆ ತಿನ್ನುತ್ತಿದ್ದಾರಾಗಲಿ....ನಂತರ ಅದು ಹೊಟ್ಟೆಗೆ ಎಷ್ಟು ಭಾರವೋ ಆಲೋಚಿಸುವುದಿಲ್ಲ.

ಇನ್ನೂ ಕೆಲವರು ಶಾಖಾಹಾರ ನಿರ್ಮಿತವಾದ ಮಾನವ ಶರೀರದಲ್ಲಿ, ಮಾಂಸಾಹಾರವನ್ನು ಹಾಕುತ್ತಾರೆ. ಹಾಗೆ ಮಾಡಿದರೆ ಜೀರ್ಣ ವ್ಯವಸ್ಥೆಗೆ ಹೊಡೆತ ಬೀಳುವುದಿಲ್ಲವೇ? ಆರೋಗ್ಯ ಕೆಡುವುದಿಲ್ಲವೇ? ಒಂದು ಕಾರನ್ನೇ ತೆಗೆದುಕೊಳ್ಳೋಣ, ಒಂದೊಂದು ಕಾರು ಒಂದೊಂದು ಇಂಧನಕ್ಕೆ ಅನುಗುಣವಾಗಿ ಅದರ ಇಂಜಿನ್ ತಯಾರಿಸುತ್ತಿರುತ್ತಾರೆ. ಅಂದರೆ ಕೆಲವು ಕಾರುಗಳ ಇಂಜಿನ್ ಪೆಟ್ರೋಲ್‌ಗೆ ಅನುಗುಣವಾಗಿ, ಇನ್ನೂ ಕೆಲವು ಕಾರುಗಳು ಡೀಸೆಲ್‌ಗೆ ಅನುಗುಣವಾಗಿ ತಯಾರಿಸಿರುತ್ತಾರೆ. ಎಂತಹ ಕಾರಿನಲ್ಲಿ ಅಂತಹ ಇಂಧನವನ್ನು ಹಾಕಿದರೆ, ಆ ಇಂಜಿನ್ ಸಕ್ರಮವಾಗಿ ಹೆಚ್ಚು ಕಾಲ ಕೆಲಸ ಮಾಡುತ್ತದೆ. ಆದರೆ ಪೆಟ್ರೋಲ್ ಕಾರ್‌ನಲ್ಲಿ ಸೀಮೆ ಎಣ್ಣೆಯನ್ನು ಹಾಕಿದರೆ, ಡಿಸೇಲ್ ಹಾಕಿದರೆ ಬೇಗ ಆ ಇಂಜಿನ್ ಕೆಟ್ಟು ಹೋಗುತ್ತದೆ. ಬೋರ್‌ಗೆ ಬರುತ್ತದೆ.

ಹಾಗೆಯೇ ಮಾನವ ಜೀರ್ಣಾಶಯ ಶಾಖಾಹಾರಕ್ಕೆ ಅನುಗುಣವಾಗಿ ತಯಾರಿಸಲಾಗಿದೆ ಹೊರತು, ಮಾಂಸಾಹಾರಕ್ಕೆ ಅನುಗುಣವಾಗಿ ತಯಾರಿಸಲಾಗಿಲ್ಲ. ಅದಕ್ಕೆ ಪ್ರಕೃತಿ ವೈದ್ಯ ನಿಪುಣರು ಮಂತೆನ ಸತ್ಯನಾರಾಯಣ ರಾಜ್ ಅವರು ಸ್ಪಷ್ಟವಾಗಿ ಹೇಳುತ್ತಾರೆ. ಮಾನವ ಪ್ರಕೃತಿ ಸಹಜವಾದ ಆಹಾರವನ್ನೇ ತೆಗೆದುಕೊಳ್ಳಬೇಕು. ಪ್ರಕೃತಿ ವಿರುದ್ಧವಾದ ಮೃತಹಾರವಾದ ಮಾಂಸಾಹಾರ ತಿನ್ನಬಾರದು ಎನ್ನುತ್ತಾರೆ. ಆತ ಎಲ್ಲರಿಗೂ, ಶಾಖಾಹಾರವನ್ನು ತೆಗೆದುಕೊಂಡರೆ ಎರಡು ಗಂಟೆಗಳಲ್ಲಿ ಜೀರ್ಣವಾಗುತ್ತದೆ. ಮಾಂಸಾಹಾರವನ್ನು ತೆಗೆದುಕೊಂಡರೆ ಆರರಿಂದ ಏಳು ಗಂಟೆಗಳು ಆಗುತ್ತದೆ ಎಂದು ಹೇಳುತ್ತಾರೆ.

ಗಮನಿಸಿ ಮಾನವನು ಹುಲಿ, ಸಿಂಹದಂತೆ ಹಸಿಮಾಂಸ ಮಾತ್ರವೇ ತಿಂದು ಎಷ್ಟು ದಿನ ಜೀವಿಸಬಲ್ಲ!? ಆದರೆ ಅದೇ ಶಾಕಾಕಾರ ಮಾತ್ರವೇ ತೆಗೆದುಕೊಳ್ಳುತ್ತಾ ತನ್ನ ಜೀವನ ಪರ್ಯಂತ ಜೀವಿಸಬಲ್ಲ. ಆದ್ದರಿಂದ ಪೆಟ್ರೋಲ್ ಕಾರ್ ನಲ್ಲಿ ಸೀಮೆಎಣ್ಣೆ ಹಾಕಿದರೆ ಆ ಇಂಜಿನ್ ಬೇಗ ಹೇಗೆ ಕೆಟ್ಟು ಹೋಗುವುದೋ, ಹಾಗೇ ಶಾಖಾಹಾರ ಹಾಕಬೇಕಾದ ಮಾನವನ ಶರೀರದಲ್ಲಿ ಮಾಂಸಾಹಾರವನ್ನು ಹಾಕಿದರೆ, ಮಾನವನ ಜೀರ್ಣಕೋಶ ಕೂಡ ಬೇಗ ಹಾಳಾಗುತ್ತದೆ, ಕೆಡುತ್ತದೆ. ಅಂದರೆ ಹೊಟ್ಟೆ ನೋವು, ಮಲಬದ್ದತೆ, ಅಲ್ಸರ್, ಗ್ಯಾಸ್ಟ್ರಿಕ್ ನೋವಿನಂತಹ ತೊಂದರೆಗಳು ಬರುತ್ತಿರುತ್ತವೆ.

(ಯುವಕರು) ತಾರುಣ್ಯದಲ್ಲಿರುವವರು ನಾವು ಮಾಂಸ ತಿನ್ನುತ್ತೇವೆ. ಆದರೆ ನಮಗೆ ಅಂತಹ ತೊಂದರೆಗಳು ಇಲ್ಲ ಎಂದು ಹೇಳುತ್ತಿರುತ್ತಾರೆ. ಆದರೆ ನೆನಪಿರಲಿ ಹೊಸ ಪೆಟ್ರೋಲ್ ಕಾರ್ ನಲ್ಲಿ ಸೀಮೆಎಣ್ಣೆ ಹಾಕಿದರೂ ಬೇಗ ಬೋರ್‌ಗೆ ಬರುವುದಿಲ್ಲ. ರಿಪೇರಿಗೆ ಬರುವುದಿಲ್ಲ ಹಾಗೆಯೇ ಮಾನವ ಶರೀರದಲ್ಲಿ ಮಾಂಸಾಹಾರ ಹಾಕಿದರೆ ಅದು ಕೂಡಲೇ ಹಾಳಾಗುವುದಿಲ್ಲ ಆದರೆ ಹಾಳಾಗಿ ಹೋಯಿತೋ ಎಲ್ಲಾ ತೊಂದರೆಗಳೇ. ಆದ್ದರಿಂದ ಆಹಾರ ತೆಗೆದುಕೊಳ್ಳುವವರು ಈ ವಿಷಯಗಳೆಲ್ಲವನ್ನು ಆಲೋಚಿಸಬೇಕು. ಅಷ್ಟೇ ಹೊರತು, ಕುರುಡು ನಂಬಿಕೆಯಿಂದ ತಿನ್ನಬಾರದು.

ಮಾನವರ ಪ್ರವರ್ತನೆ ಹೀಗೆ ಇರುವುದರಿಂದಲೇ, ಹಿಂದಿನ ಕಾಲದಲ್ಲಿ ಮಹರ್ಷಿಗಳು, ಮಹಾನುಭಾವರು ಆಲೋಚಿಸಿ ಈ ಮೂರ್ಖಮಾನವರಿಗೆ ಏನು ಹೇಳಬೇಕು ಹೇಳಬಾರದು ತಿಳಿಯದೆ, ಇವರಗಿರುವ ಒಂದೇ ಒಂದು ಬಲಹೀನತೆ ಬಲವಾದ ನಂಬಿಕೆ ಪುಣ್ಯ. ಆ ಪದವನ್ನು ಉಪಯೋಗಿಸಿ, ಉಪವಾಸವಿರಿ ಪುಣ್ಯ ಬರುತ್ತದೆ ಎಂದು ಹೇಳಿದ್ದಾರೆ. ಜೀವಿಸಿರುವಷ್ಟು ಕಾಲ ತಿನ್ನೋದು ಜೀರ್ಣವಾಗುವಂತೆ ಮಾಡಿದ್ದಾರೆ.

ಜೀವನವೆಲ್ಲಾ ಆರೋಗ್ಯವಾಗಿ ಇರುವಂತೆ ಮಾಡಿದರು. ಪುಣ್ಯವೆಂದು ಹೇಳದ ಹೊರತು ಇವರು ಕೇಳಲಾರರು ಎನ್ನುವುದು ಅವರಿಗೆ ಗೊತ್ತು. ಆದ್ದರಿಂದ ಮಧ್ಯ ಮಧ್ಯದಲ್ಲಿ ಉಪವಾಸ ಇದ್ದರೆ ಬರುವ 'ಪುಣ್ಯ' ಅಂದರೆ 'ಲಾಭ' ಏನೆಂದರೆ, ಜೀರ್ಣಕೋಶ ಸುಸ್ಥಿತಿಯಲ್ಲಿ ಇರುತ್ತದೆ. ಅಂದರೆ ಚೆನ್ನಾಗಿ ಕೆಲಸ ಮಾಡುತ್ತದೆ. ತಿಂದದ್ದು ಅರಗಿಸಿಕೊಂಡು ಆರೋಗ್ಯವಾಗಿ ಜೀವಿಸಬಲ್ಲರು. ಅದೇ ಉಪವಾಸದಲ್ಲಿ ಬರುವ 'ಪುಣ್ಯ'.

ತಿಳಿದಿರಲಿ "'ಉಪವಾಸ ಪುಣ್ಯವೆಂದರೆ ಆರೋಗ್ಯ ಲಾಭ" ಅದಕ್ಕಿಂತ ಬೇರೆ ಏನು ಇಲ್ಲ. ಆದ್ದರಿಂದ ಮತ್ತೊಮ್ಮೆ ತಿಳಿದುಕೊಳ್ಳಿ ನಾವು ಮಾಡುವ ಕೆಲಸಗಳ ಒಂದು ಪ್ರತಿಫಲ ಅದು ಲಾಭವಾದರೂ ಆಗಬಹುದು, ನಷ್ಟವಾದರೂ ಆಗಬಹುದು. ಅದನ್ನು ನಾವೇ ಅನುಭವಿಸುತ್ತೇವೆ. ಅದು ನಾವು ಮಾಡಿದ ಕಾರ್ಯದ ಮೇಲೆ ಆಧಾರವಾಗಿರುತ್ತದೆ. ಆದ್ದರಿಂದ ಪುಣ್ಯವೆನ್ನುವುದು ನಾವು ಮಾಡುವ ಕೆಲಸಗಳ ಅನುಸಾರ ಇರುತ್ತದೆ.

ಅದಕ್ಕೆ ಪತ್ರೀಜಿ ಹೇಳುತ್ತಿರುತ್ತಾರೆ ಈ ಸೃಷ್ಟಿಯಲ್ಲಿ ಮಾನವನು ಅನುಸರಿಸಬೇಕಾದ ಅನೇಕ ಧರ್ಮಗಳಿವೆ. ಅದರಲ್ಲಿ ಶರೀರಧರ್ಮವು ಒಂದು ಎಂದುಹೇಳುತ್ತಾರೆ. ಅಂದರೆ, ಶರೀರಕ್ಕೆ ಎಂತಹ ಆಹಾರ ಕೊಡಬೇಕು? ಎಷ್ಟು ಕೊಡಬೇಕು? ಎಷ್ಟು ಸಾರಿ ಕೊಡಬೇಕು? ಆಹಾರ ಎಂತಹದ್ದಾಗಿರಬೇಕು? ಎನ್ನುವುದನ್ನು ಯಾವಾಗಲೂ ಹೇಳುತ್ತಿರುತ್ತಾರೆ.

ಪತ್ರೀಜಿ ಮುಖ್ಯವಾಗಿ, ಮಾಂಸಹಾರ ಬೇಡ ಸಾತ್ವಿಕವಾದ ಶಾಕಾರವನ್ನು ತೆಗೆದುಕೊಳ್ಳಿ ಎನ್ನುತ್ತಾರೆ. ಅದನ್ನೂ ಕೂಡಾ ಹಿತಮಿತವಾಗಿ ಬಳಸಬೇಕು ಎನ್ನುತ್ತಾರೆ. ನೀರು ಹೆಚ್ಚಾಗಿ ಕುಡಿಯಲು ಹೇಳುತ್ತಾರೆ. ಅಷ್ಟೇ ಅಲ್ಲ ನಾವು ತೆಗೆದುಕೊಳ್ಳುವ ಆಹಾರ ನ್ಯಾಯಾರ್ಜಿತವಾಗಿ ಇರಬೇಕೆನ್ನುತ್ತಾರೆ. ಅಷ್ಟೇ ಹೊರತು ತೆಗೆದುಕೊಳ್ಳುವ ಆಹಾರ ತಮೊಗುಣವನ್ನು ಹೆಚ್ಚಿಸುವ ವಿಧವಾಗಿ ಇರಬಾರದು. ಸಾತ್ವಿಕ ಗುಣವನ್ನು ಹೆಚ್ಚಿಸುವ ವಿಧವಾಗಿ ಇರಬೇಕೆಂದು ಹೇಳುತ್ತಾರೆ. ಅದಕ್ಕೆ ಶಾಕಾಹಾರದಲ್ಲಿ, ಮುಖ್ಯವಾಗಿ ಬೆಳ್ಳುಳ್ಳಿ ಬಳಸಬಾರದು ಎನ್ನುತ್ತಾರೆ. ಅಷ್ಟೇ ಅಲ್ಲ ತಣ್ಣಗಾದ ಹಳಸಿದ, ಹುಳಿಯಾದ, ಕೆಟ್ಟು ಹೋದ, ವಾಸನೆ ಬರುವ ಹೆಚ್ಚು ಕಾಲ ಇಟ್ಟು ಬಳಸುವ, ಬೇಯಿಸಿ ಫ್ರಿಡ್ಜ್‌ನಲ್ಲಿ ಇರಿಸಿದ ಆಹಾರಗಳನ್ನು ತಿನ್ನಬಾರದು ಎನ್ನುತ್ತಾರೆ.

ಹಾಗೆಯೇ ಸ್ವಲ್ಪ ಕೆಟ್ಟು ಹೋದ, ಕೊಳೆತು ಮಚ್ಚೆ ಮಚ್ಚೆಯಾದ ತರಕಾರಿಗಳು, ಹಣ್ಣುಗಳನ್ನು ಬಳಸಬಾರದು. ಹೀಗೆ ನಾವು ತೆಗೆದುಕೊಳ್ಳುವ ಆಹಾರದಲ್ಲಿ ಕೆಲವು ನಿಯಮಗಳು ಅನುಸರಿಸುತ್ತಾ ಮಧ್ಯಮಧ್ಯ ಉಪವಾಸ ಇದ್ದರೆ, ಯಾರಾದರೂ ಎಷ್ಟೋ ಆರೋಗ್ಯವಾಗಿ ಇರುತ್ತಾರೆ. ಸಾತ್ವಿಕ ಗುಣದಲ್ಲಿ ಇರುತ್ತಾರೆ. ಎಲ್ಲವನ್ನು ಆಲೋಚಿಸಬಲ್ಲರು.

ಒಳಿತು ಕೆಡುಕು ನಿರ್ಣಯಿಸಬಲ್ಲರು. ಒಳಿತನ್ನೇ ಆಲೋಚಿಸುತ್ತಾರೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಜೀವನದಲ್ಲಿ ಒಳ್ಳೆಯ ಫಲಿತಗಳನ್ನು ಹೊಂದುತ್ತಾರೆ.

ಹಾಗೆ ಇನ್ನು ಏನು ಹೇಳುತ್ತಾರೆ ಎಂದರೆ ಈ ಸೃಷ್ಟಿಯಲ್ಲಿ ಎಲ್ಲಾ ದೈವಸ್ವರೂಪರೇ, ಆದ್ದರಿಂದ ನಾವು ಕುಡಿಯುವ ನೀರು, ತಿನ್ನುವ ಆಹಾರ ಕೂಡ ದೈವಸ್ವರೂಪವಾಗಿ ಭಾವಿಸಿ ಎನ್ನುತ್ತಾರೆ. ಆ ಭಾವದೊಂದಿಗೆ, ಆಹಾರದ ಮೇಲೆ ನಮ್ಮ ವರ್ತನೆ ಇರಬೇಕು. ಎನ್ನುತ್ತಾರೆ. ಅದಕ್ಕೆ ಹಿರಿಯರು "ಅನ್ನಂ ಪರಬ್ರಹ್ಮ ಸ್ವರೂಪಂ" ಎಂದು ಹೇಳುತ್ತಾರೆ. ಅಂದರೆ ನಾವು ತೆಗೆದುಕೊಳ್ಳುವ ಆಹಾರವೂ ದೈವ ಸ್ವರೂಪವೇ... ಅದರಿಂದ ಸುಮ್ಮನೆ ದೈವ ಸ್ವರೂಪ ಎಂದರೆ ಸರಿ ಹೋಗುವುದಿಲ್ಲ. ನಮ್ಮ ವರ್ತನೆಯೂ ಅದಕ್ಕೆ ಸರಿಯಾಗಿ ಇರಬೇಕು. ತೆಗೆದುಕೊಳ್ಳುವ ಆಹಾರವನ್ನು ಗೌರವಿಸಬೇಕು. ಅದಕ್ಕೆ ಪತ್ರೀಜಿ ಕುರ್ಚಿಯಲ್ಲಿ ಕುಳಿತಾಗ, ಕುಡಿಯುವ ನೀರನ್ನು ನೆಲದ ಮೇಲೆ, ಕಾಲ ಬಳಿ ಇಡಗೊಡುವುದಿಲ್ಲ.

ಅವರು ಆಹಾರ ತಿನ್ನುವಾಗ ಸ್ವಲ್ಪವೇ ಬಡಿಸಿಕೊಳ್ಳುತ್ತಾರೆ. ತಿನ್ನುವ ಆಹಾರವನ್ನು ಇಷ್ಟವಾಗಿ ತಿನ್ನಲು ಹೇಳುತ್ತಾರೆ. ಆಯಿಷ್ಟವಾಗಿ, ಕಷ್ಟಪಡುತ್ತಾ ತಿನ್ನಬಾರದು ಎನ್ನುತ್ತಾರೆ. ಹಾಗೆಯೇ ಆಹಾರವನ್ನು ವ್ಯರ್ಥ ಮಾಡಬಾರದು ಎನ್ನುತ್ತಾರೆ. ಅದಕ್ಕೆ ಸ್ವಲ್ಪವೇ ಬಡಿಸಿಕೊಳ್ಳಲು ಹೇಳುತ್ತಾರೆ. ಹಾಗೆಯೇ ಯಾರನ್ನು ಬಲವಂತ ಮಾಡಬಾರದು. ಹಾಗೆ ಮಾಡಿ ಬಲವಂತವಾಗಿ ತಿನಿಸಿ ಅವರಿಗೆ ಕಷ್ಟವನ್ನುಂಟು ಮಾಡಬಾರದು ಎನ್ನುತ್ತಾರೆ. ಆದ್ದರಿಂದ ಆಹಾರದ ವಿಷಯದಲ್ಲಿ ಎಷ್ಟೋ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು.

ಅಷ್ಟೇ ಹೊರತು ನೀರು, ದೇವರೆಂದು ನದಿಗಳಿಗೆ ಆರತಿ ಮಾಡುವುದು, ಸರಿಯಲ್ಲ. ಅನ್ನ ಪರಬ್ರಹ್ಮ ಸ್ವರೂಪವೆಂದು, ತಿನ್ನುವ ಮೊದಲು ಪ್ರಾರ್ಥನೆ ಮಾಡಿದರೆ ಸರಿ ಹೋಗುವುದಿಲ್ಲ ಆಹಾರದ ಮೇಲೆ ನನ್ನ ಪ್ರವರ್ತನೆ ಸರಿಯಾದ ವಿಧದಲ್ಲಿ ಇರಬೇಕು. ಆಗಲೇ ನಮಗೆ 'ಲಾಭ' ಅಂದರೆ "ಪುಣ್ಯ".

**{ಮಂತ್ರ ಓದಿದರೆ ಫಲಿತ ಬರುವುದಿಲ್ಲ ಮಂತ್ರದ ಅರ್ಥ ತಿಳಿದುಕೊಂಡು**
**ಅದಕ್ಕೆ ಅನುಗುಣವಾಗಿ ಪ್ರವರ್ತಿಸಿದರೆ ಮಾತ್ರ ಫಲಿತ ಬರುತ್ತದೆ}**

# ಮೌನ

ಮೌನವಾಗಿದ್ದರೂ ಪುಣ್ಯವೇ ಎನ್ನುತ್ತಾರೆ. ಆದ್ದರಿಂದ ಕೆಲವರು ಮಧ್ಯೆ ಮಧ್ಯೆ, ಅಂದರೆ ವಾರಕ್ಕೋ, ತಿಂಗಳಿಗೋ, ಒಂದು ದಿನ. ಇನ್ನೂ ಕೆಲವರು ಒಂದು ವಾರ, ಇನ್ನೂ ಕೆಲವರು ಒಂದು ತಿಂಗಳು, ಇನ್ನೂ ಕೆಲವರು ಕೆಲವು ತಿಂಗಳುಗಳು, ಕೆಲವರು ಮಹಾತ್ಮರು ತಮ್ಮ ಜೀವನ ಕಾಲದಲ್ಲಿ ಮೌನದಲ್ಲಿಯೇ ಇರುತ್ತಾರೆ. ಆದ್ದರಿಂದ ಮೌನದಿಂದ ಬರುವ ಪುಣ್ಯವೇನು? ನೋಡೋಣ ಅಂದರೆ ಲಾಭವೇನು? ನೋಡೋಣ.

ಮೌನವೆಂದರೆ **"ಬಾಯಿಗೆ ವಿಶ್ರಾಂತಿಯನ್ನು ನೀಡುವುದು. ಅಂದರೆ, ಏನು ಮಾತನಾಡದೇ ಇರುವುದು."** ತಿಳಿದುಕೊಳ್ಳಿ. (1) ಹೊಟ್ಟೆಗೆ ವಿಶ್ರಾಂತಿಯನ್ನು ನೀಡಿದರೆ "ಉಪವಾಸ" (2) ಬಾಯಿಗೆ ವಿಶ್ರಾಂತಿಯನ್ನು ನೀಡಿದರೆ "ಮೌನ" ಎನ್ನುತ್ತಾರೆ.

ಮುಖ್ಯವಾಗಿ ನಾವು ಏನು ಮಾಡಿದರು ಅಂದರೆ, ಕಣ್ಣಿನಿಂದ ನೋಡಿದರೂ, ಕಿವಿಗಳಿಂದ ಕೇಳಿದರೂ, ಕೈಗಳಿಂದ ಕಾಲುಗಳಿಂದ ಕೆಲಸ ಮಾಡಿದರೂ, ಕೊನೆಗೆ ಬಾಯಿಯಿಂದ ಮಾತನಾಡಿದರೂ, ನಮ್ಮೊಳಗಿನ ಶಕ್ತಿ ಸ್ವಲ್ಪ ಖರ್ಚಾಗುತ್ತದೆ. ಆದ್ದರಿಂದ ವಮೌನವಾಗಿದ್ದರೆ, ನಾವು ಎಷ್ಟೋ ಅಷ್ಟು ಶಕ್ತಿಯುನ್ನು ಉಳಿತಾಯ ಮಾಡಿಕೊಂಡವರಾಗುತ್ತೇವೆ. ಅಂದರೆ, ಹಾಗೆ ಶಕ್ತಿಯನ್ನು ಉಳಿಸಿದರೆ ಒಂದು ವಿಧವಾಗಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಎಂದರ್ಥ.

ಪ್ರಸ್ತುತ, ಲೋಕದಲ್ಲಿ ಮಾನವರು ಇಷ್ಟು ಹೀನ ಸ್ಥಿತಿಯಲ್ಲಿರಲು ಮುಖ್ಯ ಕಾರಣ ಶಕ್ತಿಹೀನರಾಗಿರುವುದೇ ಆಗಿದೆ. ಶಕ್ತಿಯುನ್ನು ಸಂಪೂರ್ಣವಾಗಿ ಕಳೆದು ಕೊಂಡಿರುವುದರಿಂದಲೇ... ಅದಕ್ಕೆ ಯಾವ ಚಿಕ್ಕ ಕಷ್ಟ ಬಂದರೂ, ಕೂಡಲೇ ಕೈಗಳೆತ್ತಿ ರಕ್ಷಿಸು ಕಾಪಾಡು ಎನ್ನುತ್ತಾರೆ. ಮೌನ ಆಚರಿಸುವುದರ ಮೂಲಕ ಎಷ್ಟೋ ಶಕ್ತಿಯನ್ನು ಉಳಿಸಬಹುದು. ಮೌನದಲ್ಲಿ ಇದೊಂದು ಲಾಭ.

ಹಾಗೆ ನಾವು ಮಾಡುವ ಕರ್ಮಗಳ ಅನುಸಾರ ನಮ್ಮ ಜೀವನ ಆಧಾರವಾಗಿರುತ್ತದೆ. ನಮ್ಮ ಭವಿಷ್ಯತ್ತು ಆಧಾರವಾಗಿರುತ್ತದೆ. ಮುಖ್ಯವಾಗಿ ಕರ್ಮಗಳು ಅಂದರೆ ನಾವು ಮಾಡುವ ಕೆಲಸಗಳೇ ಅಲ್ಲ, ಬಾಯಿಯಿಂದ ಆಡುವ ಮಾತುಗಳು, ಕರ್ಮಗಳ ಅಡಿಯಲ್ಲಿ ಬರುತ್ತವೆ. ಆದ್ದರಿಂದ ಬಾಯಿಯಿದೆ ಎಂದು ಹೇಗೆಂದರೆ ಹಾಗೆ ಇಷ್ಟ ಬಂದಂತೆ

ಮಾತನಾಡಿದರೆ, ಜೀವನದಲ್ಲಿ ಅದರ ಫಲಿತಾಂಶ ಅನುಭವಿಸಬೇಕಾಗಿ ಬರುತ್ತದೆ. ಅದಕ್ಕೆ ಪತ್ರೀಜಿ ನಮ್ಮ "**ಬಾಯಿಯೊಳಗಿನ ಮಾತು, ನಮ್ಮ ಹಣೆಯ ಮೇಲಿನ ಬರಹ**" ಎಂದು ಹೇಳುತ್ತಾರೆ.

ಮೌನದಿಂದ ಮಾತಿನ ಮೇಲೆ ಹಿಡಿತ ಬರುತ್ತದೆ. ಮಾತಿನಲ್ಲಿ ಅರಿವಿರುತ್ತದೆ. ತುಂಬಾ ಜನರಿಗೆ ಮಾತಿನ ಮೇಲೆ ಅರಿವು ಇರುವುದಿಲ್ಲ. ಆದ್ದರಿಂದಲೇ ಅಸತ್ಯಗಳನ್ನು ಹೇಳುತ್ತಾ ಇರುತ್ತಾರೆ ಸುಳ್ಳುಗಳನ್ನು ಮಾತನಾಡುತ್ತಾರೆ. ಹಿರಿಮೆಗಾಗಿ ತಪ್ಪುಗಳನ್ನು ಮಾತನಾಡುತ್ತಾರೆ. ಇತರರಿಗೆ ಮಾತು ನೀಡುತ್ತಾರೆ. ಆ ಮಾತಿಗೆ ಕಟ್ಟು ಬಿದ್ದು ಇರುವುದಿಲ್ಲ. ಇನ್ನೂ ಕೆಲವರಿಗೆ ಮಾತಿನ ಮೇಲೆ ಹಿಡಿತ ಇಲ್ಲದಿರುವುದರಿಂದ ಎದುರಿನಲ್ಲಿರುವವರನ್ನು ದೂಷಿಸುತ್ತಿರುತ್ತಾರೆ, ಬೈಯುತ್ತಾರೆ, ಮಾತುಗಳೊಂದಿಗೆ ಅವಮಾನಗೊಳಿಸುತ್ತಾರೆ. ಅವರನ್ನು ಹಿಂಸೆಗೊಳಪಡಿಸುತ್ತಾರೆ, ಕೀಳಾಗಿ ಮಾತನಾಡುತ್ತಾರೆ, ಇನ್ನು ಮಾತನಾಡುವ ಮಾತುಗಳೆಲ್ಲವೂ ನಷ್ಟ ಉಂಟುಮಾಡುವ ವಿಧವಾಗಿ ಇರುತ್ತವೆ. ಅಂತಹ ಮಾತುಗಳು ಇತರರಿಗೆ ಕಷ್ಟಗೊಳಿಸುವುದೇ ಅಲ್ಲದೆ, ತಮಗೆ ತಿಳಿಯದಂತೆಯೇ ತಾನು ನಷ್ಟ ಹೊಂದುತ್ತಾ ಇರುತ್ತಾನೆ. ಮೌನ ಪಾಲಿಸುವುದರಿಂದ ಇವುಗಳೆಲ್ಲವನ್ನು ಅಧಿಗಮಿಸಬಹುದು. ಅಂತಹ ತಪ್ಪುಗಳು ಮಾಡದೇ ಇರಬಹುದು. ಇವೆಲ್ಲವೂ ಮೌನದಿಂದ ಬರುವ ಲಾಭಗಳು.

ಹಾಗೆ ಉಂಟಾಗುವ ಲಾಭಗಳೆಲ್ಲ, ಮೌನದಿಂದ ನಮಗೆ ಉಂಟಾಗುವ "ಪುಣ್ಯವೇ". ಅಷ್ಟೇ ಹೊರತು ಮೌನದ ಮೂಲಕ ಬರುವ ಪುಣ್ಯದಿಂದ ಧನರಾಶಿಗಳು ಹೆಚ್ಚುವುದಿಲ್ಲ, ಸಿರಿಸಂಪತ್ತು ಹೆಚ್ಚುವುದಿಲ್ಲ.



**"ಒಬ್ಬ ಮಹಾತ್ಮ ನಾದವನು, ಪೂರ್ಣ ಜ್ಞಾನಿ ಯಾವ ಕೆಲಸಕ್ಕಾಗಿ ಭೂಮಿಗೆ ಬಂದನೋ ಅಂತಿಮ ಕ್ಷಣದವರೆಗೆ ಆ ಕೆಲಸವನ್ನು ಮಾಡುವುದೇ ಉನ್ನತವಾದ ವಿಷಯ"**

**- ಬ್ರಹ್ಮರ್ಷಿ ಪಿತಾ ಮಹಾ ಪತ್ರೀಜಿ**

# ಜಾಗರಣೆ

ಹಾಗೆಯೇ ಜಾಗರಣೆ ಮಾಡಿದರೂ, 'ಪುಣ್ಯ' ಬರುತ್ತದೆ ಎನ್ನುತ್ತಾರೆ. ಜಾಗರಣೆ ಮಾಡಿದರೆ ನಮಗೆ ಲಾಭ ಎಂದು ತಿಳಿದುಕೊಂಡಿದ್ದೇವೆ. ಹಾಗಾಗಿ ಜಾಗರಣೆಯಿಂದ ಬರುವ ಲಾಭವೇನು ನೋಡೋಣ.

ಜಾಗರಣೆ ಎಂದರೆ ತುಂಬಾ ಜನರ ಅಭಿಪ್ರಾಯವೇನೆಂದರೆ, ರಾತ್ರಿ ಎಲ್ಲಾ ನಿದ್ರೆ ಮಾಡದೆ ಎಚ್ಚರವಾಗಿರುವುದು ಎಂದು ಅಂದುಕೊಳ್ಳುತ್ತಾರೆ. ಹಾಗೆ ಎಚ್ಚರವಾಗಿದ್ದರೆ ಜಾಗರಣೆ ಮಾಡಿದಂತೆ ಎಂದು ಭಾವಿಸುತ್ತಾರೆ. ಆದ್ದರಿಂದ ಕೆಲವರು ಸಿನಿಮಾಗಳನ್ನು ನೋಡುತ್ತಾ, ಕೆಲವರು ದೂರದರ್ಶನವನ್ನು ನೋಡುತ್ತಾ, ಇನ್ನೂ ಕೆಲವರು ಪುರಾಣ ಕೇಳುತ್ತಾ, ಕಾಲಕ್ಷೇಪ ಮಾಡುತ್ತಾ ರಾತ್ರಿಯೆಲ್ಲಾ ಎಚ್ಚರದಿಂದ ಇರುತ್ತಾರೆ. ಅಂದರೆ ಜಾಗರಣೆ ಮಾಡಿದ್ದೇವೆ ಎಂದುಕೊಳ್ಳುತ್ತಾರೆ. ಹಾಗೆ ಮಾಡಿದ್ದರಿಂದ ಎಷ್ಟೋ ಪುಣ್ಯ ಬಂದಿದೆ ಎಂದು ಭಾವಿಸುತ್ತಾರೆ. ಆದರೆ ಹಾಗೆ ರಾತ್ರಿಯೆಲ್ಲ ಎಚ್ಚರವಾಗಿದ್ದೇವೆ... ಆದರಿಂದ ಬರುವ ಲಾಭವೇನು ಎಂದು ಊಹಿಸಿಕೊಳ್ಳಬಹುದು. ರಾತ್ರಿಯೆಲ್ಲಾ ಎಚ್ಚರದಿಂದ ಇದ್ದು ಇದ್ದ ಶಕ್ತಿಯನ್ನೂ ಕಳೆದುಕೊಂಡು, ಮಾರನೇ ದಿನ ಏನು ಮಾಡಲಾರದೆ ನಿದ್ರೆ ಮಾಡಬೇಕಾಗಿರುತ್ತದೆ. ಒಂದು ವೇಳೆ ಹಗಲು ಎಚ್ಚರವಾಗಿದ್ದರೂ, ಯಾವ ಕೆಲಸವನ್ನು ಸರಿಯಾಗಿ ಮಾಡಲಾರರು.

ಹಾಗೆಯೇ ಕೆಲವು ಪ್ರಾಂತ್ಯಗಳಲ್ಲಿ ರಾತ್ರಿ ಎಲ್ಲಾ ನಿದ್ರಿಸದೇ, ದೇವರ ಮೇಲೆ ದೃಷ್ಟಿ ಇರಿಸಿ ಜಾಗರಣೆ ಮಾಡಿದರೆ ಪುಣ್ಯ ಬರುತ್ತದೆ ಎಂದು ನಂಬುತ್ತಾರೆ. ಆದ್ದರಿಂದ ಶಿವರಾತ್ರಿ ದಿನ ಪೂಜಾದಿಗಳು ಮುಗಿಸಿಕೊಂಡು, ರಾತ್ರಿಯಲ್ಲ ನಿದ್ರಿಸದೆ, ಕಣ್ಣುಮುಚ್ಚದೇ ಶಿವಲಿಂಗವನ್ನೇ ನೋಡುತ್ತಾ ಕಾಲ ಕಳೆಯುತ್ತಾರೆ. ಅವರ ದೃಷ್ಟಿಯಲ್ಲಿ ಶಿವಲಿಂಗವೇ, ಸಾಕ್ಷಾತ್ ಶಿವ... ಆದ್ದರಿಂದ ಲಿಂಗವನ್ನು ನೋಡುತ್ತಾ ಜಾಗರಣೆ ಮಾಡುತ್ತಾರೆ.

ಆದರೆ ಯಾವುದು ಏನಾದರೂ ಒಟ್ಟಾರೆ **"ರಾತ್ರಿಯೆಲ್ಲಾ ನಿದ್ರಿಸದೆ ಭಗವಂತನ ಮೇಲೆ ದೃಷ್ಟಿ ಇರಿಸಿದರೆ, ಅದೇ ನಿಜವಾದ ಜಾಗರಣೆ."**

ಆದರೆ ಇಲ್ಲಿ ನಾವು ತಿಳಿದುಕೊಳ್ಳಬೇಕಾದದ್ದು, ಭಗವಂತನು ಯಾರು? ಆತ ಹೇಗಿರುತ್ತಾನೆ? ಎಲ್ಲಿರುತ್ತಾನೆ? ಇವು ತಿಳಿದುಕೊಳ್ಳದೆ, ಭಗವಂತನ ಮೇಲೆ ದೃಷ್ಟಿ ಇರಿಸುವುದು ಹೇಗೆ? ಅತ್ಯಧಿಕವಾಗಿ ಜನರು ಶಿವಲಿಂಗವೋ, ವಿಗ್ರಹವೋ ಭಗವಂತನ

ರೂಪ ಎಂದು ಭಾವಿಸುತ್ತಾರೆ. ಆದರೆ ವೇಮನ ಯೋಗಿ ಭಗವಂತನು ಯಾರು? ಎಲ್ಲಿರುತ್ತಾನೆ? ಎಂದು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಆತ ಏನು ಹೇಳಿದ್ದಾರೆ ಎಂದರೆ,..

**ಶಿಲೆಗಳನ್ನು ನೋಡಿ ನರರು ಶಿವನೆಂದು ಭಾವಿಸುವರು**

**ಶಿಲೆಯು ಶಿಲೆಯೇ ಹೊರತು ಶಿವನಲ್ಲ**

**ತನ್ನಲ್ಲಿರುವ ಶಿವನನ್ನು ತಾನು ಏಕೆ ತಿಳಿಯನೋ**

**ವಿಶ್ವಧಾಭಿರಾಮ ಕೇಳುವೇಮ**

ಅಂದರೆ ಶಿಲಾ ವಿಗ್ರಹಗಳು, ಶಿಲಾ ಪ್ರತಿಮೆಗಳು ಶಿವನೆಂದು ಮಾನವರು ಭಾವಿಸುತ್ತಾರೆ. ಆದರೆ ಅವು ಶಿಲೆಗಳೇ ಹೊರತು ಶಿವನಲ್ಲ. ನಿಜವಾದ ಶಿವನು ತನ್ನಲ್ಲಿಯೇ ಇದ್ದಾನೆ ಎಂಬ ವಿಷಯ ಮಾನವನು ಗ್ರಹಿಸಲಾರದೆ ಹೋಗುತ್ತಿದ್ದಾನೆ ಎಂದು ಯೋಗಿ ವೇಮನ ಹೇಳಿದ್ದಾರೆ.

ಹಾಗಾದರೆ ನಿಜವಾದ ಶಿವನು ತನ್ನಲ್ಲಿಯೇ ಆತ್ಮರೂಪದಲ್ಲೇ ಇರುವನೆಂದು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಆದ್ದರಿಂದ ರಾತ್ರಿಯೆಲ್ಲ ನಿದ್ರಿಸದೆ ಯಾರು ತನ್ನಲ್ಲಿಯೇ ಇರುವ ಜ್ಯೋತಿ ಸ್ವರೂಪವಾದ ಆತ್ಮದ ಮೇಲೆ ದೃಷ್ಟಿ ಇರಿಸುವರೋ, ಅವರೇ ನಿಜವಾಗಿ ಜಾಗರಣೆ ಮಾಡಿದಂತೆ.... ಅದೇ ನಿಜವಾದ ಜಾಗರಣೆ.

ಮತ್ತೆ ನಮ್ಮಲ್ಲಿರುವ ಶಿವನ ಮೇಲೆ ದೃಷ್ಟಿ ಇರಿಸಬೇಕೆಂದರೆ, ಏನು ಮಾಡಬೇಕು? ಅಂತರಂಗದಲ್ಲಿರುವ ಶಿವನ ಮೇಲೆ ದೃಷ್ಟಿ ಇರಿಸಬೇಕೆಂದರೆ, ಅಂತರ್ಮುಖರಾಗಬೇಕು. ಅಂದರೆ ಶ್ವಾಸದ ಮೇಲೆ ಗಮನವಿರಿಸಿ ಧ್ಯಾನ ಮಾಡಬೇಕು. ಆಗ ಅವರೇ ನಿಜವಾದ ಜಾಗರಣೆ ಮಾಡಿದಂತೆ. ಹಾಗೆ ಜಾಗರಣೆ ಮಾಡಿದವರಿಗೆ ಎಷ್ಟೋ ಪುಣ್ಯ ಲಭಿಸುತ್ತದೆ. ಅಂದರೆ ಎಷ್ಟೋ ವಿಧವಾದ ಲಾಭಗಳು ಸಿಗುತ್ತದೆ.

ಕೆಲವು ಲಾಭಗಳನ್ನು ತಿಳಿದುಕೊಳ್ಳೋಣ. ಹಾಗೆ ರಾತ್ರಿಯೆಲ್ಲಾ ಶರೀರಕ್ಕೆ, ಇಂದ್ರಿಯಗಳಿಗೆ, ಮನಸ್ಸಿಗೆ ಸಂಪೂರ್ಣ ವಿಶ್ರಾಂತಿ ಕೊಡುವುದರಿಂದ ಎಷ್ಟೋ ಶಕ್ತಿಯನ್ನು ಉಳಿಸಿದಂತಾಗುತ್ತದೆ. ಶಕ್ತಿಯನ್ನು ಉಳಿತಾಯ ಮಾಡುವುದು ಒಂದು ವಿಧವಾಗಿ, ಶರೀರದಲ್ಲಿ ಶಕ್ತಿಯನ್ನು ಹೆಚ್ಚಿಸುವುದೇ ಆಗಿರುತ್ತದೆ. ಅಷ್ಟೇ ಅಲ್ಲದೇ ಧ್ಯಾನದಲ್ಲಿ ಮನಸ್ಸು ಶೂನ್ಯವಾದಾಗ, ವಿಶ್ವದಿಂದ ಹೆಚ್ಚಿನ ಶಕ್ತಿ ನಮಗೆ ಲಭಿಸುತ್ತದೆ. ಹೀಗೆ ನಮ್ಮಲ್ಲಿ ಇರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದರಿಂದ ಎಷ್ಟೋ ರೋಗಗಳು ಕಡಿಮೆಯಾಗುತ್ತದೆ. ಶರೀರದಲ್ಲಿನ ಎಷ್ಟೋ ಕ್ರಿಯೆಗಳು ಸಕ್ರಮವಾಗಿ ಕೆಲಸ ಮಾಡುತ್ತವೆ. ಅದರಿಂದ ನಾವು ಎಷ್ಟೋ ಆರೋಗ್ಯದಿಂದ ಜೀವಿಸಬಹುದು.

ಹಾಗೆಯೇ, ಧ್ಯಾನದಲ್ಲಿ ಚಂಚಲವಾಗಿರುವ ಮನಸ್ಸು ನಿಶ್ಚಲವಾಗುತ್ತದೆ. ಆ ವಿಧವಾಗಿ ಮನಸ್ಸು ಶಾಂತಿ ಹೊಂದುತ್ತದೆ. ಅಂದರೆ ಮನಶ್ಶಾಂತಿ ಹೊಂದುತ್ತೇವೆ. ಯಾವಾಗ ಮನಸ್ಸು ಚಂಚಲ ಸ್ಥಿತಿಯನ್ನು ಕಳೆದುಕೊಳ್ಳುವುದೋ ಆಗ ಮನಸ್ಸಿಗೆ ಏಕಾಗ್ರತೆ ಉಂಟಾಗುತ್ತದೆ. ಅದರಿಂದ ನಾವು ಮಾಡುವ ಕೆಲಸದ ಮೇಲೆ ಮನಸ್ಸನ್ನು ಕೇಂದ್ರೀಕರಿಸಬಲ್ಲೆವು. ಆದ್ದರಿಂದ ಯಾವ ಕೆಲಸವನ್ನಾದರೂ ನೈಪುಣ್ಯತೆಯಿಂದ ಮಾಡಬಲ್ಲೆವು. ಯಾವುದೇ ಕ್ಷೇತ್ರದಲ್ಲಾದರೂ ರಾರಾಜಿಸಬಲ್ಲೆವು. ಉನ್ನತ ಶಿಖರಗಳನ್ನು ಸೇರಿಕೊಳ್ಳಬಲ್ಲೆವು. ಎಲ್ಲರ ಪ್ರಶಂಸೆಗಳನ್ನು ಹೊಂದಬಲ್ಲೆವು.

ಅಷ್ಟೇ ಅಲ್ಲ ಮನಸ್ಸು ನಿಶ್ಚಲವಾದಾಗ ವರ್ತಮಾನದಲ್ಲಿ ಜೀವಿಸಬಲ್ಲೆವು. ಆಗ ಅನಗತ್ಯವಾಗಿ ಜೀವನವನ್ನು ವ್ಯರ್ಥ ಮಾಡಿಕೊಳ್ಳದೆ ಯಾವಾಗಲೂ ಆನಂದವಾಗಿ ಜೀವಿಸುತ್ತೇವೆ. ಹಿಂದಕ್ಕೆ ಹೋಗಿ ನಡೆದಿರುವುದರ ಕುರಿತು ಯೋಚಿಸುವುದಿಲ್ಲ. ಬಾಧೆ ಪಡುವುದಿಲ್ಲ. ಭವಿಷ್ಯತ್ತಿನ ಬಗ್ಗೆ ತಳಮಳವಾಗುವುದಿಲ್ಲ. ಹಾಗೆ ಮನಸ್ಸನ್ನು ನಿಶ್ಚಲವಾಗಿರಿಸಿಕೊಂಡಾಗ, ನಿಧಾನವಾಗಿ ಮನಸ್ಸು ನಿರ್ಮಲವಾಗುತ್ತದೆ. ಅದರ ಮೂಲಕ ಕೆಲವು ಲಾಭಗಳು ಉಂಟಾಗುತ್ತವೆ. ಮನಸ್ಸು ನಿರ್ಮಲವಾದಾಗ ಅಂದರೆ ಶುದ್ಧವಾದಾಗ, ಒಳ್ಳೆಯತನದಿಂದ ಬದಲಾದಾಗ, ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆ. ಲೋಕೋಪಕಾರಿಯಾದ ಕೆಲಸಗಳನ್ನು ಮಾಡುತ್ತೇವೆ. ಯಾರಿಗೂ ಕಷ್ಟ ನಷ್ಟವನ್ನುಂಟು ಮಾಡುವುದಿಲ್ಲ. ಹಾಗೆ ಒಳ್ಳೆಯ ಕೆಲಸಗಳು ಮಾಡಿದರೆ ಜೀವನದಲ್ಲಿ ಒಳಿತನ್ನೆ ಹೊಂದುತ್ತೇವೆ ಅಲ್ಲವೇ!?

ಮನಸ್ಸು ನಿರ್ಮಲವಾದಾಗ ನಮ್ಮ ಗುಣಗಳು ಬದಲಾಗುತ್ತದೆ ಕೆಲಸಕ್ಕೆ ಬಾರದ ಕೆಟ್ಟ ಅಭ್ಯಾಸಗಳು ತಂತಾನೇ ಹೋಗುತ್ತದೆ. ಹಾಗೆ ಮಾಡುವ ಕೆಲಸಗಳೆಲ್ಲ ಒಳ್ಳೆಯದಾಗಿಯೇ ಇರುತ್ತದೆ. ಒಳ್ಳೆಯ ಕರ್ಮಗಳು ಮಾಡುವುದರಿಂದ ಭವಿಷ್ಯತ್ತಿನಲ್ಲಿ ಅವುಗಳ ಫಲಿತ ಆನಂದದಾಯಕವಾಗಿ ಇರುತ್ತದೆ. ಜೀವನ ಆನಂದಮಯವಾಗುತ್ತದೆ.

ಮನಸ್ಸು ಶುದ್ಧವಾಗುವುದರಿಂದ ಸಾತ್ವಿಕ ಗುಣ ಉಂಟಾಗುತ್ತದೆ. ಉತ್ತಮವಾಗಿ ಆಲೋಚಿಸಬಲ್ಲೆವು. ವಿವೇಕ ಹೆಚ್ಚುತ್ತದೆ, ಒಳಿತು – ಕೆಡುಕು, ನ್ಯಾಯ – ಅನ್ಯಾಯ, ಧರ್ಮ – ಅಧರ್ಮ ಎನ್ನುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುತ್ತೇವೆ. ಸೃಷ್ಟಿಗೆ, ಸೃಷ್ಟಿ ಧರ್ಮಕ್ಕೆ ಅನುಗುಣವಾಗಿ ವರ್ತಿಸುತ್ತೇವೆ. ನಿತ್ಯಾನಿತ್ಯ ವಿವೇಕ ಉಂಟಾಗುತ್ತದೆ. ಪ್ರಾಪಂಚಿಕ

ಆಲೋಚನೆಗಳು ಹೋಗಿ ಭಗವಂತನ ಕುರಿತು ಆಲೋಚಿಸಲಾರಂಭಿಸುತ್ತೇವೆ. ನಿಧಾನವಾಗಿ ಆತನ ಕುರಿತು ತಿಳಿದುಕೊಳ್ಳುತ್ತೇವೆ.

ಆಲೋಚಿಸಲಾರಂಭಿಸುತ್ತೇವೆ. ನಿಧಾನವಾಗಿ ಆತನ ಕುರಿತು ತಿಳಿದುಕೊಳ್ಳುತ್ತೇವೆ.

ಹೀಗೆ ಹೇಳಿಕೊಳ್ಳುತ್ತಾ ಹೋದರೆ ಎಷ್ಟೋ ಲಾಭಗಳಿವೆ. ಜಾಗರಣೆ ಮಾಡಿದರೆ, ಅಂದರೆ ಸತ್ಯವಾದ ಭಗವಂತನ ಮೇಲೆ ದೃಷ್ಟಿ ಇರಿಸಿದರೆ, 'ಆತ್ಮ' ದ ಮೇಲೆ ದೃಷ್ಟಿ ಇರಿಸಿದರೆ, ಎಲ್ಲಾ ಲಾಭಗಳೇ ಎಲ್ಲಾ 'ಪುಣ್ಯ' ವೇ.

ಅಷ್ಟೇ ಅಲ್ಲ ಹಾಗೆ ಇದ್ದಾಗ, ಅಂದರೆ ಜಾಗರಣೆಗಳು ಮಾಡುತ್ತಾ ಮಾಡುತ್ತಾ ನಿಧಾನವಾಗಿ ಮನಸ್ಸು ಶೂನ್ಯವಾಗುತ್ತದೆ. ದಿವ್ಯ ಶಕ್ತಿಗಳು ಲಭಿಸುತ್ತದೆ. ಅತೀಂದ್ರಿಯ ಜ್ಞಾನ ಲಭಿಸುತ್ತದೆ. ಅತೀಂದ್ರಿಯ ಶಕ್ತಿಗಳು ಲಭಿಸುತ್ತದೆ..ಈ ಇಂದ್ರಿಯಗಳೊಂದಿಗೆ ಮಾಡಲಾರದ ಕೆಲಸಗಳನ್ನು ಮಾಡುತ್ತೇವೆ. ತಿಳಿದುಕೊಳ್ಳಲಾರದ ವಿಷಯಗಳು ತಿಳಿದುಕೊಳ್ಳುತ್ತೇವೆ. ತಿಳಿದುಕೊಂಡಿರದ ಜ್ಞಾನ ಲಭಿಸುತ್ತದೆ. ಎಲ್ಲಾ ಅನುಭವ ಪೂರ್ವಕವಾಗಿ ತಿಳಿಯುತ್ತದೆ. ನಿಧಾನವಾಗಿ ಆತ್ಮ ಸಾಕ್ಷಾತ್ಕಾರ ಉಂಟಾಗುತ್ತದೆ. ನಮಗೆ ದೈವತ್ವ ಲಭಿಸುತ್ತದೆ. ನಮ್ಮ ಜೀವನವೇ ಬದಲಾಗುತ್ತದೆ. ಮಾನವ ಮಾಧವನಾಗಿ ಪರಿವರ್ತನೆ ಹೊಂದುತ್ತಾನೆ. ಹಾಗೆ ವಿವರವಾಗಿ ಹೇಳಿಕೊಳ್ಳಬೇಕೆಂದರೆ ಎಷ್ಟೋ ಹೇಳಿಕೊಳ್ಳಬಹುದು. ಆದ್ದರಿಂದ ಧ್ಯಾನದಿಂದ ಅಂದರೆ ಸತ್ಯವಾದ ಭಗವಂತನ ಮೇಲೆ ದೃಷ್ಟಿ ಇರಿಸುವುದರಿಂದ, ನಿಜವಾದ ಜಾಗರಣೆಯಿಂದ ಎಲ್ಲಾ 'ಪುಣ್ಯ'ವೇ ಎಲ್ಲಾ 'ಲಾಭ'ಗಳೇ.



# ಪೂಜೆ



'ಪೂಜೆ' ಮಾಡಿದರೆ ಪುಣ್ಯ ಎನ್ನುತ್ತಾರೆ. ಹಾಗಾದರೆ ಪೂಜೆ ಮಾಡಿದರೆ ನಮಗೆ ಬರುವ ಲಾಭಗಳೇನು? ನೋಡೋಣ.. ಲೋಕದಲ್ಲಿ ಗಮನಿಸಿದರೆ ಎಲ್ಲರೂ ಅನುಕರಿಸುವವರೇ ಕಾಣಿಸುತ್ತಾರೆ. ಆದರೆ ಆಲೋಚಿಸುವವರು ಕಡಿಮೆ. ಏಕೆಂದರೆ ಯಾರು ಯಾವ ಕೆಲಸ ಮಾಡಿದರೂ, ಮೂರೇ ಕಾರಣಗಳು ಕಾಣಿಸುತ್ತದೆ.

1) ಹಿಂದಿನಿಂದ ತಲತಲಾಂತರಗಳಿಂದ ಆಚಾರವಾಗಿ ಬರುತ್ತಿದೆ ಎಂದು ಮಾಡುತ್ತಾರೆ

2) ಎಲ್ಲರೂ ಮಾಡುತ್ತಾರೆ ಎಂದು ಮಾಡುತ್ತಾರೆ. 3) ಯಾರೋ ಹೇಳಿದ್ದಾರೆ ಎಂದು ಕೆಲವರು ಮಾಡುತ್ತಿದ್ದಾರೆ.

ಹಾಗೆ ಯಾವ ರೀತಿಯಲ್ಲಿ ನೋಡಿದರೂ ಯಾರೋ ಒಬ್ಬರನ್ನು ಅನುಕರಿಸುತ್ತಿದ್ದಾರೆ. ಆದರೆ ಯಾರೂ ಆಲೋಚಿಸಿ ಮಾಡುತ್ತಿಲ್ಲ. ಹಾಗೆಯೇ ಪೂಜೆ ಕೂಡ ಮೇಲಿನ ಕಾರಣಗಳಿಂದಲೇ ಮಾಡುತ್ತಿದ್ದಾರೆ. ಅದಕ್ಕಿಂತ ಆಲೋಚಿಸುತ್ತಿಲ್ಲ. ಆದ್ದರಿಂದ ಪೂಜೆಯಿಂದ ಬರುವ 'ಪುಣ್ಯ' ಅಂದರೆ ಲಾಭವೇನು ಎಂದು ನೋಡೋಣ.

ಪೂಜೆಯಿಂದ ಎಷ್ಟೋ ಲಾಭಗಳಿವೆಯೆಂದು ಪೂಜೆಯ ಮೂಲಕ ಭಗವಂತನನ್ನು ಆನಂದಪಡಿಸಬಹುದೆಂದು, ತನ್ಮೂಲಕ ಆತನ ಅನುಗ್ರಹ ಹೊಂದಬಹುದೆಂದು, ಕಷ್ಟಗಳು ತೊಲಗಿಸಿಕೊಳ್ಳಬಹುದು ಎಂದು, ಕೋರಿಕೆಗಳು ನೆರವೇರುತ್ತವೆ ಎಂದು ಭಾವಿಸಿ ಪೂಜೆ ಮಾಡುತ್ತಾರೆ. ಭಗವಂತನನ್ನು ಪ್ರಸನ್ನ ಮಾಡಿಕೊಳ್ಳಲು ಏಕೈಕ, ಸುಲಭವಾದ ಮಾರ್ಗವಿದು, ಎಂದು ತುಂಬಾ ಜನ ಹೇಳುತ್ತಾರೆ. ಬಹಳಷ್ಟು ಜನರು ನಂಬುತ್ತಾ ಇರುತ್ತಾರೆ. ಒಂದು ವಿಧವಾಗಿ ಪೂಜೆಯ ಮೂಲಕ ಭಗವಂತನಿಗೆ ಹತ್ತಿರವಾಗಬಹುದೆಂದು ತುಂಬಾ ಜನರು ನಂಬುತ್ತಿದ್ದಾರೆ. ಒಟ್ಟಾರೆಯಾಗಿ ಪೂಜೆಯಿಂದ

ತುಂಬಾ ಪುಣ್ಯ ಬರುತ್ತದೆ ಎಂದು ಭಾವಿಸುವುದರಿಂದಲೇ, ಎಷ್ಟೋ ಮಂದಿ ನಿತ್ಯವೂ ಪೂಜೆಗಳು ಮಾಡುತ್ತಿದ್ದಾರೆ.

ಹಾಗಾದರೆ ಪೂಜೆಯಿಂದ ಬರುವ 'ಪುಣ್ಯ' ಅಂದರೆ 'ಲಾಭ'ವೇನು? ನೋಡೋಣ.. ಗಮನಿಸಿದರೆ ಪೂಜೆ ಒಂದು ಬೊಂಬೆಗೆ ಅಥವಾ ವಿಗ್ರಹಕ್ಕೆ ಅಥವಾ ಒಂದು ಫೋಟೋಗೆ ಆಗಲಿ ಮಾಡುತ್ತಾರೆ. ಹಾಗೆ ಅದರ ಮುಂದೆ ಕೂತು ಆರಾಧಿಸುತ್ತಾ, ಭಗವಂತನನ್ನೇ ಆರಾಧಿಸಿದಂತೆ ಭಾವಿಸುತ್ತಾರೆ. ಹಾಗೆ ಮಾಡಿದರೆ ಭಗವಂತ ಆನಂದಿಸುತ್ತಾನೆ, ಕರುಣಿಸುತ್ತಾನೆ ಎಂದು ಭಾವಿಸುತ್ತಾರೆ. ಹಾಗೆ ಬೊಂಬೆಗೆ ಪೂಜೆ ಮಾಡುತ್ತಾ ಸಾಕ್ಷಾತ್ ಭಗವಂತನಿಗೆ ಪೂಜೆ ಮಾಡಿದಂತೆ ಭಾವಿಸುತ್ತಾರೆ. ಆ ಬೊಂಬೆಯೇ ಭಗವಂತನೆಂದು ಭಾವಿಸುವವರು ಕೂಡಾ ಇದ್ದಾರೆ.

ಆದರೆ ನೆನಪಿರಲಿ ಪೂಜೆಗಿಂತ, ಸೇವೆ ಮಾಡಿದಾಗ ಭಗವಂತನು ಆನಂದ ಪಡುತ್ತಾನೆ. ಅದಕ್ಕೆ ಪ್ರಾಮುಖ್ಯತೆ ನೀಡುತ್ತಾನೆ. ಆತನಿಗೆ ಸೇವೆ ಮಾಡಿದರೇನೇ ಆನಂದ. ಅದಕ್ಕೆ ಸತ್ಯಸಾಯಿ ಬಾಬಾರವರು ಎಲ್ಲರಿಗೂ ಎಲ್ಲಕ್ಕೂ ಸೇವೆ ಮಾಡಿ ಎನ್ನುತ್ತಾರೆ. ಕಾರಣ "ಸಕಲ ಜೀವಿಗಳಿಗೆ ಮಾಡುವ ಸೇವೆ, ಭಗವಂತನ ಸೇವೆ." ಏಕೆಂದರೆ ಸಕಲ ಜೀವಿಗಳು ಭಗವಂತನ ಸ್ವರೂಪಗಳೇ.

ನಿಮ್ಮ ತಂದೆ ತಾಯಿಯನ್ನೇ ತೆಗೆದುಕೊಳ್ಳಿ, ಅವರಿಗೆ ನೀವು ಸೇವೆ ಮಾಡಿದರೆ ಆನಂದವೇ? ಪೂಜೆ ಮಾಡಿದರೆ ಆನಂದವೇ? ಸುಮ್ಮನಿದ್ದರೆ ಆನಂದವೇ? ಇದು ನಿಮಗೆ ತಿಳಿಯಬೇಕೆಂದರೆ, ಒಮ್ಮೆ ನಿಮ್ಮ ತಂದೆ ತಾಯಿಯ ಪೂಜೆ ಮಾಡಿ. ಹಾಗೆ ಸೇವೆಯನ್ನೂ ಮಾಡಿ....ಯಾವುದು ಆನಂದ ಉಂಟಾಗುತ್ತದೆ ಅವರನ್ನು ಕೇಳಿ. ಆಗ ಅವರು ಖಚಿತವಾಗಿ ಸೇವೆಯೇ ನನಗೆ ಆನಂದ ಉಂಟು ಮಾಡುತ್ತದೆ ಎನ್ನುತ್ತಾರೆ. ನೀವಾದರೂ ಅಷ್ಟೇ ವೃದ್ಧರಾದಾಗ ನಿಮ್ಮ ಮಕ್ಕಳಿಂದ ಸೇವೆಯನ್ನೇ ಬಯಸುವಿರಿ. ಪೂಜೆಯಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ ಮೇಲಾಗಿ ನಿಮ್ಮ ಮಕ್ಕಳು ಮಾಡುವ ಸೇವೆ ನಿಮಗೆ ಎಷ್ಟೋ ಆನಂದ ಉಂಟು ಮಾಡುತ್ತದೆ. ಆದ್ದರಿಂದ ಸೇವೆಯೇ ಆನಂದ ಉಂಟು ಮಾಡುತ್ತದೆ. ಹಾಗಾದರೆ ಭಗವಂತನಿಗೆ ಸೇವೆ ಹೇಗೆ ಮಾಡುತ್ತೇವೆ ಸಮಸ್ತ ಜೀವಿಗಳು ಭಗವಂತನ ರೂಪಗಳೇ ಆದ್ದರಿಂದ ಸಕಲ ಜೀವಿಗಳಿಗೆ ಮಾಡುವ ಸೇವೆಯೇ, ಭಗವಂತನಿಗೆ ಮಾಡುವ ಸೇವೆಯಾಗುತ್ತದೆ.

ಆ ವಿಷಯವನ್ನೇ ಭಗವದ್ಗೀತೆಯಲ್ಲಿ ಹೇಳಲಾಗಿದೆ.

**ಶ್ಲೋಕ:– ಅಹಂಮಾತ್ಮ ಗುಡಾಕೇಶ ಸರ್ವಭೂತಾಶಯ ಸ್ಥಿತಃ (ಭ.ಗೀ 10–20)**

ಅರ್ಜುನ ನಾನು ಆತ್ಮನು ಸಮಸ್ತ ಜೀವಿಗಳಲ್ಲಿ ಇದ್ದೇನೆ ಎಂದು ಭಗವಾನರು ಹೇಳಿದ್ದಾರೆ.

ಶಿರಡಿ ಬಾಬಾ ಕೂಡಾ "**ಯಾರು ಸಕಲ ಜೀವಕೋಟಿಗಳಲ್ಲಿ ನನ್ನ ನೋಡಬಲ್ಲರೋ, ಅವರೇ ನನ್ನ ಪ್ರಿಯ ಭಕ್ತರು. ಆದ್ದರಿಂದ ನಾನು ಬೇರೆ, ಜೀವರಾಶಿ ಬೇರೆ ಎನ್ನುವ ದ್ವಂದ ಭಾವವನ್ನು ಬಿಟ್ಟು ನನ್ನನ್ನು ಸೇವಿಸು**". (ಸಾಯಿ ಸಚ್ಚರಿತ್ರೆ ಒಂಬತ್ತನೇ ಅಧ್ಯಾಯ 81ನೆಯ ಪೇಜ್)

ಹಾಗಾದರೆ ಸೇವೆಗೆ ಭಗವಂತನು ಆನಂದ ಪಟ್ಟರೆ, ಪೂಜೆ ಯಾವುದಕ್ಕೆ!? ಪೂಜೆಯಿಂದ ಬರುವ ಲಾಭವೇನು? ಹಾಗಾದರೆ ಪೂರ್ವಕಾಲದಲ್ಲಿ ಹಿರಿಯರು ಏಕೆ ಪೂಜೆಯನ್ನು ಲೋಕಕ್ಕೆ ನೀಡಿದ್ದಾರೆ? ಈ ಸಂದೇಹ ಯಾರಿಗಾದರೂ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

ಆತ್ಮ ಸ್ವರೂಪನಾದ ಭಗವಂತನು ನಿರಾಕಾರ. ಕಣ್ಣಿಗೆ ಕಾಣಿಸುವುದಿಲ್ಲ. ಹಾಗಿರುವಾಗ ಭಗವಂತನೆನ್ನುವವನು ಇದ್ದಾನೆ ಎನ್ನುವ ವಿಷಯ ಸಾಮಾನ್ಯ ಜನರಿಗೆ ಹೇಗೆ ತಿಳಿಯುತ್ತದೆ?ತಿಳಿಯುವುದಿಲ್ಲ ಅಲ್ಲವೇ... ಅದಕ್ಕೆ ಒಂದು ಬೊಂಬೆಯನ್ನು ಮಾಡಿ ವಿಗ್ರಹವನ್ನಾಗಲಿ, ಫೋಟೋವನ್ನಾಗಲಿ ಇಟ್ಟು ಪೂಜಿಸುವುದರಿಂದ, ಸಾಮಾನ್ಯ ಜನಕ್ಕೆ ಭಗವಂತ ಒಮ್ಮೆ ಇದ್ದನೆಂಬ ಸಂಗತಿ ತಿಳಿಯುತ್ತದೆಯೆಂದು, ಪಂಡಿತರು ಈ ಪೂಜಾ ವಿಧಾನ ಶುರು ಮಾಡಿದರು. ಆಲೋಚಿಸಿ ಈ ವಿಗ್ರಹಗಳು ಫೋಟೋಗಳು ಇಲ್ಲದಿದ್ದರೆ ಭಗವಂತ ಇದ್ದನೆಂಬ ಸಂಗತಿ ಸಾಮಾನ್ಯರಿಗೆ ಹೇಗೆ ತಿಳಿಯುತ್ತಿತ್ತು? ತಿಳಿಯುತ್ತಿರಲಿಲ್ಲ ಅಲ್ಲವೇ... ಅದಕ್ಕೆ ದೇವರ ಬೊಂಬೆಗಳನ್ನು ಫೋಟೋಗಳನ್ನು ಸೃಷ್ಟಿಸಿದರು.

ಹಾಗಾದರೆ ಆ ಬೊಂಬೆಯನ್ನು, ಫೋಟೋವನ್ನು ಯಾವಾಗಲೋ ಒಮ್ಮೆ ಮಾತ್ರ ನೋಡಿದರೆ ಸರಿ ಹೋಗುವುದೇ! ಮರೆತು ಹೋಗುತ್ತಾರಲ್ಲವೇ. ಆದ್ದರಿಂದ ನಿತ್ಯ ಪೂಜೆಗಳು ಮಾಡಿ ಎಂದರು. ಅಂದರೆ ಪ್ರತಿದಿನ ಪೂಜಿಸುವುದರಿಂದ ಪ್ರತಿದಿನ ಭಗವಂತನನ್ನು ನೆನಪಿಟ್ಟುಕೊಳ್ಳಬಲ್ಲರು ಎಂದು ಹಾಗೆ ಹೇಳಿದರು. ಸ್ವಲ್ಪ ಆಲೋಚಿಸಿ ಹಾಗೆ ಪೂಜೆ ಮಾಡಿದ ನಂತರ ಮಾರನೆಯ ದಿನದವರೆಗೂ ಎಷ್ಟು ಜನ ದೇವರನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಎಷ್ಟು ಜನ ದೇವರ ಮೇಲೆ ಗಮನವಿದೆ? ಆಲೋಚಿಸಿದರೆ, ಎಷ್ಟೋ ಜನರಿಗೆ ದೇವರ ಬಗ್ಗೆ ಗಮನವೇ ಇರುವುದಿಲ್ಲ. ದೇವರ ನೆನಪು ಬರುವುದಿಲ್ಲ.

ಪೂಜೆ ಪೂರ್ಣವಾದ ಕೂಡಲೇ...,ಸಂಸಾರ, ಸಂಪಾದನೆ, ಸಮಸ್ಯೆಗಳು ವಿನೋದಗಳಂತಹವುಗಳಲ್ಲಿ ಮುಳುಗುತ್ತಿದ್ದಾರೆ. ಆಲೋಚಿಸಿ ಈ ಪೂಜೆ ಇಲ್ಲದಿದ್ದರೆ ಎಷ್ಟು ಜನರಿಗೆ ಭಗವಂತನು ನೆನಪಿನಲ್ಲಿರುತ್ತಾನೆ? ಅಸಲು ಭಗವಂತ ಎನ್ನುವವನಿದ್ದಾನೆ ಎಂದು ತಿಳಿಯುವುದೇ? ಅದಕ್ಕೆ ಈ ಪೂಜೆಗಳು.

ನೋಡಿ ನೀವು ಎಲ್ಲಿಯಾದರೂ ಕಾರಿನಲ್ಲಿ ಪ್ರಯಾಣಿಸುತ್ತಿದ್ದೀರಾ ಎಂದುಕೊಳ್ಳಿ, ಏನೇನೋ ಮಾತುಗಳನ್ನಾಡುತ್ತಾ, ಎಷ್ಟೋ ಕಿಲೋಮೀಟರ್ಗಳು ಪ್ರಯಾಣ ಮಾಡುತ್ತಾ ಇರುತ್ತೀರಿ. ಆದರೆ ದಾರಿಯಲ್ಲಿ ಒಂದು ಗುಡಿ, ವಿಗ್ರಹ ಕಾಣಿಸಿದರೆ ಕೂಡಲೇ ಕೈಗಳೆತ್ತಿ ನಮಸ್ಕರಿಸುವಿರಿ. ಇದ್ದಕ್ಕಿದ್ದಂತೆ ಎರಡು ಕೈಗಳು ಹತ್ತಿರ ಬರುತ್ತದೆ. ಹಾಗೆ ಕೈಗಳಿಂದ ಏನೋ ಒಂದು ಮಾಡುತ್ತಾರೆ. ಹಾಗಾದರೆ ಅಲ್ಲಿಯವರೆಗೂ ಮಾಡದ ಆ ಕೆಲಸ ಆಗಲೇ ಏಕೆ ಮಾಡಿದರು? ಅಂದರೆ, ಆ ಗುಡಿಯನ್ನು ನೋಡಿದಾಗಲೇ ದೇವರ ಮೇಲೆ ಗಮನ ಬಂದಿದೆ.

ಅಂದರೆ ದೇವರು ನೆನಪಾಗಿದ್ದಾನೆ. ಆಲೋಚಿಸಿ ಆ ಗುಡಿ ಇಲ್ಲದಿದ್ದರೆ ಎಷ್ಟು ನೂರು ಕಿಲೋಮೀಟರ್ಗಳು ಪ್ರಯಾಣಿಸಿದರು ದೇವರ ಗಮನ ಇರುತ್ತಿತ್ತೇ? ಅಂದರೆ ಇಲ್ಲ, ಆಲೋಚಿಸಿ ಈ ವಿಗ್ರಹಗಳು ಗುಡಿಗಳು ಇಲ್ಲದಿದ್ದರೆ ಮಾನವರಿಗೆ ದೇವರೆನ್ನುವವನು ಇದ್ದಾನೆ ಎನ್ನುವ ವಿಷಯ ತಿಳಿಯುವುದೇ? ದೇವರು ನೆನಪಿರುವನೆ? ಅಂದರೆ ಖಂಡಿತ ಇರುವುದಿಲ್ಲ.. ಭಗವಂತನೆನ್ನುವವನು ಇದ್ದಾನೆಂಬ ಸಂಗತಿ ತಿಳಿದುಕೊಳ್ಳಲು ಪೂಜೆ ಬೇಕು. ಅದೇ ಪೂಜೆಯಿಂದ ಬರುವ ಲಾಭ ಅಂದರೆ 'ಪುಣ್ಯ'.

ಆಲೋಚಿಸಿ ನಿಮ್ಮ ಮನೆಯಲ್ಲಿ ಗೋಡೆಗೆ ಗಾಂಧಿಯವರ ಫೋಟೋ ಆಗಲಿ ಟೇಬಲ್ ಮೇಲೆ ಒಂದು ಪ್ರತಿಮೆಯಾಗಲಿ ಇದೆ ಎಂದುಕೊಳ್ಳಿ. ನಿಮ್ಮ ಮನೆಯಲ್ಲಿ ಗಾಂಧಿಯವರು ಗೋಡೆಗೆ ತೂಗುತ್ತಿರುವಂತೆಯೇ? ಟೇಬಲ್ ಮೇಲೆ ಕುಳಿತು ಎಷ್ಟೋ ದಿನಗಳ ಕಾಲ ನಿಮ್ಮನ್ನು ನೋಡುತ್ತಾ ಇರುವಂತೆಯೇ? ನೀವೇ ಎಂದರೆ ಅಲ್ಲ ಎಂದು ಹೇಳುವಿರಿ. ಹಾಗಾದರೆ, ಏಕೆ ಆ ಫೋಟೋ ಇಟ್ಟಿದ್ದಾರೆ? ಎಂದರೆ ಗಾಂಧೀಜಿಯವರನ್ನು ನೆನಪು ಮಾಡಿಕೊಳ್ಳಲು ಎಂದು ಹೇಳುತ್ತಾರೆ. ಆತನೆಂದರೆ ನನಗೆ ಇಷ್ಟ ಆತನನ್ನು ಮರೆತು ಹೋಗಬಾರದೆಂದು ಅವರ ಫೋಟೋ ಇಟ್ಟುಕೊಂಡಿದ್ದೇವೆ ಎನ್ನುತ್ತಾರೆ. ಅಂದರೆ ಫೋಟೋಗಳು, ಬೊಂಬೆಗಳು ಅವರನ್ನು ನೆನಪಿಸಿಕೊಳ್ಳಲು ಎಂದು ಇದರಿಂದ ಸ್ಪಷ್ಟವಾಗಿ ಅರ್ಥವಾಗುತ್ತದೆ.

ತಿಳಿದಿರಲಿ, **"ಬೊಂಬೆಗಳು ಫೋಟೋಗಳು ಎಲ್ಲವೂ ಆದರ್ಶ ಮೂರ್ತಿಗಳೇ ಹೊರತು ಆರಾಧನಾ ಮೂರ್ತಿಗಳಲ್ಲ."** ಅವು ಅವರನ್ನು ನೆನಪಿಸಿಕೊಳ್ಳಲು ಅವರ ಜೀವನವನ್ನು ಆದರ್ಶವಾಗಿ ತೆಗೆದುಕೊಳ್ಳಲು.... ಅಷ್ಟೇ ಅಲ್ಲ ಅವರ ಸಂದೇಶಗಳು, ಅವರ ಬೋಧನೆಗಳು ನೆನಪಿಸಿಕೊಳ್ಳಲು ಮತ್ತು ಆಚರಣೆಯಲ್ಲಿಡಲು.

ಅದಕ್ಕೆ ಶ್ರೀ ಸತ್ಯ ಸಾಯಿಬಾಬಾರವರು "ನನ್ನ ಪಾದಗಳನ್ನಲ್ಲ ನನ್ನ ಪದಗಳನ್ನು ಹಿಡಿದುಕೊಳ್ಳಿ " ಎಂದು ಹೇಳಿದ್ದಾರೆ ಆತ ಇನ್ನೂ ಹೇಳುತ್ತಾ, "ನನ್ನ ಜೀವನವೇ ಒಂದು ಪುಸ್ತಕ" ಎಂದಿದ್ದಾರೆ. ಆದ್ದರಿಂದ ಈ ಪೂಜೆಗಳು, ವಿಗ್ರಹಗಳು, ಫೋಟೋಗಳು ಭಗವಂತ ಇದ್ದಾನೆ ಎನ್ನುವ ವಿಷಯವನ್ನು ತಿಳಿಸುತ್ತದೆ ಎಂದು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಅದೇ ನಮಗೆ ಬರುವ ಲಾಭ. ಅದಕ್ಕೆ ಹಿರಿಯರು ಫೋಟೋವನ್ನು ಪೂಜಿಸಲು ಶುರು ಮಾಡಿದ್ದು.

ಅಷ್ಟೇ ಅಲ್ಲ ಪೂಜೆಗಳಿಂದ ಮತ್ತೊಂದು ಲಾಭವೂ ಇದೆ. ಅದೇನೆಂದರೆ, ಪೂಜೆ ಮಾಡುವವರಿಗೆ ತೃಪ್ತಿ ಬರುತ್ತದೆ. ಮಾಡಿಸುವವರಿಗೆ ಭುಕ್ತಿ ಬರುತ್ತದೆ ಹೊರತು ಯಾರಿಗೂ ಮುಕ್ತಿ ಬರುತ್ತಿಲ್ಲ ಎನ್ನುವುದು ಗಮನಿಸಿದರೆ, ತಿಳಿಯುತ್ತದೆ. ಅದಕ್ಕೆ ಪೂಜೆಗಳು ಮಾಡಿದವರಿಗೂ, ಮಾಡಿಸುವವರಿಗೂ ಸಮಸ್ಯೆಗಳು, ಕಷ್ಟಗಳು, ರೋಗಗಳು ಬರುತ್ತಲೇ ಇದೆ. ಪ್ರತಿಯೊಬ್ಬರು ಯಾವುದೋ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನೋಡಿದರೆ ಸಮಸ್ಯೆಗಳು ಇಲ್ಲದವರೇ ಕಾಣಿಸುತ್ತಿಲ್ಲ. ಕಷ್ಟಗಳೇ ಹೋದರೆ ಸಮಸ್ಯೆಗಳೇ ತೀರಿದರೆ, ಲೋಕದಲ್ಲಿ ಕಷ್ಟಗಳು ಇರುತ್ತಿತ್ತೆ, ಸಮಸ್ಯೆಗಳಿರುತ್ತಿತ್ತೆ, ರೋಗಗಳು ಇರುತ್ತಿತ್ತೆ? ಇಲ್ಲ ಅಲ್ಲವೇ. ಆದ್ದರಿಂದ ಪೂಜೆ ಎನ್ನುವುದು ಭಗವಂತ ಇದ್ದಾನೆ ಎಂದು ತಿಳಿದುಕೊಳ್ಳಲು ಮಾತ್ರವೇ...

ಇದನ್ನೇ ಶಿರಡಿ ಸಾಯಿಬಾಬಾ ನವವಿಧದ ಭಕ್ತಿಗಳಲ್ಲಿ ಮೊದಲನೆಯದಾದ "ಶ್ರವಣ" ಎಂದಿದ್ದಾರೆ. ಅಂದರೆ ದೇವರ ಕುರಿತು ಕೇಳುವುದು. ಅಂದರೆ, ತಿಳಿದುಕೊಳ್ಳುವುದು. ಹಾಗೇ ಪೂಜೆ ಮಾಡುತ್ತಾ ಇದ್ದರೆ, ಭಗವಂತ ಇದ್ದಾನೆ ಎನ್ನುವ ವಿಷಯ ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಚೆನ್ನಾಗಿ ನಂಬುತ್ತಾರೆ ಅದೇ ಪೂಜೆಯಿಂದ ಉಂಟಾಗುವ ಪುಣ್ಯ ಬರುವ ಲಾಭ.

# ಸ್ತೋತ್ರ



ಹಾಗೆ ಸ್ತೋತ್ರಗಳು ಓದಿದರೂ, ಸ್ತೋತ್ರ ಮಾಡಿದರೂ ಪುಣ್ಯ ಎನ್ನುತ್ತಾರೆ. ಆದ್ದರಿಂದ ಸ್ತೋತ್ರಗಳಿಂದ ಬರುವ ಲಾಭವೇನು? ಹಿರಿಯರು, ಪಂಡಿತರು ಸ್ತೋತ್ರಗಳನ್ನು ಏಕೆ ಬರೆದಿದ್ದಾರೆ? ಏಕೆ ಓದಲು ಹೇಳಿದ್ದಾರೆ? ಎನ್ನುವ ವಿಷಯಗಳನ್ನು ತಿಳಿದುಕೊಳ್ಳಬೇಕು.

ಮೊದಲು ಸ್ತೋತ್ರ ಎಂದರೆ ಏನು ಎನ್ನುವುದನ್ನು ತಿಳಿದುಕೊಳ್ಳೋಣ. ಸ್ತೋತ್ರ ಎಂದರೆ ಸ್ತುತಿಸುವುದು. ಅಂದರೆ ಭಗವಂತನನ್ನು ಕೀರ್ತನೆ ಮಾಡುವುದು. ಅಂದರೆ ಹೊಗಳುವುದು ಅಂದರೆ ದೇವರ ಹಿರಿಮೆಯನ್ನು ಹೇಳಿಕೊಳ್ಳುವುದು ಭಗವಂತನನ್ನು ಸ್ತುತಿಸುವುದು.... ಅಂದರೆ ಭಗವಂತನ ಹಿರಿಮೆಯನ್ನು ಹೇಳೊಕೊಳ್ಳುವುದು. ಅಂದರೆ ಭಗವಂತನು ದೊಡ್ಡವನೆಂದು ತಿಳಿದುಕೊಳ್ಳುವುದು. ಹಾಗೆ ನಿತ್ಯ ಸ್ತೋತ್ರ ಮಾಡುವುದರಿಂದ ಭಗವಂತನಿದ್ದಾನೆ ಎಂದು ತಿಳಿದುಕೊಂಡವರಿಗೆ ಭಗವಂತನೇ ತುಂಬಾ ಉನ್ನತವಾದವನು ಎಂಬ ವಿಷಯ ತಿಳಿಯುತ್ತದೆ.

ಆದರೆ ಭಗವಂತನು ಇದ್ದಾನೆ ಎಂಬ ವಿಷಯ ತಿಳಿದುಕೊಂಡ ಮಾತ್ರಕ್ಕೆ ಪ್ರಯೋಜನವಿಲ್ಲ ಆತನು ಉನ್ನತವಾದವನು ಎಂದು ತಿಳಿದುಕೊಂಡರೇನೇ ಯಾರಿಗಾದರೂ ಆತನ ಮೇಲೆ ಆಸಕ್ತಿ ಹೆಚ್ಚಾಗುತ್ತದೆ. ಆತನ ಕುರಿತು ಇನ್ನೂ ಇನ್ನೂ ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆ ಉಂಟಾಗುತ್ತದೆ. ಆತನೆಂದರೆ ಇಷ್ಟವು ಏರ್ಪಡುತ್ತದೆ. ಆದ್ದರಿಂದ ಪಂಡಿತರು ಸ್ತೋತ್ರಗಳ ಮೂಲಕ ಭಗವಂತನ ಉನ್ನತತ್ವವನ್ನು ವರ್ಣಿಸುವುದು ನಡೆದಿದೆ. ಇದನ್ನೇ ಶಿರಡಿ ಬಾಬಾ ನವವಿಧ ಭಕ್ತಿಗಳಲ್ಲಿ ಎರಡನೆಯದೆನಿಸಿದ "ಕೀರ್ತನೆ" ಎಂದು ಹೇಳುತ್ತಾರೆ.

ಹಾಗೆ ವಿಷ್ಣು ಸಹಸ್ರನಾಮ ಸ್ತೋತ್ರ, ಲಲಿತಾ ಸಹಸ್ರನಾಮ ಸ್ತೋತ್ರಗಳ ಮೂಲಕ ಭಗವಂತನ ಹಿರಿಮೆಯನ್ನು ಸಾವಿರ ವಿಧಗಳಾಗಿ, ಸಾವಿರ ನಾಮಗಳೊಂದಿಗೆ ವರ್ಣಿಸಿ ಲೋಕಕ್ಕೆ ತಿಳಿಸಲಾಗಿದೆ. ಆ ನಾಮಗಳನ್ನು ಮತ್ತೆ ಮತ್ತೆ ಓದುವುದರಿಂದ ಭಗವಂತನ ಉನ್ನತತ್ವವನ್ನು ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಅದಕ್ಕೆ ಮತ್ತೆ ಮತ್ತೆ ಓದಬೇಕೆಂದು ಹೇಳಿದ್ದಾರೆ.

ಹಾಗೆ ಸ್ತೋತ್ರ ಮಾಡುತ್ತಾ, ಭಗವಂತನ ಹಿರಿಮೆಯನ್ನು ತಿಳಿದುಕೊಳ್ಳುತ್ತಾ,

ಭಗವಂತನ ಮೇಲೆ ಆಸಕ್ತಿ ಪ್ರಾಪಂಚಿಕ ವಿಷಯಗಳ ಮೇಲೆ ವಿರಕ್ತಿಯುಂಟು ಮಾಡಬೇಕು ಎನ್ನುವುದು ಅವರ ಉದ್ದೇಶ. ಆದರೆ ಎಲ್ಲರೂ ಸ್ತೋತ್ರಗಳು ಓದುತ್ತಿದ್ದಾರೆಯಾಗಲಿ ಅರ್ಥಗಳನ್ನು ತಿಳಿದುಕೊಳ್ಳುತ್ತಿಲ್ಲವಾದ್ದರಿಂದ ಅವರ ವರ್ತನೆಯಲ್ಲಿ ಬದಲಾವಣೆ ಬರುತ್ತಿಲ್ಲ. ಆದರೆ ಎಷ್ಟು ಬಾರಿ ಸ್ತೋತ್ರಗಳನ್ನು ಹೇಳಿದರೂ ಭಗವಂತನ ಹಿರಿಮೆಯನ್ನು ತಿಳಿದುಕೊಳ್ಳದಿದ್ದರೆ ಕನಿಷ್ಠ ಓದಿದ 'ಪುಣ್ಯ'ವೂ ಬರುವುದಿಲ್ಲ. ಅಂದರೆ ಯಾವ ಲಾಭವೂ ಇಲ್ಲ ಎಂದರ್ಥ. ಮಾಡಿದ್ದೆಲ್ಲ ವ್ಯರ್ಥವೆಂದು ಅರ್ಥ. ಕಾರಣ ಓದುತ್ತಿದ್ದಾರೆ, ಅರ್ಥ ಮಾಡಿಕೊಳ್ಳುತ್ತಿಲ್ಲ. ಹಾಗಾದರೆ ಅದರ ಅರ್ಥ ತಿಳಿದುಕೊಂಡರೆ ಬರುವ ಲಾಭವೇನು ನೋಡೋಣ.

ಏಕೆಂದರೆ ಈ ಸೃಷ್ಟಿಯಲ್ಲಿ ಇರುವುದು ಎರಡೇ, 1) ಭಗವಂತನು 2) ಆತನಿಂದ ಮಾಡಲ್ಪಟ್ಟ ಸೃಷ್ಟಿ. ಗಮನಿಸಿದರೆ ಭಗವಂತನು ಕಾಣುವುದಿಲ್ಲ ಆತನ ಸೃಷ್ಟಿ ಕಾಣಿಸುತ್ತಿದೆ. ಗಮನಿಸಿದರೆ ಸೃಷ್ಟಿಯಲ್ಲಿರುವುದೆಲ್ಲವೂ ಶಾಶ್ವತವಲ್ಲ. ಆದರೆ ಭಗವಂತನೇ ಶಾಶ್ವತ. ಇನ್ನೂ ಗಮನಿಸಿದರೆ ಸೃಷ್ಟಿಯಲ್ಲಿರುವುದೆಲ್ಲಾ ಬದಲಾಗುತ್ತಾ ಬದಲಾವಣೆ ಹೊಂದುತ್ತಾ ಇರುತ್ತವೆ. ಆದರೆ ಭಗವಂತನು ಬದಲಾಗುವುದಿಲ್ಲ ಬದಲಾವಣೆ ಆಗುವುದಿಲ್ಲ. ನೋಡಿದರೆ ಸೃಷ್ಟಿಯಲ್ಲಿರುವುದೆಲ್ಲವೂ ಇರುವಂತೆಯೇ ಇದೆ ಆದರೆ ಯಾವುದು ಇರುವುದಿಲ್ಲ. ಅಷ್ಟೇ ಅಲ್ಲ ಸೃಷ್ಟಿಯಲ್ಲಿರುವವುಗಳಲ್ಲಿ ಆನಂದವಿದೆ ಆದರೆ ಅದು ತಾತ್ಕಾಲಿಕ. ಹಾಗೆಯೇ ಭಗವಂತನ ಬಳಿಯಲ್ಲೂ ಆನಂದವಿದೆ ಆದರೆ ಅದು ಶಾಶ್ವತ. ಪಂಡಿತರು ಸ್ತೋತ್ರಗಳ ಮೂಲಕ ತಿಳಿಸಿರುವ ಅನೇಕ ವಿಷಯಗಳಲ್ಲಿರುವ ಅರ್ಥ ಇದೇ...

ಆದರೆ ಮಾನವರು ಇದನ್ನು ಗ್ರಹಿಸದೇ, ಭಗವಂತನ ಹಿರಿಮೆಯನ್ನು ತಿಳಿದುಕೊಳ್ಳಲಾರದೇ, ಎಷ್ಟು ಹೊತ್ತು ಆತನಿಂದ ಮಾಡಲ್ಪಟ್ಟ ಸೃಷ್ಟಿಯಲ್ಲಿ ಅಲ್ಪವಾದವುಗಳನ್ನು ಬಯಸುತ್ತಿದ್ದಾರೆ, ಆಶಿಸುತ್ತಿದ್ದಾರೆ. ಅವುಗಳನ್ನು ಹೊಂದಬೇಕೆಂದು ನೋಡುತ್ತಿದ್ದಾರೆ. ಹಾಗೆ ಈ ಸೃಷ್ಟಿಯಲ್ಲಿ ಧನ, ಕನಕ, ಸಂಪತ್ತು, ಮಹಲುಗಳು, ಕಾರುಗಳು, ಪದವಿಗಳು, ಉದ್ಯೋಗಗಳು, ಸಂತಾನ, ಸಂಸಾರ ಇವುಗಳೇ ದೊಡ್ಡದು ಎಂದುಕೊಳ್ಳುತ್ತಿದ್ದಾರೆ. ಇವುಗಳಲ್ಲೇ ಆನಂದವಿದೆ ಎಂದುಕೊಳ್ಳುತ್ತಿದ್ದಾರೆ. ಇವುಗಳನ್ನೇ ತಮಗೆ ಭಗವಂತನು ಪ್ರಸಾದಿಸಬೇಕೆಂದು ಬಯಸುತ್ತಿದ್ದಾರೆ. ಅವುಗಳಿಗಾಗಿ ತಪ್ಪುಗಳು, ಪಾಪಗಳು ಮಾಡುತ್ತಿದ್ದಾರೆ. ಕೊನೆಗೆ ಕಷ್ಟಗಳ ಪಾಲಾಗುತ್ತಿದ್ದಾರೆ.

ಅಷ್ಟೇ ಹೊರತು ಬೇರೇನೂ ಆಲೋಚಿಸುತ್ತಿಲ್ಲ. ತಾವು ಬಯಸುತ್ತಿರುವ ಆಶಿಸುತ್ತಿರುವ ಎಲ್ಲವೂ ಅಲ್ಪವಾದದ್ದು, ಅಶಾಶ್ವತವಾದದ್ದು. ಅವುಗಳಿಂದ ಹೊಂದುವ ಆನಂದಕ್ಕಿಂತ ಅವು ಹೊಂದಲು ಆಗುತ್ತಿಲ್ಲ ಎನ್ನುವ ದುಃಖವೇ ಅಧಿಕವಾಗಿರುತ್ತದೆ. ಒಂದು

ವೇಳೆ ಹೊಂದಿದರೂ, ಆ ಆನಂದ ತಾತ್ಕಾಲಿಕವೇ ಹೊರತು ಶಾಶ್ವತವಲ್ಲ ಎನ್ನುವುದನ್ನು ತಿಳಿದುಕೊಳ್ಳುತ್ತಿಲ್ಲ. ಆದರೆ ಇವುಗಳಿಗಿಂತ ಭಗವಂತನು ದೊಡ್ಡವನು. ಕಾರಣ ಇವುಗಳೆಲ್ಲವನ್ನು ಸೃಷ್ಟಿ ಮಾಡಿದವನು ಆತನೇ. ಆದ್ದರಿಂದ ಅಷ್ಟೇ ಅಲ್ಲ ಯಾವಾಗಲೂ ಕೂಡ ಸೃಷ್ಟಿಲ್ಪಟ್ಟ ವಸ್ತುವಿಗಿಂತ, ಸೃಷ್ಟಿ ಮಾಡಿದವವೇ ಅಂದರೆ ಸೃಷ್ಟಿಕರ್ತನೆ ತುಂಬಾ ತುಂಬಾ ಉನ್ನತವಾದವನು. ಕಾರಣ ಆತ ಸೃಷ್ಟಿ ಮಾಡಿರುವುವೇ ಅಷ್ಟು ಆಕರ್ಷಣೆಯನ್ನು ಹೊಂದಿದ್ದರೆ, ಇನ್ನೂ ಆತನು ಎಷ್ಟು ಆಕರ್ಷಣೆಯನ್ನು ಹೊಂದಿರಬೇಕು? ಆತನು ಎಷ್ಟು ಉನ್ನತವಾದವನಾಗಿರಬೇಕು.

ಆದ್ದರಿಂದ ಆತನ ಸೃಷ್ಟಿಯಲ್ಲಿನ ಅಲ್ಪವಾದದ್ದನ್ನು, ಅಶಾಶ್ವತವಾದದ್ದನ್ನು ಬಯಸುವುದಲ್ಲ... ಶಾಶ್ವತವಾದ, ಉನ್ನತವಾದ ಭಗವಂತನನ್ನೇ ಬಯಸಬೇಕು. ಆತನನ್ನೇ ಬಯಸಬೇಕು. ಈ ಅಲ್ಪವಾದದ್ದನ್ನು ಹೊಂದಲು ಪ್ರಯತ್ನಿಸುವುದಲ್ಲ, ಉನ್ನತವಾದ, ಅನಂತಶಕ್ತಿ ಸ್ವರೂಪನಾದ ಭಗವಂತನನ್ನು ಹೊಂದಲು ಪ್ರಯತ್ನಿಸಬೇಕು. ಏಕೆಂದರೆ ಅನಂತವಾದ ಈ ಸೃಷ್ಟಿಯಲ್ಲಿ ನೀವು ಯಾವುದು ಹೊಂದಿದರೂ, ನೀವು ಯಾವುದೋ ಒಂದನ್ನು ಹೊಂದಿದಂತೆ. ಆದರೆ ಭಗವಂತನನ್ನೇ ನೀವು ಹೊಂದಿದರೆ, ಸೃಷ್ಟಿಯಲ್ಲಿರುವುದೆಲ್ಲವನ್ನು ನೀವು ಹೊಂದಿದಂತೆ. ಆದರೆ ಮಾನವನು ತನ್ನ ಜೀವನವೆಲ್ಲ ಕಷ್ಟಪಟ್ಟು ಕೋಟ್ಯಾನು ಕೋಟಿ ಲೋಕಗಳಲ್ಲಿ ಒಂದು ಲೋಕವಾದ ಈ ಭೂಮಂಡಲದಲ್ಲಿನ ಅಲ್ಪಾತಿ ಅಲ್ಪವಾದವುಗಳಲ್ಲಿ ಕೆಲವನ್ನು ಹೊಂದಲು ಪ್ರಯತ್ನಿಸುತ್ತಿದ್ದಾನೆ. ಆದರೆ ಭಗವಂತನನ್ನು ಹೊಂದಲು ಸ್ವಲ್ಪವೂ ಪ್ರಯತ್ನಿಸುತ್ತಿಲ್ಲ.

ನಿಜವಾಗಿಯೂ ಈ ಸೋತ್ರಗಳು ಎಷ್ಟು ಸಾರಿ ಓದಿದರೂ, ಭಗವಂತನ ಹಿರಿಮೆ ಅರ್ಥವಾಗುತ್ತಿಲ್ಲ. ಭಗವಂತನನ್ನು ಹೊಂದಬೇಕೆನ್ನುವ ಅಭಿಪ್ರಾಯವೇ ಉಂಟಾಗುತ್ತಿಲ್ಲ. ಪ್ರಸ್ತುತ ಈ ಸ್ತೋತ್ರಗಳ ಅರ್ಥಗಳನ್ನು ವಿವರಿಸುವ ಪಂಡಿತರು ಕೂಡಾ, ಭಗವಂತನು ಉನ್ನತವಾದವನು ಎಂದು ಹೇಳುತ್ತಾ ಆತನನ್ನು ಆಶ್ರಯಿಸಿ, ಆರಾಧಿಸಿ ಆತನನ್ನು ಪೂಜಿಸಿ ನಿಮ್ಮ ಕೋರಿಕೆಗಳೆಲ್ಲ ನೆರವೇರುತ್ತವೆ ಎಂದು ಹೇಳುತ್ತಿದ್ದಾರೆ. ಆದರೆ ಇವು ಅಲ್ಲ, ಇವೆಲ್ಲ ಅಲ್ಪವಾದದ್ದು, ಅಶಾಶ್ವತವಾದದ್ದು, ಇವು ದುಃಖವನ್ನು ತೊಲಗಿಸಲಾರವು. ನೀವು ಕೊರಬೇಕಾಗಿರುವುದು ಅವುಗಳನ್ನಲ್ಲ. ಏಕವಾಗಿ ಭಗವಂತನನ್ನೇ ಕೋರಿಕೊಳ್ಳಿ. ಆತನನ್ನು ಹೊಂದಲು ಪ್ರಯತ್ನಿಸಿರಿ. ಆತನನ್ನು ಹೊಂದಿದರೆ, ಸಮಸ್ತವನ್ನು ಹೊಂದಿದಂತೆ ಎಂದು ಹೇಳುತ್ತಿಲ್ಲ. ಅಷ್ಟೇ ಅಲ್ಲ ಭಗವಂತನನ್ನು ಹೊಂದಿದರೆ ಈ ಸೃಷ್ಟಿಯಲ್ಲಿ ಇನ್ನೂ ಹೊಂದಬೇಕಾಗಿರುವುದು ಯಾವುದು ಇರುವುದಿಲ್ಲ ಎಂದು ಹೇಳದೇ ಇರುವುದರಿಂದ


ಸಾಮಾನ್ಯರಿಗೆ ಭಗವಂತನನ್ನು ಹೊಂದಬೇಕೆನ್ನುವ ಅಭಿಪ್ರಾಯವುಂಟಾಗುತ್ತಿಲ್ಲ. ಆಲೋಚಿಸಿದರೆ ಎಲ್ಲರೂ ಹಾಗೆ ಜೀವನವೆಲ್ಲ ಕೋರಿಕೊಳ್ಳುತ್ತಾ, ಇನ್ನೂ ಕೋರುತ್ತಲೇ ಇದ್ದಾರೆ. ಕೋರಿಕೆಗಳು ಹಾಗೆ ಉಳಿದಿವೆ. ಅಂದರೆ ಮಾನವನು ಎಷ್ಟು ಹೊಂದಿದರೂ ಇನ್ನೂ ಹೊಂದಬೇಕಾದದ್ದು ಇದೆ ಎಂದು ಇದರಿಂದ ತಿಳಿಯುತ್ತದೆ ಅಲ್ಲವೇ?

ಆದರೆ ಭಗವಂತನನ್ನು ಹೊಂದಿದರೆ ಎಲ್ಲವೂ ಹೊಂದಿದಂತೆ. ಕಾರಣ ಭಗವಂತನನ್ನು ಹೊಂದಿದವರಿಗೆ ಈ ಸೃಷ್ಟಿಯಲ್ಲಿನ ಜ್ಞಾನವೆಲ್ಲ ಲಭಿಸುತ್ತದೆ. ಶಾಶ್ವತವಾದ, ಅನಿರ್ವಚನೀಯವಾದ, ವರ್ಣಿಸಲಾರದ, ಬ್ರಹ್ಮಾನಂದವು ಲಭಿಸುತ್ತದೆ. ಶಾಂತಿ ಲಭಿಸುತ್ತದೆ, ತೃಪ್ತಿ ಲಭಿಸುತ್ತದೆ, ಭಯ ಹೋಗುತ್ತದೆ, ಅಹಂಕಾರ ನಶಿಸುತ್ತದೆ. ಲೋಭ ಹೋಗುತ್ತದೆ, ಧರ್ಮ ಗೋಚರಿಸುತ್ತದೆ. ಎಷ್ಟೋ ಶಕ್ತಿಗಳು ಲಭಿಸುತ್ತದೆ. ಒಂದು ವಿಧವಾಗಿ ವಿಶ್ವಾಮಿತ್ರನಂತೆ ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡುತ್ತಾರೆ. ಇವೆಲ್ಲವೂ ಭಗವಂತನನ್ನು ಹೊಂದಿದರೆ ಲಭಿಸುವ ಲಾಭಗಳು.

ಆದ್ದರಿಂದ ಜೀವನವೆಲ್ಲ ಭಗವಂತನಿಂದ ಬಯಸುವುದಲ್ಲ, ಭಗವಂತನನ್ನೇ ಬಯಸಬೇಕು. ಭಗವಂತನಿಂದ ಹೊಂದಲು ಪ್ರಯತ್ನಿಸುವುದಲ್ಲ, ಭಗವಂತನನ್ನೇ ಹೊಂದಲು ಪ್ರಯತ್ನಿಸಿ. ನಿಮ್ಮ ಜೀವನವೇ ಧನ್ಯವಾಗುತ್ತದೆ. ಸ್ತೋತ್ರಗಳನ್ನು ಓದಿ ನೀವು ತಿಳಿದುಕೊಳ್ಳಬೇಕಾದದ್ದು ಇದೇ... ಋಷಿಗಳು ನಮಗೆ ನೀಡಿದ ಸಂದೇಶ ಅಂದರೆ ಭಗವಂತನು ಉನ್ನತವಾದವನು ಆತನನ್ನು ಹೊಂದಬೇಕೆಂದು ತಿಳಿದುಕೊಳ್ಳುವುದೇ ಸೋತ್ರಗಳಿಂದ ಬರುವ ಲಾಭ. ಅದೇ ಸ್ತೋತ್ರಗಳಿಂದ ನಮಗೆ ಬರುವ ಪುಣ್ಯ. ಇದೇ ಸ್ತೋತ್ರಗಳಲ್ಲಿ ಅಂತರಾರ್ಥ. ಅಂದರೆ ಸ್ತೋತ್ರಗಳ ಅರ್ಥ. ಭಗವಂತನ ಹಿರಿಮೆಯನ್ನು ತಿಳಿದುಕೊಳ್ಳುವುದು. ಇದರ ಅಂತರಾರ್ಥ ಭಗವಂತನನ್ನು ಹೊಂದಬೇಕೆಂದು ತಿಳಿದುಕೊಳ್ಳುವುದು.

**(ಬ್ರಹ್ಮಾನಂದವನ್ನು ಹೊಂದುವವರೆಗೂ, ಅಂದರೆ ಭಗವಂತನನ್ನು ಹೊಂದುವವರೆಗೂ ನೀವು ಕೋಟಿ ಜನ್ಮಗಳೆತ್ತಿದರೂ, ಅಶಾಂತಿ ದುಃಖ ನಿಮ್ಮನ್ನು ಬಿಡುವುದಿಲ್ಲ )**

# ಜಪ



ಹಾಗಾದರೆ ಭಗವಂತ ಇದ್ದಾನೆ ಎಂದು ತಿಳಿದುಕೊಂಡ ಮಾತ್ರಕ್ಕೆ ಆತನು ಉನ್ನತವಾದವನು ಎಂದು ತಿಳಿದುಕೊಂಡ ಮಾತ್ರಕ್ಕೆ ನಮ್ಮ ಕಷ್ಟಗಳು ಹೋಗಿವೆಯೇ? ಭಗವಂತನನ್ನು ಸೇರಲು ಅದು ಸಾಕೇ? ಅಂದರೆ ಸಾಕಾಗುವುದಿಲ್ಲ. ಅದಕ್ಕೆ ನಮ್ಮ ಹಿರಿಯರು, ಪಂಡಿತರು ಜಪಗಳನ್ನು ಪರಿಚಯಿಸಿದರು.


ಏಕೆಂದರೆ ಸಾಮಾನ್ಯ ಜನರಿಗೆ ಅವರಿಗೆ ಇರುವ ಸಮಸ್ಯೆಗಳಿಂದ, ಜವಾಬ್ದಾರಿಗಳಿಂದ ನಿತ್ಯ ಜೀವನದಲ್ಲಿ ಅನೇಕ ಕೆಲಸಗಳ ಒತ್ತಡದಿಂದ ಭಗವಂತನು ಎಷ್ಟು ಉನ್ನತವಾದವನಾದರೂ, ಅವನನ್ನು ಮರೆತು ಹೋಗುವ ಅವಕಾಶವಿದೆ. ಹಾಗೆ ಭಗವಂತನನ್ನು ಮರೆತರೆ ಪ್ರಯೋಜನವೇನು? ಏನೂ ಇರುವುದಿಲ್ಲ ಅಲ್ಲವೇ? ಅದಕ್ಕೆ ಈ ಜಪಗಳು.

ಅಂದರೆ ಭಗವಂತನ ಹೆಸರಿನಲ್ಲಿ, ನಾಮಗಳೊಂದಿಗೆ, ಮಂತ್ರ ರೂಪಕವಾಗಿ ಮತ್ತೆ ಮತ್ತೆ ನೆನಪಿಸಿಕೊಳ್ಳಲು, ಹಿರಿಯರು, ಪಂಡಿತರು ಜಪಗಳನ್ನು ಕಂಡುಹಿಡಿದರು. ಹಾಗೆ ಸಮಯ ದೊರೆತಾಗಲೆಲ್ಲಾ ಭಗವಂತನನ್ನು ಮನಸ್ಸಿನಲ್ಲಿ ಸ್ಮರಿಸುವುದರಿಂದ ಜಪಿಸುವುದರಿಂದ ಆತನನ್ನು ಮರೆಯದೆ ಇರುತ್ತಾರೆ.

ಅದಕ್ಕೆ ತುಂಬಾ ಜನರು ಎಲ್ಲರಿಗೂ ಕೇಳುವಂತೆ, ಇನ್ನೂ ಕೆಲವರು ತಮ್ಮ ಮನಸ್ಸಿನಲ್ಲಿಯೇ "ಕೃಷ್ಣಾ ಕೃಷ್ಣಾ.. ಎಂದು ರಾಮ.. ರಾಮ.. ಎಂದು ಶಿವ.. ಶಿವಾ ಎಂದು. ಸಾಯಿ ರಾಮ್..." ಸಾಯಿ ರಾಮ್ ಎಂದು ಹೇಳಿಕೊಳ್ಳುತ್ತಾರೆ. ಮನಸ್ಸಿನಲ್ಲಿ ಸ್ಮರಿಸುತ್ತಾರೆ, ಜಪಿಸುತ್ತಾರೆ. ಹಾಗೆ ಜಪ ಮಾಡುವುದರಿಂದ ಭಗವಂತನನ್ನು ಮರೆಯದೇ ಇರಬಲ್ಲವರಾಗುತ್ತಾರೆ. ಅಂದರೆ ಜಪದಿಂದ ಬರುವ ಲಾಭ, ಪುಣ್ಯ ಭಗವಂತನನ್ನು ಮರೆಯದಂತೆ ಇರುವುದೇ ಆಗಿದೆ. ಇದನ್ನು ಶಿರಡಿ ಬಾಬಾ ನವವಿಧ ಭಕ್ತಿಗಳಲ್ಲಿ ಮೂರನೇದಾದ 'ಸ್ಮರಣೆ' ಎಂದಿದ್ದಾರೆ.

ಆಲೋಚಿಸಿ ಹಾಗೆ ಭಗವಂತನು ಇದ್ದಾನೆ ಎಂದು ತಿಳಿದುಕೊಂಡ ಮಾತ್ರಕ್ಕೆ ಆತ ಉನ್ನತವಾದವನು ಎಂದು ತಿಳಿದರೆ ಮಾತ್ರಕ್ಕೆ ಆತನನ್ನು ಮರೆಯದೇ ಇದ್ದರೆ ಮಾತ್ರಕ್ಕೆ ಎಲ್ಲಾ ಸರಿ ಹೋಗುವುದೇ? ನಮ್ಮ ಕಷ್ಟಗಳು ಪರಿಹಾರವಾಗುವುದೇ? ಸಮಸ್ಯೆಗಳು ಹೋಗುತ್ತವೆಯೇ...? ಅಂದರೆ ಖಂಡಿತ ಇಲ್ಲ. ಪೂಜೆಗಳು, ಸ್ತೋತ್ರಗಳು, ಜಪಗಳಿಂದ ಬರುವ ಪುಣ್ಯ ಸಾಕಾಗುವುದೇ...? ಎಂದರೆ ಇಲ್ಲ ಸಾಲುವುದಿಲ್ಲ.

ಹಾಗಾದರೆ ನಮ್ಮ ಸಮಸ್ಯೆಗಳು ಹೋಗಬೇಕೆಂದರೆ, ಕಷ್ಟಗಳು ತೊಲಗಬೇಕೆಂದರೆ, ಇವುಗಳೆಲ್ಲವುಗಳಿಂದ ಶಾಶ್ವತವಾಗಿ ಹೊರಬರಬೇಕೆಂದರೆ, ಅಂದರೆ ಮುಕ್ತಿ ಬರಬೇಕೆಂದರೆ ಇವುಗಳನ್ನು ಮಾಡಿ ಲಾಭವಿಲ್ಲ, ಪ್ರಯೋಜನವಿಲ್ಲ. ಏಕೆಂದರೆ ಇಷ್ಟು ಮಾಡಿದರೂ, ಭಗವಂತನನ್ನು ಆಶ್ರಯಿಸದೆ, ಅಂದರೆ ಸೇರದೆ, ಅಂದರೆ ಹೊಂದದಿದ್ದರೆ ಯಾರ ಕಷ್ಟಗಳು ಹೋಗುವುದಿಲ್ಲ. ಸಮಸ್ಯೆಗಳು ತೀರುವುದಿಲ್ಲ. ಹಾಗಾದರೆ ಭಗವಂತನನ್ನು ಆಶ್ರಯಿಸಬೇಕೆಂದರೆ ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳೋಣ.



# ಭಗವಂತನೆಂದರೆ ಯಾರು?

ಭಗವಂತನನ್ನು ಆಶ್ರಯಿಸಬೇಕೆಂದರೆ ಮುಖ್ಯವಾಗಿ ಮೂರು ವಿಷಯಗಳನ್ನು ನಾವು ತಿಳಿದುಕೊಳ್ಳಬೇಕು.

1)ಭಗವಂತನು ಯಾರು?

2)ಎಲ್ಲಿರುತ್ತಾನೆ?

3)ಹೇಗೆ ಆಶ್ರಯಿಸಬೇಕು?

ನಿಜವಾಗಿಯೂ ಈ ವಿಷಯಗಳನ್ನು ತಿಳಿಯದೆ ಭಗವಂತನನ್ನು ಹೇಗೆ ಆಶ್ರಯಿಸುತ್ತಾರೆ? ಆತನನ್ನು ಆಶ್ರಯಿಸದೆ ನಮ್ಮ ಕಷ್ಟಗಳು ಹೇಗೆ ಹೋಗುತ್ತವೆ? ಆದ್ದರಿಂದ ಮುಖ್ಯವಾಗಿ ಈ ಮೂರು ವಿಷಯಗಳನ್ನು ತಿಳಿದುಕೊಳ್ಳೋಣ.

ಏಕೆಂದರೆ ಎಲ್ಲರೂ ಪೂಜೆಗಳನ್ನು ಮಾಡುವುದು, ಸ್ತೋತ್ರಗಳನ್ನು ಓದುವುದು, ಜಪಗಳನ್ನು ಮಾಡುವುದರಲ್ಲಿ ಮುಳುಗಿ, ಈ ಮೂರು ವಿಷಯಗಳನ್ನು ಮರೆತಿದ್ದಾರೆ. ನಿಜವಾಗಿಯೂ ಭಗವಂತನ ಕುರಿತು ತಿಳಿದುಕೊಳ್ಳಬೇಕೆಂಬ ಆಲೋಚನೆಯೇ ಇಲ್ಲ. ತಾವು ಮಾಡುವುದೇ ಸಾಕು ಎಂದುಕೊಳ್ಳುತ್ತಾರೆ. ಆದ್ದರಿಂದ ಪೂಜೆಗಳು, ಸ್ತೋತ್ರಗಳು ಜಪಗಳೊಂದಿಗೆ ಮುಗಿಸುತ್ತಿದ್ದಾರೆ. ಆದರೆ ಕಷ್ಟಗಳು ಹೋಗಬೇಕೆಂದರೆ, ಸಮಸ್ಯೆಗಳು ತೊಲಗಬೇಕೆಂದರೆ ಖಂಡಿತ ಭಗವಂತನನ್ನು ಆಶ್ರಯಿಸಲೇಬೇಕು.

ಇದಕ್ಕೆ ಚಿಕ್ಕ ಉದಾಹರಣೆ ನೋಡೋಣ, ನಿಮಗೆ ಫೋನ್ ಮೂಲಕ ಪರಿಚಯವಾದ ಸ್ನೇಹಿತ ದಿಲ್ಲಿಯಲ್ಲಿ ಇದ್ದಾನೆ ಎಂದು ಕೊಳ್ಳೋಣ, ಆತ ಹೇಗೆ ಇರುತ್ತಾನೋ? ಎಲ್ಲಿ ಇರುತ್ತಾನೋ...ಆತನ ಬಳಿಗೆ ಹೇಗೆ ಸೇರಬೇಕು ಎನ್ನುವುದು ನಿಮಗೆ ತಿಳಿದಿಲ್ಲ. ಆದರೆ ನಿಮಗೆ ದೆಹಲಿಯಲ್ಲಿ ಕೆಲಸವಿದೆ. ಫೋನ್‌ನಲ್ಲಿ ಮಾತನಾಡಿದಾಗ ಆತ, "ನನ್ನ ಬಳಿ ಬಂದರೆ ನಿನ್ನ ಕೆಲಸವನ್ನು ನಾನು ಮಾಡಿಕೊಡುತ್ತೇನೆ" ಎಂದು ಫೋನ್‌ನಲ್ಲಿ ಹೇಳಿರುತ್ತಾನೆ.

ನೀವು ದೆಹಲಿಗೆ ಹೋಗುತ್ತೀರಾ...ನಿಮ್ಮ ಸ್ನೇಹಿತನಿಗೆ ಫೋನ್ ಮಾಡೋಣ ಎಂದುಕೊಳ್ಳುವಿರಿ. ಆದರೆ ಕೈಜಾರಿ ನಿಮ್ಮ ಫೋನ್ ಕೆಳಗೆ ಬಿದ್ದು ಫೋನ್ನಲ್ಲಿರುವ ರೆಕಾರ್ಡ್ ಆಗಿರುವುದೆಲ್ಲ ಅಳಿಸಿಹೋಗಿದೆ. ಈಗ ನೀವು ನಿಮ್ಮ ಸ್ನೇಹಿತನಿಗೆ ಫೋನ್ ಮಾಡಲು ಅವಕಾಶವಿಲ್ಲ. ಆತನ ಕುರಿತು ತಿಳಿದುಕೊಳ್ಳಬೇಕೆಂದರೆ ಫೋನ್ ನಂಬರ್ ಇಲ್ಲ. ಮೇಲಾಗಿಯೇ ನಿಮ್ಮಷ್ಟಕ್ಕೆ ನೀವು ಆತನ ಬಳಿಗೆ ಹೋಗೋಣವೆಂದರೆ ಆತ ಹೇಗಿದ್ದಾನೋ ತಿಳಿದಿಲ್ಲ. ಎಲ್ಲಿರುತ್ತಾನೋ ನಿಮಗೆ ತಿಳಿದಿಲ್ಲ. ಆತನನ್ನು ಹೇಗೆ ಭೇಟಿಯಾಗಬೇಕು ತಿಳಿದಿಲ್ಲ.

ಈಗ ಹೇಳಿ ನೀವು ಆತನ ಬಳಿಗೆ ಹೇಗೆ ಹೋಗಬಲ್ಲಿರಾ? ಆತನನ್ನು ಆಶ್ರಯಿಸುವಿರಾ? ಆದರೆ ನಿಮ್ಮ ಕೆಲಸ ಆಗುವುದೇ? ಏನು ನಡೆಯುವುದಿಲ್ಲ ಅಲ್ಲವೇ?

ಹಾಗೆಯೇ ಭಗವಂತ ಯಾರೋ ತಿಳಿದುಕೊಳ್ಳದೇ,...ಎಲ್ಲಿರುತ್ತಾನೋ ತಿಳಿದುಕೊಳ್ಳದೆ.. ಅಂದರೆ ಆತನನ್ನು ಹೇಗೆ ಸೇರಬೇಕು ಎಂದು ತಿಳಿದುಕೊಳ್ಳದೆ ಆತನನ್ನು ಹೇಗೆ ಆಶ್ರಯಿಸುವಿರಿ ಅಂದರೆ ಹೇಗೆ ಸೇರಬಲ್ಲಿರಿ? ಹೇಳಿ. ನಿಮಗೆ ಪೂಜೆಯಿಂದ ಭಗವಂತನ ಕುರಿತು ತಿಳಿದಿದೆ. ಸ್ತೋತ್ರಗಳಿಂದ ಆತ ಉನ್ನತವಾದವನೆಂದು ತಿಳಿದಿದೆ. ಜಪಗಳಿಂದ ಆತನನ್ನು ಮರೆಯದಂತೆ ಇದ್ದೀರಿ... ಆದರೆ ಇವೆಲ್ಲವೂ ಆತನನ್ನು ಸೇರಲು ಸಹಕಾರಿಯಾಗುವವೇ? ಹೇಳಿ. ಇವೆಲ್ಲವೂ ನಮಗೆ ತೃಪ್ತಿಯನ್ನು ನೀಡುತ್ತವೆಯೇ ಹೊರತು



ಭಗವಂತನ ಬಳಿಗೆ ಸೇರಿಸಿ ಮುಕ್ತಿಯನ್ನು ನೀಡಲಾರವು ಅಲ್ಲವೇ? ಅಂದರೆ ಕಷ್ಟಗಳನ್ನು ತೊಲಗಿಸುವುದಿಲ್ಲ ಅಲ್ಲವೇ?

ನಿಮಗೆ ನಿಮ್ಮ ಸ್ನೇಹಿತನ ಹೆಸರು ಆನಂದನೆಂದು ತಿಳಿದಿದೆ. ಆತ ದೊಡ್ಡ ಪ್ರಖ್ಯಾತವಾದ ವ್ಯಕ್ತಿಯೆಂದು ತಿಳಿದಿದೆ. ಆದರೆ ಇದು ಆತನ ಬಳಿಗೆ ಸೇರಿಸುವುದೇ? ಸೇರಿಸುವುದಿಲ್ಲ ಅಲ್ಲವೇ!! ಆತನನ್ನು ಆಶ್ರಯಿಸಲು ಇದು ಸಾಕಾಗುವುದಿಲ್ಲ. ನೀವು ಆನಂದ್... ಆನಂದ್ ಎಂದು ಗಟ್ಟಿಯಾಗಿ ಕೂಗುತ್ತಿದ್ದೀರಾ... ಮೈಕ್ ತೆಗೆದುಕೊಂಡು ಗಟ್ಟಿಯಾಗಿ ಕೂಗುತ್ತಿದ್ದೀರಾ ಎಂದುಕೊಳ್ಳಿ...ಆಗ ನಿಮ್ಮ ಸ್ನೇಹಿತನನ್ನು ಸೇರಬಲ್ಲಿರಾ!? ಇಲ್ಲ ಹಾಗೆ ದೆಹಲಿಯ ಬೀದಿಗಳೆಲ್ಲ ಸುತ್ತಿದರೂ ಸೇರಲಾರಿರಿ.

ಹಾಗೆಯೇ ಭಗವಂತ ಯಾರು? ಎಲ್ಲಿರುತ್ತಾನೆ? ಹೇಗೆ ಸೇರಿಕೊಳ್ಳಬೇಕು? ಎಂದು ತಿಳಿದುಕೊಳ್ಳದೆ ಸುಮ್ಮನೆ ಕೂಗಿದರೂ, ಮೈಕಿನಲ್ಲಿ ದೊಡ್ಡದಾಗಿ ಹೇಳಿದರೂ, ಆ ಪುಣ್ಯಕ್ಷೇತ್ರವೆಂದು...ಈ ಪುಣ್ಯಕ್ಷೇತ್ರವೆಂದು ಅಲ್ಲಿ ಇಲ್ಲಿ ಸುತ್ತಿದರು ಪ್ರಯೋಜನ ಇರುವುದೇ? ಆದ್ದರಿಂದ ಮುಖ್ಯವಾಗಿ ಮೇಲಿನ ಮೂರು ವಿಷಯಗಳನ್ನು ತಿಳಿದುಕೊಳ್ಳಬೇಕು... ತಿಳಿದುಕೊಳ್ಳೋಣ.

ಈ ಮೂರು ಪ್ರಶ್ನೆಗಳಿಗೆ ಉತ್ತರ ಯಾರು ಹೇಳಬೇಕಾದ ಅಗತ್ಯವಿಲ್ಲ ಈ ಮೂರು ಪ್ರಶ್ನೆಗಳು ಭಗವಂತನು ಯಾರು? ಎಲ್ಲಿರುತ್ತಾನೆ? ಹೇಗೆ ಆಶ್ರಯಿಸಬೇಕು? ಎನ್ನುವುದಕ್ಕೆ ಸಾಕ್ಷಾತ್ ಶ್ರೀ ಕೃಷ್ಣ ಭಗವಾನನೇ ಭಗವದ್ಗೀತೆಯ ಮೂಲಕ ನಮ್ಮೆಲ್ಲರಿಗೂ ತಿಳಿಸಿದ್ದಾರೆ.

ಮೊದಲ ಎರಡು ಪ್ರಶ್ನೆಗಳು ಹತ್ತನೆಯ ಅಧ್ಯಾಯದಲ್ಲಿ 20ನೇಯ ಶ್ಲೋಕದ ಮೂಲಕ, ಹಾಗೆ ಮೂರನೇ ಪ್ರಶ್ನೆ 12ನೆಯ ಅಧ್ಯಾಯದಲ್ಲಿ ಮೂರು ನಾಲ್ಕು ಶ್ಲೋಕಗಳ ಮೂಲಕ ಶ್ರೀ ಕೃಷ್ಣ ಭಗವಾನರು ತಿಳಿಸಿದ್ದಾರೆ. ಅದನ್ನು ತಿಳಿದುಕೊಳ್ಳೋಣ.


**ಶ್ಲೋ ॥ ಅಹಂಮಾತ್ಮ ಗುಡಾಕೇಶ ಸರ್ವಭೂತಾಶಯಸ್ಥಿತಃ।**

**ಅಹಮಾದಿಶ್ಚ ಮಧ್ಯಂ ಚ ಭೂತಾನಾ ಮನ್ತ ಏವ ಚ ॥ (ಭ.ಗೀ.10–20)**

ತಾ:– ಅರ್ಜುನ ನಾನು ಆತ್ಮ ಸಮಸ್ತ ಜೀವಿಗಳಲ್ಲಿ ಸ್ಥಿತವಾಗಿದ್ದೇನೆ. ಈ ಜೀವಿಗಳ ಆದಿ ಮಧ್ಯ ಅಂತ್ಯಗಳು ನಾನೇ ಆಗಿದ್ದೇನೆ.

ಇದರ ಅರ್ಥ ನಾನು 'ಆತ್ಮನು.' ಎಲ್ಲಾ ಜೀವಿಗಳಲ್ಲಿ ಇರುವವನು, ಈ ಜೀವನು ಸೃಷ್ಟಿಸಲ್ಪಡುವುದಕ್ಕಿಂತ ಮೊದಲೇ ಅಂದರೆ ಸೃಷ್ಟಿ ಏರ್ಪಡುವ ಮೊದಲೇ ಈ ಆದಿಯಲ್ಲಿ ಇದ್ದೇನೆ. ಅವು ಇರುವಾಗ ಅಂದರೆ ಈ ಸೃಷ್ಟಿ ಇರುವಾಗ ಇದ್ದೇನೆ ಹಾಗೆಯೇ ಈ ಜೀವಿಗಳು ಅಂತ್ಯವಾದರೂ ಅಂದರೆ ಈ ಸೃಷ್ಟಿ ಅಂತ್ಯವಾದಾಗ ಕೂಡಾ, ಅಂದರೆ ಅಂತ್ಯದಲ್ಲಿಯೂ ಕೂಡಾ ಇರುತ್ತೇನೆ ಎಂದು ಭಗವಾನರು ಹೇಳಿದ್ದಾರೆ.

ಮೇಲಿನ ಶ್ಲೋಕಗಳ ಅನುಸಾರ 'ಆತ್ಮವೇ' ಭಗವಂತ ಎಂದು ತಿಳಿದುಕೊಳ್ಳಬಹುದು. ಗೀತೆಯಲ್ಲಿ ಭಗವಾನರು ಎಲ್ಲಿಯೂ ನಾನು ವಿಗ್ರಹ, ಫೋಟೋ ಎಂದು ಹೇಳಿಕೊಂಡಿಲ್ಲ. ಆದ್ದರಿಂದ ಮೊದಲನೇ ಪ್ರಶ್ನೆ ಭಗವಂತ ಯಾರು? ಎಂದರೆ ಆತ್ಮ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಮತ್ತೊಂದು ಬಾರಿ ತಿಳಿದುಕೊಳ್ಳಿ 'ಆತ್ಮವೇ' ಭಗವಂತ



# "ಭಗವಂತನು ಎಲ್ಲಿರುತ್ತಾನೆ?"

ಎರಡನೇ ಪ್ರಶ್ನೆ ಆತ ಎಲ್ಲಿರುತ್ತಾನೆ? ಎನ್ನುವುದಕ್ಕೆ ಈ ಶ್ಲೋಕದಲ್ಲಿಯೇ ಆತ ಹೇಳಿದ್ದಾರೆ.

**"ಅಹಂಮಾತ್ಮಾ ಗುಡಾಕೇಶ ಸರ್ವ ಭೂತಾಶಯ ಸ್ಥಿತಃ"**

ಅರ್ಜುನ ನಾನು 'ಆತ್ಮ' ಸಮಸ್ತ ಭೂತಗಳಲ್ಲಿ ಸ್ಥಿತವಾಗಿದ್ದೇನೆ. ಅಂದರೆ ಎಲ್ಲ ಜೀವಿಗಳಲ್ಲಿ ಇದ್ದೇನೆ ಎಲ್ಲಾ ಪ್ರಾಣಿಗಳಲ್ಲೂ ಇದ್ದೇನೆ ಎಂದು ಭಗವಂತ ಹೇಳಿದ್ದಾನೆ.

ಎಲ್ಲಾ ಪ್ರಾಣಿಗಳು ಎಂದರೆ ಪ್ರಾಣವಿರುವ ಪ್ರತಿ ಜೀವಿಯಲ್ಲಿಯೂ, ಭಗವಂತ ಇದ್ದಾನೆ. ಆತ್ಮರೂಪದಲ್ಲಿದ್ದಾನೆ ಎಂದು ತಿಳಿದುಕೊಳ್ಳಬೇಕು. ಅಂದರೆ ಮಾನವರೆಲ್ಲರಲ್ಲೂ ಒಬ್ಬನೇ ಭಗವಂತ ಇರುವ ಹಾಗೆ ಪ್ರಾಣಿಗಳಲ್ಲಿ ಇರುವುದು ಆ ಭಗವಂತನೇ... ಕೋಳಿಯಲ್ಲಿ, ಮೇಕೆಯಲ್ಲಿ, ಮೀನಿನಲ್ಲಿ, ಹಂದಿಯಲ್ಲಿ, ಆಮೆಯಲ್ಲಿ ಹಾಗೆ ಯಾವ ಪ್ರಾಣಿಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೂ, ಆ ಪ್ರಾಣಿಯಲ್ಲಿ ಇರುವುದು ಭಗವಂತನೇ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಅಂದರೆ ಎಲ್ಲಾ ಪ್ರಾಣಿಗಳು ಭಗವಂತನ ಸ್ವರೂಪಗಳೇ ಎಂದು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು.




ಆದ್ದರಿಂದ ಕೋಳಿಯನ್ನು ಹಿಂಸಿಸಿದರೂ, ಭಗವಂತನನ್ನು ಹಿಂಸಿಸಿದಂತೆಯೇ. ಮೇಕೆಯನ್ನು ಹಿಂಸಿಸಿದರೂ, ಭಗವಂತನನ್ನು ಹಿಂಸಿಸಿದಂತೆಯೇ. ಮೀನನ್ನು ಹಿಂಸಿಸಿದರೂ, ಭಗವಂತನನ್ನು ಹಿಂಸಿಸಿದಂತೆಯೇ ಎಂದು ತಿಳಿದುಕೊಳ್ಳಬೇಕು. ಆಲೋಚಿಸಿ... ಒಂದು ಬೊಂಬೆಯನ್ನು ಇಟ್ಟು ಷೋಡಶೋಪಚಾರ ಪೂಜೆಗಳನ್ನು ಮಾಡಿ ಭಗವಂತನನ್ನು ಆನಂದ ಪಡಿಸುತ್ತಿದ್ದೇವೆ ಎಂದುಕೊಳ್ಳುವವರು, ಭಗವಂತವೆಂದರೆ ಇಷ್ಟ ಎನ್ನುವವರು, ಹಾಗೆ ಸಾಕ್ಷಾತ್ ಭಗವಂತ ಸ್ವರೂಪರಾದ ಆ ಜೀವಿಗಳನ್ನು, ಪ್ರಾಣಿಗಳನ್ನು ಹಿಂಸಿಸಬಹುದೇ? ಕೊಲ್ಲಬಹುದೇ? ಅವುಗಳ ಮಾಂಸವನ್ನು ತಿನ್ನಬಹುದೇ? ಹಾಗೆ ತಿನ್ನುತ್ತಾ ಅವುಗಳ ಹಿಂಸೆಗೆ ಕಾರಣರಾಗಬಹುದೇ! ಆಲೋಚಿಸಿ. ಒಂದು ಕಡೆ ಭಗವಂತನೆಂದರೆ ಇಷ್ಟ ಎನ್ನುತ್ತಾರೆ, ಆತನನ್ನು ಪೂಜೆಯ ಮೂಲಕ

ಆನಂದಗೊಳಿಸುತ್ತಿದ್ದಾರೆ. ಸ್ತೋತ್ರಗಳನ್ನು ಓದಿ ಆತ ತುಂಬಾ ಉನ್ನತವಾದವನು ಎಂದು ಕೀರ್ತಿಸುತ್ತಿದ್ದಾರೆ. ಜಪಗಳನ್ನು ಮಾಡಿ ನಾನು ಆತನನ್ನು ಯಾವಾಗಲೂ ಮರೆಯದಂತೆ ಸ್ಮರಿಸುತ್ತಾ ಇರುತ್ತೇನೆ ಎನ್ನುತ್ತಾರೆ. ಆದರೆ ಆತನ ರೂಪಗಳನ್ನು ಏಕೆ ಹಿಂಸಿಸುತ್ತಿದ್ದಾರೆ? ಹಾಗೆ ಮಾಡಿದರೆ ಭಗವಂತನು ಆನಂದಿಸುವನೇ? ಆತನ ಅನುಗ್ರಹ ಹೊಂದಬಲ್ಲರೆ? ಹಾಗೆ ಭಗವಂತನನ್ನು ಹಿಂಸಿಸಿದರೆ ಆತನ ಅನುಗ್ರಹದ ಮಾತಿರಲಿ ಆಗ್ರಹಕ್ಕೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಜೀವಿಗಳನ್ನು ಅಂದರೆ ಪ್ರಾಣಿಗಳನ್ನು ಹಿಂಸಿಸಬಾರದು, ಕೊಲ್ಲಬಾರದು. ಅವುಗಳ ಮಾಂಸವನ್ನು ತಿನ್ನಬಾರದು, ಎಲ್ಲಕ್ಕಿಂತ ಮೊದಲು ಭಗವಂತನು ಯಾರು ಎಂದು ತಿಳಿದುಕೊಳ್ಳಬೇಕು.

ಮತ್ತೊಂದು ಬಾರಿ ನೆನಪಿರಲಿ ಈ ಸೃಷ್ಟಿಯಲ್ಲಿ ಎಲ್ಲವೂ ಭಗವಂತನ ಸ್ವರೂಪಗಳೇ, ಎಲ್ಲವು ಒಂದೇ...! ಅದೇ ಶ್ರೀ ಕೃಷ್ಣ ಭಗವಾನರ ಸಂದೇಶ. ಆದ್ದರಿಂದ ಕೋಳಿ ಅಂದರೆ ಕೋಳಿಯಲ್ಲ. ಕೋಳಿ ರೂಪದಲ್ಲಿರುವ ಭಗವಂತ. ಮೇಕೆಯೆಂದರೆ ಮೇಕೆ ರೂಪದಲ್ಲಿರುವ ಭಗವಂತ. ಮೀನು ಎಂದರೆ ಮೀನಿನ ರೂಪದಲ್ಲಿರುವ ಭಗವಂತ ಅದಕ್ಕೆ ಭಗವಂತನನ್ನು ದಶಾವತಾರಗಳಾಗಿ ವರ್ಣಿಸುತ್ತಾರೆ.

ಮತ್ಸ್ಯಾವತಾರ ಎಂದರೆ ಜಲಚರಗಳೆಲ್ಲವೂ ಭಗವಂತನೇ ಎಂದು ಸಂದೇಶ ನೀಡುವ ಅವತಾರ. ಹಾಗೆಯೇ ಕೂರ್ಮಾವತಾರ ಎಂದರೆ ಪ್ರಾಣಿಗಳಲ್ಲಿ ಉಭಯಚರಗಳೆಲ್ಲವೂ ಭಗವಂತನೇ ಎಂದು ಸಂದೇಶ ನೀಡುವ ಅವತಾರ. ಹಾಗೆ ವರಾಹ ಅವತಾರ ಎಂದರೆ ಪ್ರಾಣಿಗಳಲ್ಲಿ ಭೂಚರಗಳೆಲ್ಲವೂ, ಭಗವಂತನೇ ಎಂದು ಸಂದೇಶ ನೀಡುವ ಅವತಾರ. ಆದ್ದರಿಂದ ತಿಳಿದುಕೊಳ್ಳಿ ರೂಪಗಳು ಬೇರೆಯಾದರೂ ಅವುಗಳ ಹೆಸರುಗಳು ಬೇರೆಯಾದರೂ ಭಗವಂತ ಒಬ್ಬನೇ... ಎಲ್ಲವೂ ಆತನೇ, ಎಲ್ಲಾ ಆತನೇ.

ಆಭರಣಗಳು ಬೇರೆಯಾದರೂ, ಅವುಗಳ ಆಕಾರಗಳು ಬೇರೆ, ಬೇರೆಯಾಗಿದ್ದರೂ, ಅದರ ಹೆಸರು ಬೇರೆ ಬೇರೆಯಾಗಿದ್ದರೂ, ಅದರಲ್ಲಿ ಇರುವುದು ಚಿನ್ನವೇ. ಒಂದೇ ಚಿನ್ನದಿಂದ ಬಂದಿದ್ದು. ಹಾಗೆಯೇ ಕರಗಿಸಿದರೆ ಎಲ್ಲಾ ಒಂದೇ ಚಿನ್ನದಂತೆ ಬದಲಾಗುತ್ತದೆ. ಹಾಗೆಯೇ ಈ ಸೃಷ್ಟಿಯಲ್ಲಿನ ಜೀವಿಗಳು ಜೀವ ರಾಶಿಗಳು ಕೂಡ ನೋಡಲು ಬೇರೆ ಬೇರೆ ಆಕಾರಗಳೊಂದಿಗೆ ಬೇರೆ ಬೇರೆ ಜಾತಿಗಳಾಗಿ ಕಾಣುತ್ತವೆ ಹಾಗೆ ಬೇರೆ ಬೇರೆ ಆಕಾರಗಳೊಂದಿಗೆ ಇರುವಾಗ ಗುರಿತಿಸಲು ಬೇರೆ ಬೇರೆ ಹೆಸರು ಇಟ್ಟು ಕರೆಯುತ್ತಾರೆ. ಅಂದ ಮಾತ್ರಕ್ಕೆ ಎಲ್ಲಾ ಬೇರೆ ಬೇರೆ ಹೇಗೆ ಆಗುತ್ತವೆ? ಎಲ್ಲವೂ ಒಬ್ಬ ಭಗವಂತನಿಂದ ಉದ್ಭವಿಸಿರುವವೇ. ಆದ್ದರಿಂದ ಎಲ್ಲವೂ ಒಂದೇ. ಎಲ್ಲದರಲ್ಲಿ ಇರುವುದು ಒಂದೇ. ಅದೇ ಶ್ರೀ ಕೃಷ್ಣ ಭಗವಾನರ ಸಂದೇಶ.

ನೋಡಿರಿ ಮಡಿಕೆಗಳ ಆಕಾರಗಳು ಬೇರೆ ಬೇರೆಯಾಗಿ ಕಾಣುತ್ತವೆ. ಅವುಗಳ ಹೆಸರುಗಳು ಬೇರೆಯಾಗಿರುತ್ತವೆ. ಅವುಗಳ ಪ್ರಯೋಜನಗಳು ಕೂಡ ಬೇರೆಯಾಗಿಯೇ ಇರುತ್ತವೆ. ಆದರೆ ಎಲ್ಲಾ ಒಂದೇ ಮಣ್ಣಿನಿಂದ ಬರುವಂತವೇ. ಮಡಿಕೆಗಳು ಒಡೆದು ಹೋದರೆ ಎಲ್ಲಾ ಮತ್ತೆ ಮಣ್ಣಿನಂತೆ ಬದಲಾಗುತ್ತದೆ. ಆದ್ದರಿಂದ ತಿಳಿದುಕೊಳ್ಳಿ ಈ ಸೃಷ್ಟಿಯಲ್ಲಿ ಇರುವುದು ಭಗವಂತ ಒಬ್ಬನೇ. ಅದಕ್ಕೆ ಶ್ರೀ ತಾಳ್ಳಪಾಕ ಅನ್ನಮಾಚಾರ್ಯರು "ಬ್ರಹ್ಮವೊಂದೇ ಪರಬ್ರಹ್ಮ ಒಂದೇ" ಎಂದು ಹೇಳುತ್ತಾ", ಸೃಷ್ಟಿಯಲ್ಲಿ ಹೀನ ಅಧಿಕ ಎನ್ನುವುದು ಯಾವುದು ಇಲ್ಲ. ಎಲ್ಲರಿಗೂ ಶ್ರೀ ಹರಿಯೇ ಅಂತರಾತ್ಮ" ಎನ್ನುತ್ತಾರೆ. ಅಂದರೆ ಭಗವಂತನು ಒಬ್ಬನೇ... ಕಾಣದಿರುವ ಭಗವಂತನು ಒಬ್ಬನೇ. ಆದ್ದರಿಂದ ನೋಡಿದರೆ ಈ ಸೃಷ್ಟಿಯಲ್ಲಿ ಹೀನವಾದದ್ದು ಅಧಿಕವಾದದ್ದು ಎನ್ನುವುದು ಯಾವುದು ಇಲ್ಲ. ಕಾರಣ 'ಎಲ್ಲರಲ್ಲೂ ಶ್ರೀಹರಿಯೇ ಅಂತರಾತ್ಮವಾಗಿದ್ದಾನೆ' ಎಂದಿದ್ದಾರೆ ಅನ್ನಮಾಚಾರ್ಯರು.

ಆದ್ದರಿಂದ ಈ ಸೃಷ್ಟಿಯಲ್ಲಿ ರಾಜ ಉನ್ನತವಾದವನು ಅಲ್ಲ ಬಡವನು ಕಡಿಮೆ ಸ್ಥಾಯಿಯವನಲ್ಲ. ಕಾರಣ ಇಬ್ಬರಲ್ಲಿ ಇರುವುದು ಶ್ರೀಹರಿಯೇ... ಇಬ್ಬರಲ್ಲಿ ಇರುವುದು ಒಬ್ಬನೇ ಶ್ರೀಹರಿಯಾದಾಗ ಯಾರು ಉನ್ನತವಾದವರು? ಯಾರು ಕೀಳು? ಇಬ್ಬರು ಸಮಾನವೇ ಅಲ್ಲವೇ. ಹಾಗೆ ಬ್ರಾಹ್ಮಣರು ಉನ್ನತ ಕುಲದವನಲ್ಲ, ಶೂದ್ರನು ಕೀಳು ಕುಲದವನು ಅಲ್ಲ. ಕಾರಣ ಇಬ್ಬರಲ್ಲಿ ಇರುವುದು ಯಾರು? ಒಬ್ಬನೇ ಅಲ್ಲವೇ? ಶ್ರೀಹರಿಯಲ್ಲವೇ? ಭಗವಂತನಲ್ಲವೇ? ಆದ್ದರಿಂದ ಬೋಧಿಸುವ ಪಂಡಿತನು ಕೇಳುವ ಪಾಮರನೂ ಕೂಡ ಸಮಾನರೇ. ಈ ಸೃಷ್ಟಿಯಲ್ಲಿ ತಾರತಮ್ಯಗಳು ಇಲ್ಲ. ಕಾರಣ ಈ ಸೃಷ್ಟಿಯಲ್ಲಿ ಭಗವಂತನಲ್ಲದ್ದು, ಇಲ್ಲದ್ದು, ಯಾವುದೂ ಇಲ್ಲ. ಆದ್ದರಿಂದ ಅದಕ್ಕೆ "ಸರ್ವಂ ಖಲ್ವಿದಂ ಬ್ರಹ್ಮ" ಎಂದಿದ್ದಾರೆ.

ಇದೇ ಹಿಂದೂ ಧರ್ಮ ಬೋಧಿಸುವ ಸತ್ಯ. ಈ ಸತ್ಯವನ್ನು ಅರ್ಥ ಮಾಡಿಕೊಂಡವರೇ ನಿಜವಾದ ಹಿಂದುಗಳು. ಅಷ್ಟೇ ಹೊರತು ಅನೇಕ ವೇಷಗಳನ್ನು ಹಾಕಿಕೊಂಡವರು. ಪ್ರತ್ಯೇಕತೆಗಳು, ಅಂದರೆ ನಾಮಗಳು ವಿಭೂತಿಗಳು ಮಾಲೆಗಳನ್ನು ಅಲಂಕರಿಸಿಕೊಂಡರೆ, ಹಿಂದುಗಳು ಆಗುವುದಿಲ್ಲ. ಎಲ್ಲವೂ ಒಂದೇ ಎಲ್ಲಾ ಒಂದೇ ಎಂದು ಭಾವಿಸಿ ಆ ವಿಧವಾಗಿ ವರ್ತಿಸುವವರು ಹಿಂದುಗಳು. ಅವರೇ ಹಿಂದೂ ಧರ್ಮವನ್ನು ಅರ್ಥಮಾಡಿಕೊಂಡವರು. ಭಗವಾನನ ಸಂದೇಶ ಅರ್ಥ ಮಾಡಿಕೊಂಡಿರುವವರು.

ಈ ಸತ್ಯವನ್ನು ತಿಳಿದುಕೊಂಡರೆ... ನಾನು ಧನವಂತ, ಉನ್ನತವಾದವನು ಎಂದು ಗರ್ವಿಸುವುದಿಲ್ಲ. ಅವನು ಬಡವ ಕಡಿಮೆ ಜಾತಿ ಎಂದು ಕೀಳಾಗಿ ನೋಡುವುದಿಲ್ಲ. ಏಕೆಂದರೆ ಎಲ್ಲರಲ್ಲಿ ಇರುವುದು ಆ ಶ್ರೀಹರಿಯೇ... ಅಲ್ಲವೇ! ಅಂದರೆ ಧನವಂತನಲ್ಲಿರುವುದು, ಬಡವನಲ್ಲಿ ಇರುವುದು ಒಬ್ಬನೇ ಶ್ರೀಹರಿಯಾದಾಗ ಯಾರು ಹೆಚ್ಚು? ಯಾರು ಕಡಿಮೆ? ಆಲೋಚಿಸಿ.

ಅದಕ್ಕೆ ಎಷ್ಟೋ ಜ್ಞಾನವನ್ನು ಇರುವ ಆದಿ ಶಂಕರಚಾರ್ಯರು ಕೂಡ ಈ ಚಿಕ್ಕ ಸತ್ಯವನ್ನು ಅರ್ಥ ಮಾಡಿಕೊಳ್ಳದಿರುವಾಗ.... ನಾನೇ ಎಲ್ಲರಿಗಿಂತ ದೊಡ್ಡವನು ಎನ್ನುವ ಭಾವನೆಯಲ್ಲಿದ್ದಾಗ, ಆತನಿಗೆ ಪರಮಶಿವನು ಚಿಕ್ಕ ಸಂಘಟನೆಯ ಮೂಲಕ ಕಣ್ತೆರೆಸಿದನು...

ಕಾಶಿ ಕ್ಷೇತ್ರದಲ್ಲಿ ಒಮ್ಮೆ ಶಂಕರಾಚಾರ್ಯರು ಗಂಗಾ ನದಿಯಲ್ಲಿ ಸ್ನಾನ ಮಾಡಿ ಶಿಷ್ಯರೊಂದಿಗೆ ಹಿಂತುರುಗುತ್ತಿದ್ದಾಗ ಆತನಿಗೆ ದಾರಿಯಲ್ಲಿ ಒಬ್ಬ ಚಂಡಾಲ ಎದುರಾದನು. ಕೂಡಲೇ ಶಿಷ್ಯರು ಆ ಛಂಡಾಲನನ್ನು ಪಕ್ಕಕ್ಕೆ ಸರಿಯಲು ಹೇಳಿದರು. ಅವನು ಸರಿಯಲಿಲ್ಲ. ಆಗ ಶಂಕರಾಚಾರ್ಯರು ಕೂಡ ಸರಿ.. ಸರಿ.. ಎಂದರು. ಆಗ ಛಂಡಾಲನು ನಾನೇಕೆ ಸರಿಯಬೇಕು? ಎಂದನು ಆಗ ಶಂಕರಾಚಾರ್ಯರು ನೀನು ಚಂಡಾಲ ಎಂದರು.

ಕೂಡಲೇ ಆ ಛಂಡಾಲನು, ನಿನಗಿಂತ ನಾನು ಯಾವುದರಲ್ಲಿ ಕಡಿಮೆ? ನಿನ್ನ ದೇಹ ನನ್ನ ದೇಹ ಒಂದೇ ಪಂಚಭೂತಗಳೊಂದಿಗೆ ಏರ್ಪಟ್ಟಿದೆ. ಹಾಗೆಯೇ ನಿನ್ನ ಶರೀರದಲ್ಲಿ ನನ್ನ ಶರೀರದಲ್ಲಿ ಇರುವುದು ಒಂದೇ ಆತ್ಮ. ಹಾಗಾದಾಗ ಯಾವುದರಲ್ಲಿ ನೀನು ಉನ್ನತವಾದವನು? ಎಂದ ಕೂಡಲೇ ಶಂಕರಾಚಾರ್ಯರು ಅರ್ಥ ಮಾಡಿಕೊಂಡು ಈತ ಛಂಡಾಲನಲ್ಲ ನನ್ನ ಕಣ್ಣುಗಳನ್ನು ತೆರೆಯಿಸಲು ಬಂದ ಮಹಾನುಭಾವ ಎಂದು ಗ್ರಹಿಸಿ, ಆತನ ಪಾದಗಳ ಮೇಲೆ ಬಿದ್ದನು. ಕೂಡಲೇ ಆ ಛಂಡಾಲನ ಸ್ಥಾನದಲ್ಲಿ ಪರಮಶಿವನು ಪ್ರತ್ಯಕ್ಷನಾದನು. ಆತ ಶಂಕರಚಾರ್ಯರೊಂದಿಗೆ ಈ ಸೃಷ್ಟಿಯಲ್ಲಿ ಯಾವುದು ಕಡಿಮೆಯಾಗಿ ಕಾಣಿಸಿದರೂ, ಕಡಿಮೆ ಎಂದು ಭಾವಿಸದಿರು. ಎಂದು ವಿವರಿಸಿ ಶಂಕರಾಚಾರ್ಯರಿಗೆ ಜ್ಞಾನೋದಯವನ್ನುಂಟು ಮಾಡಿದರು. ಅವರಲ್ಲಿ ಅಹಂಕಾರವನ್ನು ಪರಮಶಿವನು ತೊಲಗಿಸಿದನು.

ಅದಕ್ಕೆ ಬ್ರಹ್ಮರ್ಷಿ ಸುಭಾಷ್ ಪತ್ರೀಜಿಯವರು ಯಾರೊಂದಿಗೂ ಪಾದಗಳಿಗೆ ನಮಸ್ಕಾರಗಳನ್ನು ಮಾಡಿಸಿಕೊಳ್ಳುವುದಿಲ್ಲ. ಕಾರಣ ತಾನು ಹೆಚ್ಚಲ್ಲ, ಬೇರೆಯವರು ಕಡಿಮೆಯಲ್ಲ ಎಂದು ಭಾವಿಸುವುದರಿಂದ ಹಾಗೆ ಅವರ ವರ್ತನೆ ಇರುತ್ತದೆ. ಎಲ್ಲರೂ ಸಮಾನವೆನ್ನುವ ಭಾವದೊಂದಿಗೆ ಅವರು ಎಲ್ಲರ ಬಳಿ ಹಸ್ತಲಾಘವ ಮಾತ್ರವೇ ತೆಗೆದುಕೊಂಡು ಸಮಭಾವವನ್ನು ಪ್ರದರ್ಶಿಸುತ್ತಾರೆ.

ಆದ್ದರಿಂದ ತಿಳಿದುಕೊಳ್ಳಿ, ಮಾನವರೆಲ್ಲರೂ ಒಂದೇ ಜಾತಿ, ಅಷ್ಟೇ ಅಲ್ಲ ಪ್ರಾಣಿ ಪಕ್ಷಿಗಳು ಜಲಚರಗಳು ಎಲ್ಲವೂ ಒಂದೇ. ಎಲ್ಲ ಭಗವಂತನ ರೂಪಗಳು ಎಂದು ತಿಳಿದುಕೊಳ್ಳಬೇಕು. ಯಾವುದನ್ನು ಹಿಂಸಿಸಬಾರದು. ಯಾವುದನ್ನು ಹಿಂಸಿಸಿದರೂ, ಭಗವಂತನನ್ನು ಹಿಂಸಿಸಿದಂತೆ ಎಂದು ತಿಳಿದುಕೊಳ್ಳಿ. ಯಾವುದನ್ನು ಕೊಲ್ಲಬಾರದು, ಅದರ ಮಾಂಸ ತಿನ್ನಬಾರದು, ಮಾಂಸ ತಿಂದು ಅದರ ಹಿಂಸೆಗೆ ಕಾರಣರಾಗಬಾರದು.

ನಾನು ಆತ್ಮ ನಾನು ಎಲ್ಲ ಜೀವಿಗಳಲ್ಲಿ ಇದ್ದೇನೆ ಎನ್ನುವ ವಿಷಯವನ್ನು ಶ್ರೀ ಕೃಷ್ಣನಂತೆ, ಶಿರಡಿ ಸಾಯಿಬಾಬಾ ಕೂಡ ಹೇಳಿದ್ದಾರೆ. ಸಾಯಿ ಸಚ್ಚರಿತ್ರೆಯಲ್ಲಿ 44ನೇ ಅಧ್ಯಾಯದಲ್ಲಿ 323ನೆಯ ಪುಟದಲ್ಲಿ, ನಾನೆಂದರೆ ಯಾರು? ಎನ್ನುವ ಪೀಠಿಕೆಯಲ್ಲಿ ಬಾಬಾ ಸ್ವಯಂ ಹೀಗೆ ಹೇಳಿದ್ದಾರೆ.

**"ನನ್ನನ್ನು ಹುಡುಕಲು ನೀನು ದೂರವಾಗಲಿ, ಮತ್ತೊಂದು ಕಡೆಯಾಗಲಿ ಹೋಗುವ ಅಗತ್ಯವಿಲ್ಲ. ನಿನ್ನಲ್ಲಿಯೇ ಅಲ್ಲದೆ ಎಲ್ಲ ಜೀವಿಗಳಲ್ಲಿಯೂ ಚೈತನ್ಯ ಅಥವಾ ಅಂತರಾತ್ಮ ಎನ್ನುವ ಒಂದು ವಸ್ತು ಇರುತ್ತದೆ. "ಅದೇ ನಾನು". ಇದನ್ನು ನೀನು ಗ್ರಹಿಸಿ ನಿನ್ನಲ್ಲಿಯೇ ಅಲ್ಲದೆ ಎಲ್ಲದರಲ್ಲಿಯೂ ನನ್ನನ್ನು ನೋಡು."**

ಎಂದು ಬಾಬಾ ಹೇಳಿದ ಈ ಮೇಲಿನ ಸಂದೇಶದ ಅನುಸಾರ ಆತ ಸ್ಪಷ್ಟವಾಗಿ ನಾನು 'ಆತ್ಮ' ನಾನು ನಿನ್ನಲ್ಲಿಯೇ ಅಲ್ಲ ಎಲ್ಲ ಜೀವಿಗಳಲ್ಲಿ ಇದ್ದೇನೆ ಎಂದು ಹೇಳಿದ್ದಾರೆ.

ಹಾಗೆಯೇ 22 ನೆಯ ಅಧ್ಯಾಯದಲ್ಲಿ 170 ನೇ ಪುಟದಲ್ಲಿ, "**ಭಗವಂತನು ಸಕಲ ಜೀವಿಗಳಲ್ಲಿ ಜೀವಿಸುತ್ತಿದ್ದಾನೆ. ಅದು ಸರ್ಪಗಳಾಗಲಿ, ಚೇಳಾಗಲಿ ಆಗಿರಬಹುದು. ಆದ್ದರಿಂದ ನಾವು ಕನಿಕರಿಸಿ ಎಲ್ಲ ಜೀವಿಗಳನ್ನು ಪ್ರೇಮಿಸಬೇಕು. ಅನಗತ್ಯವಾದ ಕಲಹಗಳಲ್ಲಿ, ಕೊಲ್ಲುವುದರಲ್ಲಿ ಪಾಲ್ಗೊಳ್ಳದಂತೆ ಸಹನೆಯಿಂದ ಇರಬೇಕು.ಎಲ್ಲರನ್ನೂ ರಕ್ಷಿಸುವವನೇ ದೇವರೆನಿಸುತ್ತಾನೆ**". ಎಂದಿದ್ದಾರೆ.

ಮೇಲಿನ ಸಂದೇಶದಲ್ಲಿ ಬಾಬಾ ಯಾವ ಜೀವಿಯನ್ನು ಕೊಲ್ಲಬಾರದು ಕಾರಣ ಎಲ್ಲದರಲ್ಲೂ ಭಗವಂತ ವಾಸಿಸುತ್ತಿದ್ದಾನೆ ಎಂದು ಹೇಳಿದ್ದಾರೆ. ಬಾಬಾ ತಾನು 'ಆತ್ಮ' ಎಂದು ಹೇಳುವುದೇ ಅಲ್ಲದೆ ತನ್ನನ್ನು ಆಶ್ರಯಿಸಿದವರಿಗೆ ಅಂದರೆ, ಆತ್ಮದ ಮೇಲೆ ದೃಷ್ಟಿ ಇರುವವರಿಗೆ ಯಾವ ಹಾನಿ ಆಗುವುದಿಲ್ಲ. ಯಾವ ಬಾಧೆಗಳು ಆಗುವುದಿಲ್ಲ ಎಂದು ಹೇಳಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ 27ನೇ ಪೇಜಿನಲ್ಲಿ ಬಾಬಾ ಹೇಳಿದ ವಿಷಯ "**ನೀವು ಎಲ್ಲಿ ಇದ್ದರೂ ಏನು ಮಾಡುತ್ತಿದ್ದರು ನನಗೆ ತಿಳಿದಿದೆ ಎನ್ನುವುದು ನಿಮಗೆ ನೆನಪಿರಲಿ. ನಾನು ಎಲ್ಲರ ಹೃದಯಗಳನ್ನು ಪಾಲಿಸುವವನು. ಎಲ್ಲಾ ಹೃದಯಗಳಲ್ಲಿ ವಾಸಿಸುವವನು. ನಾನು ಪ್ರಪಂಚದಲ್ಲಿರುವ ಚರಾಚರ ಜೀವಕೋಟಿಯಲ್ಲಿ ಆವರಿಸಿದ್ದೇನೆ. ಯಾರಾದರೆ ತಮ್ಮ ದೃಷ್ಟಿಯನ್ನು ನನ್ನ ಕಡೆಗೆ ಹಾಯಿಸುತ್ತಾರೋ, ಅವರಿಗೆ ಹಾನಿ, ಕಷ್ಟ ಎನ್ನುವುದು ಇರುವುದಿಲ್ಲ. ನನ್ನನ್ನು ಮರೆತವನಿಗೆ ಮಾಯೆಯು ಶಿಕ್ಷಿಸುವುದು. ಹುಳುಗಳು, ಇರುವೆಗಳು ಮತ್ತಿತರ ದೃಶ್ಯಮಾನ ಚರಾಚರ ಜೀವಕೋಟಿಯಲ್ಲಿಯೂ ನನ್ನ ಶರೀರವೇ, ನನ್ನ ರೂಪವೇ...**"

ಬಾಬಾ ಹೇಳಿದ ಸಂದೇಶದ ಅನುಸಾರ ನಾವು ಮೊದಲನೆಯ ಎರಡು ಪ್ರಶ್ನೆಗಳಿಗೆ ಉತ್ತರವನ್ನು ತಿಳಿದುಕೊಂಡೆವು. ಅಂದರೆ ಭಗವಂತನು 'ಆತ್ಮ' ಎಂದು ತಿಳಿದುಕೊಂಡೆವು.


ಆತ ಎಲ್ಲಾ ಜೀವಿಗಳಲ್ಲಿ ಇರುತ್ತಾನೆ ಎಂದು ತಿಳಿದುಕೊಂಡೆವು. ಅಂದರೆ ನಮ್ಮಲ್ಲಿಯೂ ಇದ್ದಾನೆ ಎಂದು ಸ್ಪಷ್ಟವಾಗಿ ಅರ್ಥ ಮಾಡಿಕೊಂಡೆವು. ಮೂರನೇ ಪ್ರಶ್ನೆ ಎಂದರೆ ನಮ್ಮಲ್ಲಿರುವ ಭಗವಂತನನ್ನು ಹೇಗೆ ಆಶ್ರಯಿಸಬೇಕು? ಹೇಗೆ ಆಶ್ರಯಿಸಬೇಕು ಅಂದರೆ ಹೇಗೆ ಸೇರಬೇಕು? ಎನ್ನುವುದನ್ನು ತಿಳಿಯಬೇಕು. ಇದು ತುಂಬಾ ಮುಖ್ಯ. ಕಾರಣ ಭಗವಂತನನ್ನು ಸೇರುವ ಪ್ರಯತ್ನ ಮಾಡದೇ ಯಾವ ಸಮಸ್ಯೆಯಿಂದ ಕಷ್ಟಗಳಿಂದ ಹೊರಬರಲಾರೆವು. ಭಗವಂತನನ್ನು ಸೇರದೇ ಸಮಸ್ಯೆಗಳಿಂದ ಶಾಶ್ವತವಾಗಿ ಎಂದಿಗೂ ಹೊರಬರಲಾರೆವು. ಅಂದರೆ ಮುಕ್ತಿ ಹೊಂದಲಾರೆವು. ಆದ್ದರಿಂದ ಭಗವಂತನನ್ನು ಸೇರುವ ಮಾರ್ಗವನ್ನು ತಿಳಿದುಕೊಳ್ಳಬೇಕು.

ಗಮನಿಸಿದರೆ, ತುಂಬಾ ಜನ ಗುರುಗಳು ಮೊದಲ ಎರಡು ವಿಷಯ ಅಂದರೆ, ಭಗವಂತನು ಆತ್ಮ. ಆತ ಎಲ್ಲರಲ್ಲೂ ಇದ್ದಾನೆ ಎಂದು ಹೇಳುತ್ತಾರೆ. ಆದರೆ ಒಳಗೆ ಇರುವವನನ್ನು ಹೇಗೆ ಸೇರಬೇಕು? ಎನ್ನುವುದನ್ನು ತುಂಬಾ ಜನ ಹೇಳಲಾರರು. ಸ್ತೋತ್ರ ಓದು, ಜಪಗಳನ್ನು ಮಾಡು ಎಂದು ಮಾತ್ರ ಹೇಳುತ್ತಾರೆ. ನೆನಪಿರಲಿ ಭಗವಂತ ಹೊರಗೆ ಇಲ್ಲ ಎಲ್ಲರಲ್ಲಿ ಇದ್ದಾನೆ. ಅಂದರೆ ನಮ್ಮಲ್ಲಿಯೇ ಇದ್ದಾನೆ. ಆದ್ದರಿಂದ ಬಾಹ್ಯ ಆರಾಧನೆಗಳನ್ನು ಎಷ್ಟು ಮಾಡಿದರೂ, ಭಗವಂತನನ್ನು ಸೇರಲಾರೆವು. ಇವೆಲ್ಲವೂ ಕೋರಿಕೊಳ್ಳಲು ಉಪಯೋಗಕ್ಕೆ ಬರುತ್ತವೆ. ಆದರೆ **"ಕೋರುವವನಿಗಿಂತ ಸೇರುವವನೇ ಉನ್ನತವಾದವನು"** ಕಾರಣ ಅವನು ಸಮಸ್ತ ದುಃಖಗಳಿಂದ ಶಾಶ್ವತವಾಗಿ ಹೊರಬರುತ್ತಾನೆ.

ಅದಕ್ಕೆ ಲಲಿತಾ ಸಹಸ್ರನಾಮದಲ್ಲಿ "ಅಂತರ್ಮುಖ ಸಮಾರಾಧ್ಯ ಬಹಿರ್ಮುಖ ಸುದುರ್ಲಭ" ಎಂದು ಹೇಳಲಾಗಿದೆ. ಅಂದರೆ ಅಂತರಂಗದಲ್ಲಿ ಲಭಿಸುತ್ತೇನೆ ಹೊರಗೆಲ್ಲೂ ಲಭಿಸುವುದಿಲ್ಲ ಎನ್ನುವುದೇ ಇದರ ಅರ್ಥ.

**{ ಕಾಗೆಯ ಬಾಯಲ್ಲಿ ಎಷ್ಟು ಹಲ್ಲುಗಳಿವೆ ಲೆಕ್ಕ ಮಾಡಬೇಕೆಂದುಕೊಳ್ಳುವ ವಿಧವಾಗಿ ತುಂಬಾ ಜನರು ಹೊರ ಪ್ರಪಂಚದಲ್ಲಿ ದೈವವನ್ನು ನೋಡಬೇಕೆಂದು ಪ್ರಯತ್ನಿಸುತ್ತಿರುತ್ತಾರೆ}**

# ಭಗವಂತನನ್ನು ಹೇಗೆ ಸೇರಬೇಕು?



ಹಾಗಾದರೆ ಅಂತರಂಗದಲ್ಲಿರುವ ಭಗವಂತನನ್ನು ಆಶ್ರಯಿಸಬೇಕೆಂದರೆ, ಸೇರಬೇಕೆಂದರೆ,ಏನು ಮಾಡಬೇಕು? ಈ ವಿಷಯ ನಮಗೆ ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದೇನೆಂದು ಈ ಕೆಳಗಿನ ಶ್ಲೋಕಗಳಲ್ಲಿ ನೋಡೋಣ.

**ಶ್ಲೋ॥ ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ**
**ಪರ್ಯುಪಾಸತೇ**
**ಸರ್ವತ್ರಗಮಚಿನ್ತ್ಯಂ ಕೂಟಸ್ಥಮಚಲಂ ಧ್ರುವಮ್**
**(ಭ.ಗೀ.12–3 )**

**ಶ್ಲೋ॥ ಸಂನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ**
**ತೇ ಪ್ರಾಪ್ನುವಂತಿ ಮಾಮೇವ ಸರ್ವ ಭೂತ ಹಿತೆ ರತಾ: (ಭ.ಗೀ.12–4)**

ತಾ :– ಯಾರು ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡು ಎಲ್ಲೆಡೆಯೂ ಸಮಭಾವವುಳ್ಳವರಾಗಿ, ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟುಮಾಡುವ ಆಸಕ್ತಿಯುಳ್ಳವರಾಗಿ ಇಂಥಹುದು ಎಂದು ನಿರ್ದೇಶಿಸಲು ಶಕ್ಯವಾಗದಿರುವ, ನಿರ್ವಿಕಾರವಾದ, ಚಂಚಲಗೊಳ್ಳದ, ನಿತ್ಯವಾದ ಎಲ್ಲವನ್ನು ವ್ಯಾಪಿಸಿರುವ "ಅಕ್ಷರ ಪರ ಬ್ರಹ್ಮವನ್ನು" (ಆತ್ಮವನ್ನು) ಧ್ಯಾನಿಸುತಿದ್ದಾರೋ, ಅವರು ನನ್ನನ್ನು ಹೊಂದುತ್ತಿದ್ದಾರೆ.

ಮೇಲಿನ ಎರಡು ಶ್ಲೋಕಗಳ ಮೂಲಕ ಭಗವಂತನನ್ನು ಹೇಗೆ ಸೇರಬೇಕು? ಹೊಂದಬೇಕು... ಯಾರು ಸೇರಬಲ್ಲರು? ಏನು ಮಾಡಿದರೆ ಸೇರಬಲ್ಲರು... ಎನ್ನುವುದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಅದನ್ನು ಸ್ವಲ್ಪ ವಿವರವಾಗಿ ತಿಳಿದುಕೊಳ್ಳೋಣ. ಆತ ಮುಖ್ಯವಾಗಿ, "ಯಾರು ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಂಡು" ಎನ್ನುವುದನ್ನು ಒತ್ತಿ ಹೇಳಿದ್ದಾರೆ.

ಇದರ ಅನುಸಾರ ಭಗವಂತನನ್ನು ಸೇರಬೇಕೆಂದರೆ, ಮೊದಲು ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಳ್ಳಬೇಕು. ಅದಕ್ಕೆ ಇಂದ್ರಿಯಗಳೆಂದರೆ, ಏನು ಎನ್ನುವುದನ್ನು ತಿಳಿದುಕೊಳ್ಳಬೇಕು. ಮುಖ್ಯವಾಗಿ ಮಾನವರಿಗೆ ಎರಡು ವಿಧವಾದ ಇಂದ್ರಿಯಗಳಿವೆ ಅವು 1) ಬಾಹ್ಯೇಂದ್ರಿಯಗಳು 2) ಅಂತರೇಂದ್ರಿಯಗಳು

ಬಾಹ್ಯೇಂದ್ರಿಯಗಳಲ್ಲಿ ಎರಡು ವಿಧಗಳು. 5 ಜ್ಞಾನೇಂದ್ರಿಯಗಳು, 5 ಕರ್ಮೇಂದ್ರಿಯಗಳು. ಹಾಗೆಯೇ ಅಂತರೇಂದ್ರಿಯ ಅಂದರೆ ಮನಸ್ಸು. ಶ್ರೀ ಕೃಷ್ಣ ಭಗವಾನನು ಹೇಳಿದಂತೆ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದರೆ, ಮೊದಲು

ಕಣ್ಣುಮುಚ್ಚಬೇಕು, ಬಾಯಿ ಮುಚ್ಚಬೇಕು. ಕೈಗಳನ್ನು ಲಾಕ್ ಮಾಡಿ, ಕಾಲುಗಳನ್ನು ಲಾಕ್ ಮಾಡಬೇಕು. ಹಾಗೆ ಮಾಡಿದರೆ ನಾವು ಬಾಹ್ಯೇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಳ್ಳುವವರಾಗುತ್ತೇವೆ. ಹೀಗೆ ಮಾಡುವುದು ಸುಲಭವೇ... ಇದು ಯಾರಿಗಾದರೂ ಸಾಧ್ಯವೇ. ಆದರೆ ಅಂತರೇಂದ್ರಿಯವಾದ ಮನಸ್ಸನ್ನು ಸ್ವಾಧೀನ ಪಡಿಸಿಕೊಳ್ಳುವುದೇ ತುಂಬಾ ಕಷ್ಟ. ಕಾರಣ ಹಾಗೆ ಕಣ್ಣು ಮುಚ್ಚಿದ ಕೂಡಲೇ ಯಾರಿಗಾದರೂ, ಎಂತಹವರಿಗಾದರೂ ವಿಧವಿಧವಾದ ಆಲೋಚನೆಗಳು ಬರುತ್ತವೆ. ಮನಸ್ಸು ನಾವು ಹೇಳಿದಂತೆ ಕೇಳುವುದಿಲ್ಲ. ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ. ನಾವು ಒಂದು ಹೇಳಿದರೆ, ಅದು ಮತ್ತೊಂದು ಮಾಡುತ್ತದೆ. ಹಲವು ವಿಧಗಳ ಆಲೋಚನೆಗಳೊಂದಿಗೆ ಪರಿಪರಿ ವಿಧವಾಗಿ ಚಲಿಸುತ್ತಾ, ಎಂತಹದೇ ಸಂದರ್ಭದಲ್ಲಿ ನಮಗೆ ಶರಣಾಗುವುದಿಲ್ಲ. ಆದರೆ ಶ್ರೀ ಕೃಷ್ಣ ಭಗವಾನನು ಮುಖ್ಯವಾಗಿ ಇಂದ್ರಿಯಗಳೆಲ್ಲವನ್ನು ಸ್ವಾಧೀನ ಮಾಡಿಕೊಳ್ಳಬೇಕು ಎಂದಿದ್ದಾರೆ. ಅಂದರೆ ಮನಸ್ಸನ್ನು ಕಡ್ಡಾಯವಾಗಿ ಸ್ವಾಧೀನಪಡಿಸಿಕೊಳ್ಳಬೇಕು. ಭಗವಂತನನ್ನು ಸೇರಲು ಮೊದಲು ಇದು ತುಂಬಾ ಮುಖ್ಯ. ಮನಸ್ಸು ಸ್ವಾಧೀನವಾಗದಿದ್ದರೆ ಭಗವಂತನನ್ನು ಸೇರುವುದು ಅಸಾಧ್ಯ. ಹಾಗಾದರೆ ಮನಸ್ಸನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದರೆ ಏನು ಮಾಡಬೇಕು?

ಮನಸ್ಸನ್ನು ಸ್ವಾಧೀನ ಮಾಡಿಕೊಳ್ಳುವುದೆಂದರೆ, ಮನಸ್ಸು ಏನು ಮಾಡಬಾರದು. ಅಂದರೆ ಯಾವ ಯೋಚನೆಗಳು ಇರಬಾರದು. ಹೇಗೆಂದರೆ, ಕಣ್ಣಿನಿಂದ ನೋಡದಂತೆ ಕಣ್ಣನ್ನು ಸ್ವಾಧೀನ ಪಡಿಸಿಕೊಳ್ಳುತ್ತೇವೆ ಮಾತನಾಡದಂತೆ ಬಾಯಿಯನ್ನು ಸ್ವಾಧೀನಪಡಿಸಿಕೊಂಡು ಹಾಗೆಯೇ ಆಲೋಚನೆಗಳು ಬರದಂತೆ ಮನಸ್ಸನ್ನು ಸ್ವಾಧೀನ ಮಾಡಿಕೊಳ್ಳಬೇಕು. ಅಂದರೆ ಮನಸ್ಸಿನೊಂದಿಗೆ ಏನು ಮಾಡಬಾರದು, ಆಲೋಚಿಸಬಾರದು ಒಂದು ವಿಧವಾಗಿ ಮನಸ್ಸು ಶೂನ್ಯ ವಾಗಬೇಕು. ಕನಿಷ್ಠ ನಾಮ, ಮಂತ್ರವನ್ನು ಉಚ್ಚರಿಸಿದರೂ ಮನಸ್ಸು ಕೆಲಸ ಮಾಡುತ್ತಿರುವಂತೆ ಲೆಕ್ಕ. ಮನಸ್ಸು ಸ್ವಾಧೀನದಲ್ಲಿ ಇಲ್ಲದಂತೆ. ಆದ್ದರಿಂದ ಮನಸ್ಸನ್ನು ಶೂನ್ಯ ಮಾಡಬೇಕು, ಮನಸ್ಸಿಗೆ ಪೂರ್ತಿಯಾಗಿ ವಿಶ್ರಾಂತಿ ನೀಡಬೇಕು. ಅದೇ ಮನಸ್ಸನ್ನು ಸ್ವಾಧೀನ ಪಡಿಸಿಕೊಂಡ ಸ್ಥಿತಿ. ಆ ಸ್ಥಿತಿಯೇ ಕೃಷ್ಣ ಭಗವಾನನು ಬೋಧಿಸಿದ ಸ್ಥಿತಿ. ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡ ಸ್ಥಿತಿ.

ಇಲ್ಲಿ ಗಮನಿಸಿದರೆ ಮಾನವನು ಯಾವ ಕೆಲಸವನ್ನಾದರೂ, ಮಾಡಬಲ್ಲನು. ಆದರೆ ಮನಸ್ಸನ್ನು ನಿಯಂತ್ರದಲ್ಲಿ ಇಟ್ಟುಕೊಳ್ಳುವುದೇ ತುಂಬಾ ಕಷ್ಟ. ಏಕೆಂದರೆ ಯಾರಿಗಾದರೂ ಕಣ್ಣು ಮುಚ್ಚಿದ ಕೂಡಲೇ ವಿಪರೀತವಾದ ಆಲೋಚನೆಗಳು ಬರುತ್ತವೆ. ಮನಸ್ಸು ಪರಿಪರಿ ವಿಧವಾಗಿ ಕೋತಿಯಂತೆ ಓಡುತ್ತಾ ಇರುತ್ತದೆ. ಅದನ್ನು ಹಾಗೆ ಬಿಟ್ಟರೆ ಅದು ಎಂದಿಗೂ

ನಮ್ಮ ಸ್ವಾಧೀನವಾಗುವುದಿಲ್ಲ. ಆದರೆ ವಶಪಡಿಸಿಕೊಳ್ಳಬೇಕು. ಮನಸ್ಸನ್ನು ಶಾಂತಗೊಳಿಸಿಕೊಳ್ಳಬೇಕು. ಹಾಗೆ ಮಾಡಬೇಕೆಂದರೆ, ಸುಲಭವಾದ ಸರಳವಾದ ಮಾರ್ಗ ಬೇಕು. ಸುಲಭವಾದ ಸರಳವಾದ ಮಾರ್ಗವನ್ನು ಬ್ರಹ್ಮರ್ಷಿ ಸುಭಾಷ್ ಪತ್ರೀಜಿಯವರು ಎಲ್ಲರಿಗೂ ನೀಡಿದ್ದಾರೆ. ಅದೇ "ಶ್ವಾಸದ ಮೇಲೆ ಗಮನ" ಧ್ಯಾನ. ಅಂದರೆ ಯಾರಾದರೂ ಕಣ್ಣು ಮುಚ್ಚಿಕೊಂಡಾಗ, ಆಲೋಚನೆಗಳು ಬರುತ್ತದೆ. ಹಾಗೆ ಆಲೋಚಿಸುವ ಮನಸ್ಸನ್ನು ಶ್ವಾಸದ ಮೇಲೆ ಹೊರಳಿಸಬೇಕು. ಹಾಗೆ ಮಾಡಿದಾಗಲೂ, ಮತ್ತೆ ಆಲೋಚನೆಗಳು ಬರುತ್ತಲೇ ಇರುತ್ತದೆ. ಅವುಗಳ ಹಿಂದೆ ನಾವು ಹೋಗುತ್ತಾ ಇರುತ್ತೇವೆ. ಆಗ ಮತ್ತೆ ಶ್ವಾಸದ ಮೇಲೆ ಮನಸ್ಸನ್ನು ಹೊರಳಿಸಬೇಕು. ಹಾಗೆ ಮಾಡುತ್ತಾ.... ಮಾಡುತ್ತಾ, ನಿಧಾನವಾಗಿ ಆಲೋಚನೆಗಳು ಕಡಿಮೆಯಾಗುತ್ತಾ ಇರುತ್ತವೆ. ಅಂದರೆ ಮನಸ್ಸು ಶಾಂತಿಸುತ್ತಾ ಇರುತ್ತದೆ. ನಿಧಾನವಾಗಿ ಆಲೋಚನೆಗಳು ಕಡಿಮೆಯಾಗಿ ಒಂದು ಸ್ಥಾಯಿಯಲ್ಲಿ ಒಂದು ಸ್ಥಿತಿಯಲ್ಲಿ ಆಲೋಚನೆಗಳೆಲ್ಲವೂ ನಿಂತು ಹೋಗುತ್ತವೆ. ಇನ್ನು ಮನಸ್ಸು ಕೆಲಸ ಮಾಡುವುದಿಲ್ಲ, ಶಾಂತಗೊಳ್ಳುತ್ತದೆ. ಪೂರ್ತಿಯಾಗಿ ವಿಶ್ರಾಂತ ಸ್ಥಿತಿಯಲ್ಲಿರುತ್ತದೆ. ಅಲ್ಲಿ ಮನಸ್ಸು ಇರುತ್ತದೆ ಹೊರತು, ಅದರ ಪಾತ್ರವೇನು ಇರುವುದಿಲ್ಲ. ಅದೇ ಮನಸ್ಸನ್ನು ಸ್ವಾಧೀನ ಪಡಿಸಿಕೊಂಡ ಸ್ಥಿತಿ. ಮನಸ್ಸು ನಮ್ಮ ಸ್ವಾಧೀನವಾದ ಸ್ಥಿತಿ. ಶ್ರೀ ಕೃಷ್ಣ ಪರಮಾತ್ಮ ಹೇಳಿದ ಸ್ಥಿತಿ.

ಈ ಸ್ಥಿತಿ "ಶ್ವಾಸದ ಮೇಲೆ ಗಮನ" ಇರಿಸಿದರೆ ಮಾತ್ರವೇ ಬರುತ್ತದೆ. ಬೇರೆ ಯಾವ ಪ್ರಯತ್ನದಿಂದ ಸಾಧ್ಯವಾಗುವುದಿಲ್ಲ. ಆಚರಿಸಿದರೇ ಯಾರಿಗಾದರೂ ಸರಿ ತಿಳಿಯುತ್ತದೆ. ಕಾರಣವೇನೆಂದರೆ, ನಾಮ, ಮಂತ್ರಪಠಣೆ ಇವುಗಳೆಲ್ಲವುದರಿಂದ, ಮನಸ್ಸು ಕೆಲಸ ಮಾಡುತ್ತಲೇ ಇರುತ್ತದೆ. ಆದರೆ ಮನಸ್ಸು ಶೂನ್ಯವಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ಶ್ವಾಸದ ಮೇಲೆ ಗಮನ ಇರಿಸಲೇಬೇಕು.

ಹಾಗೆಯೇ ಇಂದ್ರಿಯಗಳೆಲ್ಲವನ್ನು ಸ್ವಾಧೀನ ಮಾಡಿಕೊಂಡರೇನೇ, ಭಗವಂತನನ್ನು ಧ್ಯಾನಿಸಬಲ್ಲೆವು. ಅಂದರೆ ಆತ್ಮದ ಮೇಲೆ ಗಮನ ಇರಿಸಬಲ್ಲೆವು. ಕಾರಣ ಇಂದ್ರಿಯಗಳು ಕೆಲಸ ಮಾಡುತ್ತಿದ್ದರೆ, ನಮ್ಮ ದೃಷ್ಟಿ ಆತ್ಮದ ಮೇಲೆ ಇಲ್ಲದಂತೆಯೇ ಎಂದರ್ಥ. ಕಾರಣ ಆತ್ಮ ನಮ್ಮ ಮಾನವ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಅಂದರೆ ಭಗವಂತನು ಜ್ಞಾನೇಂದ್ರಿಯಗಳೊಂದಿಗೆ ಅಲ್ಲದೆ ಮನಸ್ಸಿನೊಂದಿಗೂ ಊಹಿಸಲಾರೆವು. ಕಾರಣ ಆತನು ನಿರ್ವಿಕಾರವಾದವನು. ಅಂದರೆ ಭಗವಂತನಿಗೆ ಆಕಾರವಿಲ್ಲ. ಅಷ್ಟೇ ಅಲ್ಲ ಆತ ನಿತ್ಯವಾದವನು. ಸೃಷ್ಟಿಯೆಲ್ಲಾ ವ್ಯಾಪಿಸಿರುವವನು. ಅಲ್ಲದೆ ಆತ "ಅಕ್ಷರ ಪರಬ್ರಹ್ಮ" ಅಂದರೆ ನಾಶವಿಲ್ಲದ, ಶಾಶ್ವತವಾದವನು ಆಗಿದ್ದರೂ, ಮನೋ ನೇತ್ರಗಳಿಗೆ ಕಾಣಿಸಲಾರದವನು.

ಆದ್ದರಿಂದ ಆತನನ್ನು ಧ್ಯಾನಿಸಬೇಕೆಂದರೆ ಆತನ ಮೇಲೆ ಗಮನ ಇರಿಸಬೇಕು ಎಂದರೆ, ಮೊದಲು ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಅಂದರೆ ಇಂದ್ರಿಯಗಳನ್ನು ಉಪಯೋಗಿಸಬಾರದು. ಆ ಸ್ಥಿತಿ ಬರಲು "ಶ್ವಾಸದ ಮೇಲೆ ಗಮನ" ಇರಿಸಬೇಕು.

ಹಾಗೆ ಧ್ಯಾನಿಸಿದವರು ಅಂದರೆ ಗಮನ ಇರಿಸಿದವರು ನನ್ನನ್ನೇ ಹೊಂದುತ್ತಾರೆ ಎಂದು ಶ್ರೀ ಕೃಷ್ಣ ಭಗವಾನನು ಮೇಲಿನ ಶ್ಲೋಕಗಳಲ್ಲಿ ಹೇಳಿದ್ದಾನೆ. ಅಂದರೆ ಭಗವಂತನನ್ನು ಸೇರಬಹುದು ಎಂದು ನಾವು ತಿಳಿದುಕೊಳ್ಳಬಹುದು. ಹಾಗೆ ಸೇರಿದವರಿಗೆ ಜೀವನವೇ ಧನ್ಯ. ಕಾರಣ ಈ ಕೆಳಗಿನ ಶ್ಲೋಕದಲ್ಲಿ ಭಗವಂತನೇ ಹೇಳಿದ್ದಾರೆ.

**ಶ್ಲೋ॥ ಆ ಬ್ರಹ್ಮ ಭುವನಾ ಲ್ಲೋಕಾ: ಪುನರಾವರ್ತಿನೋ ಅರ್ಜುನ।**

**ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ॥ (ಭ.ಗೀ.8–16)**

ತಾ :– ಓ ಅರ್ಜುನ! ಆ ಬ್ರಹ್ಮ ಲೋಕಗಳಂತಹ ಲೋಕಗಳನ್ನು ಸೇರಿದರೂ, ಮತ್ತೆ ಜನ್ಮ ತೆಗೆದುಕೊಳ್ಳಲೇಬೇಕು. (ಭೂಲೋಕಕ್ಕೆ ಬರುವೆ) ಆದರೆ ನಾನು ಇರುವಂತಹ ಲೋಕಗಳಿಗೆ ಸೇರಿದರೆ (ಅಂದರೆ ನನ್ನನ್ನು ಸೇರಿದರೆ) ನೀನು ಮತ್ತೆ ಭೂಮಿ ಮೇಲೆ ಮರಳಿ ಬರುವುದಿಲ್ಲ.

ಅಂದರೆ ಭಗವಂತನನ್ನು ಸೇರಿಕೊಂಡವರಿಗೆ ಮತ್ತೆ ಜನ್ಮವಿರುವುದಿಲ್ಲ. ಅವರಿಗೆ ಅಂತಹ ದೊಡ್ಡ ಭಾಗ್ಯಸಿಗುತ್ತದೆ. ದುಃಖದಿಂದ ಶಾಶ್ವತವಾಗಿ ಹೊರಬರುತ್ತಾರೆ. ಭೂಮಿ ಮೇಲೆ ಮಾನವನು ಸಾಧಿಸಬಹುದಾದ್ದು, ಉನ್ನತವಾದದ್ದು ಇದಕ್ಕಿಂತ ಬೇರೆ ಯಾವುದು ಇಲ್ಲ. ಆದ್ದರಿಂದ ಭಗವಂತನನ್ನು ಸೇರುವ ಪ್ರಯತ್ನ ಮಾಡಬೇಕು. ಅಂದರೆ ಧ್ಯಾನ ಮಾಡಬೇಕು.

ಅಂತಹ ಸ್ಥಿತಿ ಉಂಟಾಗಲು ಧ್ಯಾನದೊಂದಿಗೆ ಇನ್ನೂ ಕೆಲವು ವಿಷಯಗಳು ಅನುಸರಿಸಬೇಕೆಂದು ಭಗವಾನರು ಮೇಲಿನ ಶ್ಲೋಕಗಳಲ್ಲಿ ಹೇಳಿದ್ದಾರೆ. ಆತ ಏನು ಹೇಳಿದ್ದಾರೆಂದರೆ, ಎಲ್ಲೆಡೆಯೂ ಸಮಭಾವವುಳ್ಳವರಾಗಿ ಇರಬೇಕು ಎಂದಿದ್ದಾರೆ ಎಲ್ಲೆಡೆ ಅಂದರೆ ಎಲ್ಲರ ಮೇಲೆ, ಎಲ್ಲದರ ಮೇಲೆ ಸಮಭಾವ ಹೊಂದಿರುವುದು.

ನೆನಪಿರಲಿ ನಮ್ಮ ವರ್ತನೆ ನಮ್ಮ ಭಾವವನ್ನು ಸೂಚಿಸುತ್ತದೆ. ಕಾರಣ ನಮ್ಮ ಭಾವಗಳ ಅನುಸಾರ ನಮ್ಮ ವರ್ತನೆ ಇರುತ್ತದೆ. ಸಹಜವಾಗಿ ಲೋಕದಲ್ಲಿ ಹೆಚ್ಚು ಕಡಿಮೆ ಎಲ್ಲರ ವರ್ತನೆಯು ಬೇರೆ ಬೇರೆ ಎನ್ನುವಂತೆಯೇ ಇರುತ್ತದೆ. ಅಂದರೆ ಅವನದು ಬೇರೆ ಕುಲ, ಅವನು ಬೇರೆ ಮತಸ್ಥ, ಬೇರೆ ಪ್ರಾಂತ್ಯದವನು, ಬೇರೆ ದೇಶದವನು, ನಾನು ಹಿಂದೂ, ಅವನು ಮುಸ್ಲಿಂ ಎಂದುಕೊಳ್ಳುತ್ತಾ, ನಾನು ಬ್ರಾಹ್ಮಣನು, ಅವನು ಧನವಂತ ಅವನು

ಬಡವ, ನಾನು ಬುದ್ಧಿವಂತ, ಅವನು ಬುದ್ಧಿಹೀನ, ನಾನು ಈ ದೇಶದವನು ಅವನದು ನಮ್ಮ ದೇಶ ಅಲ್ಲ, ಎಂದುಕೊಳ್ಳುತ್ತಾ ದ್ವೇಷಿಸುವುದು ಕಲಹ ಪ್ರಿಯರಾಗಿರುವುದನ್ನು ನಾವು ಮಾಡುತ್ತಿದ್ದೇವೆ. ಅಂದರೆ ಎಲ್ಲರ ಮೇಲೆ ಸಮಭಾವವನ್ನು ಪ್ರದರ್ಶಿಸಲಾರದೆ ಹೋಗುತ್ತಿದ್ದೇವೆ. ಎಲ್ಲರೂ ಒಂದೇ ಎಂದು ವರ್ತಿಸಲಾಗುತ್ತಿಲ್ಲ, ಭಾವಿಸಲಾಗುತ್ತಿಲ್ಲ.

ಅಷ್ಟೇ ಅಲ್ಲ ನಾವು ಇನ್ನೂ ತುಂಬಾ ವಿಷಯಗಳಲ್ಲಿ ಸಮಭಾವವನ್ನು ಪ್ರದರ್ಶಿಸಲಾಗುತ್ತಿಲ್ಲ. ನಾವು ಧರಿಸುವ, ಅಲಂಕರಿಸಿಕೊಳ್ಳುವ ವಸ್ತ್ರಗಳಾಗಲಿ, ಅಲಂಕಾರಗಳಾಗಲಿ, ಪ್ರತ್ಯೇಕತೆಯನ್ನು ತೋರಿಸುತ್ತಿವೆ. ನಾನು ಬೇರೆ ಅವನು ಬೇರೆ ಎನ್ನುವ ಭಾವ ವ್ಯಕ್ತಪಡಿಸುವ ವಿಧವಾಗಿವೆ. ಹಾಗೆ ಮಾಡಿದರೆ ನಾವು ಎಲ್ಲರ ಮೇಲೆ ಸಮಭಾವ ಹೊಂದಿಲ್ಲದಂತೆಯೇ. ಭಗವಾನನು ಹೇಳಿದ ಸಮಭಾವ ಇಲ್ಲವೆಂದು ಅರ್ಥ. ನೋಡಿ ಕೆಲವರು ಕುಂಕುಮ ಇಡುತ್ತಾರೆ. ಮತ್ತೆ ಕೆಲವರು ಇಡುವುದಿಲ್ಲ. ಇನ್ನು ಕೆಲವರು ಬುರಖಾ ಹಾಕಿಕೊಳ್ಳುತ್ತಾರೆ. ಅಂದರೆ ಅವನು ಬೇರೆ ನಾನು ಬೇರೆ ಎನ್ನುವ ಭಾವ ವ್ಯಕ್ತ ಮಾಡಿದಂತೆ ಅಲ್ಲವೇ... ಎಲ್ಲಾ ಒಂದೇ ಎಲ್ಲರೂ ಭಗವಂತನ ರೂಪಗಳೇ, ಎಲ್ಲರಲ್ಲೂ ಇರುವುದು ಆ ಒಂದು ಭಗವಂತನೇ ಎನ್ನುವ ಸತ್ಯ ಅರ್ಥಮಾಡಿಕೊಳ್ಳದಂತೆ ಅಲ್ಲವೇ! ಸಮಭಾವವನ್ನು ಪ್ರದರ್ಶಿಸದಂತೆ ಅಲ್ಲವೇ?

ಹಾಗೆ ಕೆಲವರು ಕೈಗಳಿಗೆ ಪವಿತ್ರ ದಾರಗಳು, ಕೊರಳಲ್ಲಿ ಅವರಿಗೆ ಇಷ್ಟವಾದ ಸರಗಳು, ಕೈಗಳಿಗೆ ಇಷ್ಟವಾದ ಉಂಗುರಗಳನ್ನು ಹಾಕಿಕೊಳ್ಳುತ್ತಾರೆ. ಹಾಗೆ ಮಾಡುತ್ತಾ ನಾನು ಇಂತಹವರಿಗೆ ಸೇರಿದವನು. ಅವರದು ಬೇರೆ ನಮ್ಮದು ಬೇರೆ ಎನ್ನುವ ಭಾವದೊಂದಿಗೆ ಇರುತ್ತಾ, ಅದನ್ನೇ ಕೈಗಳಲ್ಲಿ ಪ್ರದರ್ಶಿಸುತ್ತಾ ಇರುತ್ತಾರೆ. ಇನ್ನೂ ಕೆಲವರು ಕಷಾಯ ವಸ್ತುಗಳನ್ನು ಧರಿಸುತ್ತಾರೆ. ತಲೆಯನ್ನು ಬೋಳಿಸಿಕೊಳ್ಳುತ್ತಾರೆ ಕೆಲವರು ಜಡೆಗಳನ್ನು ಧರಿಸುತ್ತಾರೆ. ಅಂದರೆ ಇದರ ಅರ್ಥ ಸಮಭಾವ ಇಲ್ಲವೆಂದೇ ಅಲ್ಲವೇ? ಹಾಗೆ ಯಾರಾದರೆ ಸಮಭಾವ ಪ್ರದರ್ಶಿಸದಂತೆ, ಎಲ್ಲಾ ಬೇರೆ ಬೇರೆ ಎನ್ನುವಂತೆ ಪ್ರತ್ಯೇಕತೆಗಳನ್ನು ಪ್ರತ್ಯೇಕ ವೇಷಧಾರಣೆ ಹೊಂದಿರುವರೋ ಎಷ್ಟು ಸಾಧನೆಗಳು ಮಾಡಿದರೂ, ಎಷ್ಟು ಧ್ಯಾನ ಸಾಧನೆ ಮಾಡಿದರೂ, ಭಗವಂತನನ್ನು ಸೇರಲಾರರು ಎಂದು ತಿಳಿದುಕೊಳ್ಳಬೇಕು.

ಕಾರಣ ಭಗವಂತನಿಗೆ ಎಲ್ಲರೂ ಒಂದೇ.. ಅವನಿಗೆ ಎಲ್ಲರೂ ಸಮಾನವೇ. ಎಲ್ಲರಲ್ಲೂ ಆತನೇ ಇದ್ದಾನೆ ಆದ್ದರಿಂದ ಶ್ರೀಕೃಷ್ಣ ಭಗವಾನನು ಸಮಭಾವವುಳ್ಳವರಾಗಿರಬೇಕು ಎಚಿದಿದ್ದಾನೆ.

ಹಾಗೆ ಆತ ಮತ್ತೊಂದು ವಿಷಯವನ್ನು ಕೂಡ ಹೇಳಿದ್ದಾನೆ, ಸಮಸ್ತ ಪ್ರಾಣಿಗಳಿಗೆ

ಹಿತವನ್ನುಂಟು ಮಾಡಲು ಆಸಕ್ತಿ ತೋರಿಸಬೇಕೆಂದಿದ್ದಾರೆ. ಕಾರಣ ಅವು ಕೂಡ ಆತನ ರೂಪಗಳೇ, ಆದರೆ ಲೋಕದಲ್ಲಿ ತಾವು ಮಾನವರು ಪ್ರಾಣಿಗಳು ಬೇರೆ ಎಂದುಕೊಳ್ಳುತ್ತಾ ಅವುಗಳನ್ನು ಹಿಂಸಿಸುತ್ತಾ, ಕೊಲ್ಲುತ್ತಾ ಅವುಗಳ ಮಾಂಸವನ್ನು ಭಕ್ಷಿಸುತ್ತಿದ್ದಾರೆ. ಅವುಗಳಿಗೆ ನರಕವನ್ನು ತೋರಿಸುತ್ತಿದ್ದಾರೆ. ಅಂದರೆ ಭಗವಾನನು ಹೇಳಿದಂತೆ ಅವುಗಳಿಗೆ ಒಳ್ಳೆಯದನ್ನು ಮಾಡುತ್ತಿಲ್ಲ. ಅದರ ಹೊರತಾಗಿ, ಹಿಂಸೆ ನೀಡುತ್ತಿದ್ದಾರೆ. ರಕ್ಷಿಸುವುದನ್ನು ಬಿಟ್ಟು ಭಕ್ಷಿಸುತ್ತಿದ್ದಾರೆ. ಅವುಗಳ ಮೇಲೆ ಹೀನಾತಿ ಹೀನವಾದ ದೌರ್ಜನ್ಯವನ್ನು ಮಾಡುತ್ತಿದ್ದಾರೆ. ಇಂತಹವರು ಅಂದರೆ, ಮಾಂಸ ತಿನ್ನುವವರು ಪ್ರಾಣಿಗಳನ್ನು ವಿಧವಿಧವಾಗಿ ಹಿಂಸೆಗೆ ಗುರಿ ಮಾಡಿ ಅವರು ಎಷ್ಟು ಸಾಧನೆಗಳು ಮಾಡಿದರೂ, ಆರಾಧನೆಗಳು ಮಾಡಿದರೂ, ಧ್ಯಾನ ಮಾಡಿದರೂ, ಭಗವಂತನನ್ನು ಹೊಂದಲಾರರು. ಇದೇ ಶ್ರೀಕೃಷ್ಣ ಭಗವಾನರ ಸಂದೇಶ.

ಆದ್ದರಿಂದ ಯಾರು "ಶ್ವಾಸದ ಮೇಲೆ ಗಮನ" ದ ಮೂಲಕ ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಂಡು ಪ್ರತ್ಯೇಕತೆ ಇಲ್ಲದಂತೆ ಎಲ್ಲರ ಮೇಲೆ ಸಮಭಾವ ಪ್ರದರ್ಶಿಸುತ್ತಾ, ಎಲ್ಲಾ ಜೀವಿಗಳಿಗೆ ಒಳಿತು ಮಾಡುತ್ತಾ ಅಂದರೆ ಜೀವ ಹಿಂಸೆ ಮಾಡದಂತೆ ಅವುಗಳನ್ನು ರಕ್ಷಿಸುತ್ತಾ ಭಗವಂತನ ಮೇಲೆ ಅಂದರೆ ಆತ್ಮದ ಮೇಲೆ ಧ್ಯಾನವಿರಿಸಿ ಧ್ಯಾನ ಮಾಡುವರೋ, ಅವರು ಖಂಡಿತ ಭಗವಂತನನ್ನು ಹೊಂದುತ್ತಾರೆಂದು, ಸೇರುತ್ತಾರೆಂದು ಸಾಕ್ಷಾತ್ ಭಗವಾನರೇ ಸಂದೇಶ ನೀಡಿದ್ದಾರೆ. ಹಾಗೆ ಭಗವಂತನನ್ನು ಹೊಂದಿದವರು ಮುಕ್ತಿಯನ್ನು ಹೊಂದಿದಂತೆ. ತಿಳಿದಿರಲಿ ಹಿಂಸೆಯನ್ನು ಬಿಟ್ಟು ಧ್ಯಾನ ಮಾಡುವುದೇ ಭಗವಂತನನ್ನು ಸೇರುವ ಮಾರ್ಗ.

**{ನಮಗೆ ಗುಡಿಯಲ್ಲಿ ವಿಗ್ರಹವೆಂದರೆ ಇಷ್ಟ ಹೊರತು ನಮ್ಮ ದೇಹದಲ್ಲಿರುವ ದೇವನೆಂದರೆ ಇಷ್ಟವಿಲ್ಲ ಏಕೆಂದರೆ ವಿಗ್ರಹ ಕಾಣಿಸುತ್ತದೆ ದೇಹದಲ್ಲಿರುವ ದೇವರು ಕಾಣಿಸುವುದಿಲ್ಲವಾದ್ದರಿಂದ.}**

# ಆಲಯಗಳು ಏಕೆ?



ಇಲ್ಲಿ ಸಹಜವಾಗಿ ಎಲ್ಲರಿಗೂ ಒಂದು ಸಂದೇಹ ಬರುತ್ತದೆ. ಭಗವಂತನನ್ನು ಸೇರುವ ಮಾರ್ಗ ಧ್ಯಾನವಾದರೆ ಈ ಆಲಯ ಸಾಂಪ್ರದಾಯ ಏಕೆ ಬಂದಿದೆ? ಯಾರು ಇದನ್ನು ಪರಿಚಯಿಸಿದರು? ಎನ್ನುವ ಪ್ರಶ್ನೆ ಉದಯಿಸುತ್ತದೆ ಆಲಯ ಸಾಂಪ್ರದಾಯವನ್ನು ಹಿರಿಯರೇ ತಾನೇ ಪರಿಚಯಿಸಿರುವುದು. ಅಂತಹ ಹಿರಿಯರು ಪಂಡಿತರು ಯಾವ ಪ್ರಯೋಜನವಿಲ್ಲದಿದ್ದರೆ ಈ ಸಂಪ್ರದಾಯವನ್ನು ಏಕೆ ಪರಿಚಯಿಸಿದರು ಎನ್ನುವ ಸಂದೇಹ ಯಾರಿಗಾದರೂ ಬರುತ್ತದೆ. ಅಷ್ಟೇ ಅಲ್ಲ ಹಿಂದಿನಿಂದ ತಲಾತಲಾಂತರದಿಂದ ಬರುತ್ತಿರುವ ಈ ಸಂಪ್ರದಾಯವನ್ನು ಪಂಡಿತರು ಗುರುಗಳು ಎಷ್ಟೋ ಜನ ಅನುಸರಿಸುತ್ತಿದ್ದಾರೆ, ಪ್ರೋತ್ಸಾಹಿಸುತ್ತಿದ್ದಾರೆ. ಹಾಗಾದರೆ ಇವರೆಲ್ಲ ಏಕೆ ಪ್ರೋತ್ಸಾಹಿಸಿದಂತೆ? ಎನ್ನುವ ಸಂದೇಹವೂ ಕೂಡ ಸಹಜವಾಗಿ ಯಾರಿಗಾದರೂ ಬರುತ್ತದೆ.

ಅಷ್ಟೇ ಅಲ್ಲ ಆಲಯ ಸಂಪ್ರದಾಯಗಳಲ್ಲಿ ಬೆಟ್ಟದ ಮೇಲಿರುವ ಗುಡಿಗೆ ನಡೆದು ಹೋದರೆ ಪುಣ್ಯ ಎನ್ನುತ್ತಾರೆ. ಗುಡಿಯ ಸುತ್ತಲು ಪ್ರದಕ್ಷಿಣೆಗಳು ಮಾಡಿದರೆ ಪುಣ್ಯ ಎನ್ನುತ್ತಾರೆ. ಬೆಳಗ್ಗೆ ಆಲಯ ಕೊಳದಲ್ಲಾಗಲಿ ಹತ್ತಿರದಲ್ಲಿರುವ ನದಿಯಲ್ಲಾಗಲಿ ಸ್ನಾನ ಮಾಡಿದರೆ ಪುಣ್ಯ ಎನ್ನುತ್ತಾರೆ. ಸಾಷ್ಟಾಂಗ ನಮಸ್ಕಾರ ಮಾಡಿದರೆ ಪುಣ್ಯ ಎನ್ನುತ್ತಾರೆ. ಶಠಗೋಪವನ್ನು ಹಾಕಿದರೆ ಪುಣ್ಯ ಎನ್ನುತ್ತಾರೆ. ಹಾಗೆ ಪ್ರಸಾದ ತಿಂದರೆ ಪುಣ್ಯ ಎನ್ನುತ್ತಾರೆ. ವಿಗ್ರಹವನ್ನು ದರ್ಶಿಸಿದರೆ ಪುಣ್ಯ ಎನ್ನುವರು.ಹಾಗಾದರೆ ಇವೆಲ್ಲವೂ ಪುಣ್ಯವನ್ನು ಕೊಡುವಂತದ್ದು ಆದ್ದರಿಂದ ಎಲ್ಲರೂ ಆಚರಿಸುತ್ತಿದ್ದಾರೆ ಈ ಸಂಪ್ರದಾಯವನ್ನು ಎಲ್ಲರೂ ಅನುಸರಿಸುತ್ತಿದ್ದಾರೆ.

ಹಾಗಾದರೆ ಇವುಗಳಿಂದ ಬರುವ ಪುಣ್ಯವೇನು? ಅಂದರೆ ಇದಕ್ಕೆ ಮೊದಲು ಹೇಳಿಕೊಂಡಂತೆ ನಮಗೆ ಬರುವ ಲಾಭವೇನು ಎನ್ನುವುದನ್ನು ತಿಳಿದುಕೊಳ್ಳಬೇಕು. ಕಾರಣ ಪುಣ್ಯ ಎಂದರೇನು? ನಮಗೆ ಉಂಟಾಗುವ ಲಾಭ ಎಂದು ತಿಳಿದುಕೊಂಡೆವು. ಆದರೆ ನೆನಪಿರಲಿ ಯಾವ ಲಾಭವಿಲ್ಲದೆ ಹಿಂದಿನ ಹಿರಿಯರು ಇಂತಹ ಸಂಪ್ರದಾಯವನ್ನು ಸುಮ್ಮನೆ ಪರಿಚಯಿಸಿಲ್ಲ. ಎಲ್ಲರೂ ಇದನ್ನು ಅನುಸರಿಸುತ್ತಿದ್ದಾರೆ. ಆದ್ದರಿಂದ ಇವುಗಳಿಂದ

ಬರುವ ಪುಣ್ಯ ಏನು ಅಂದರೆ ಲಾಭವೇನು ತಿಳಿದುಕೊಳ್ಳೋಣ.

ಆಲಯ ಸಾಂಪ್ರದಾಯಗಳಲ್ಲಿ ತುಂಬಾ ಅರ್ಥ ಅಂತರರಾರ್ಥ ಅಡಗಿದೆ. ಯಾವ ಲಾಭವಿಲ್ಲದೆ ಇಂತಹ ಸಾಂಪ್ರದಾಯವನ್ನು ಅನುಸರಿಸಿಲ್ಲ ಅದನ್ನು ಕುರಿತು ಸ್ವಲ್ಪ ವಿವರವಾಗಿ ತಿಳಿದುಕೊಳ್ಳೋಣ.

ಸಮಾಜದಲ್ಲಿ ಗಮನಿಸಿದರೆ ಮಾನವರಲ್ಲಿ ಅನೇಕ ರೀತಿಯ ಜನರು ಕಾಣಿಸುವರು. ಅಂದರೆ ಅನೇಕ ಪ್ರವರ್ತನೆ ಉಳ್ಳವರು ಇರುತ್ತಾರೆ. ಕೆಲವರು ದರೋಡೆ, ಅಪರಾಧ, ಹತ್ಯೆಗಳು ಮಾಡುವವರು ಇದ್ದಾರೆ. ಇನ್ನು ಕೆಲವರು ಹಿಂಸೆ, ದೌರ್ಜನ್ಯ ಮಾಡುವವರು ಇದ್ದಾರೆ. ಇನ್ನು ಕೆಲವರು ಬಲಾತ್ಕಾರಗಳು, ಮಾನಭಂಗಗಳು ಮಾಡುವವರು ಇದ್ದಾರೆ. ಕೆಲವರು ಮಾಯೆ, ಮೋಸಗಳನ್ನು ಮಾಡುವವರು ಸಹ ಇದ್ದಾರೆ. ಇವರು ತಮ್ಮ ಸ್ವಲಾಭಕ್ಕಾಗಿ ಇತರರಿಗೆ ನಷ್ಟವನ್ನು, ಕಷ್ಟವನ್ನು ಉಂಟು ಮಾಡುತ್ತಿದ್ದಾರೆ. ಇದರಿಂದ ಲೋಕದಲ್ಲಿ ತುಂಬಾ ಜನರು ದುಃಖವನ್ನು ಹೊಂದುತ್ತಿದ್ದಾರೆ. ಕೆಲವರು ನರಕವನ್ನು ಕೂಡ ಅನುಭವಿಸುತ್ತಿದ್ದಾರೆ. ಇವರಿಂದ ಲೋಕದಲ್ಲಿ ಯಾರಿಗೂ ಶಾಂತಿ ಇಲ್ಲದೆ ಹೋಗಿದೆ ಇಂತಹವರನ್ನು ಪಾಪಾತ್ಮರು ಎನ್ನುತ್ತಾರೆ.

ಹಾಗೆ ಇನ್ನು ಕೆಲವರು ತಮ್ಮ ಲಾಭ ಮಾತ್ರವೇ ನೋಡಿಕೊಳ್ಳುತ್ತಾರೆ ಇತರರಿಗೆ ಹಾನಿಯ ಮಾಡುವುದಿಲ್ಲ ತಾವು ಕಷ್ಟ ಪಡುತ್ತಾರೆ, ತಮ್ಮ ಸಂಪಾದನೆ ತಾವು ನೋಡಿಕೊಳ್ಳುತ್ತಾರೆ. ಇತರ ಕುರಿತು ಯೋಚಿಸುವುದಿಲ್ಲ. ಇತರರ ಗೊಡವೆಗಳಲ್ಲಿ ತಲೆದೂರಿಸುವುದಿಲ್ಲ ಇವರಿಂದ ಇತರರಿಗೆ ಲಾಭವು ಇರುವುದಿಲ್ಲ ನಷ್ಟವಿರುವುದಿಲ್ಲ.

ಇನ್ನೂ ಕೆಲವರು ತಮ್ಮ ಲಾಭ ನೋಡಿಕೊಳ್ಳುತ್ತಾ ಇತರರಿಗೆ ಕೂಡ ಲಾಭ ಬರಬೇಕೆಂದು ನೋಡುತ್ತಾರೆ. ಇತರರಿಗಾಗಿ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಾರೆ. ದಾನಗಳು ಮಾಡುತ್ತಾರೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ ಇವರಿಂದ ಎಷ್ಟೋ ಸ್ವಲ್ಪ ಜನರಿಗೆ ಲಾಭ ಉಂಟಾಗುತ್ತದೆ ಇವರನ್ನು ಪುಣ್ಯಾತ್ಮರು ಎಂದು ಹೇಳುತ್ತಾರೆ.

ಇನ್ನೂ ಕೆಲವರು ತಮ್ಮ ಸ್ವಾರ್ಥವನ್ನು ಪೂರ್ತಿಯಾಗಿ ಬಿಟ್ಟು ಇತರರಿಗೆ ಸೇವೆ ಮಾಡುತ್ತಾರೆ ಒಳಿತು ಮಾಡಬೇಕೆಂದು ನೋಡುತ್ತಾರೆ. ಅಂದರೆ ತಮ್ಮ ಕಷ್ಟಗಳನ್ನು ಲೆಕ್ಕಿಸದೆ ಯಾವಾಗಲೂ ಎಲ್ಲರಿಗೂ ಆನಂದ ಉಂಟು ಮಾಡಬೇಕೆಂದು ಹಂಬಲಿಸುತ್ತಾರೆ ಇವರನ್ನು ಮಹಾತ್ಮರು ಎಂದು ಹೇಳುತ್ತಾರೆ.

ಹೀಗೆ ನಾವು ಲೋಕದಲ್ಲಿ ನೋಡುತ್ತಾ ಹೋದರೆ, ಮಾನವರಲ್ಲಿ ವಿಧವಿಧವಾದ ವರ್ತನೆಗಳು ನಮಗೆ ಕಾಣಿಸುತ್ತವೆ. ಎಲ್ಲರೂ ಮಾನವರೇ ಹಾಗಾದರೆ ಏಕೆ ಇವರೆಲ್ಲ ಇಂತಹ ಪ್ರವರ್ತನೆಯೊಂದಿಗೆ ಕೂಡಿದ್ದಾರೆ? ಕೆಲವರು ಉಪಕಾರ ಮಾಡುತ್ತಿದ್ದರೆ, ಇನ್ನು

ಕೆಲವರು ಅಪಕಾರ ಮಾಡುತ್ತಿದ್ದಾರೆ. ಕೆಲವರು ಸೇವೆ ಮಾಡುತ್ತಿದ್ದರೆ, ಕೆಲವರು ಏಕೆ ಹಿಂಸಿಸುತ್ತಿದ್ದಾರೆ? ಕೆಲವರು ಹಂಚುತ್ತಿದ್ದರೆ ಕೆಲವರು ದೋಚಿ ಕೊಳ್ಳುತ್ತಿದ್ದಾರೆ. ಕೆಲವರು ಗೌರವಿಸುತ್ತಿದ್ದಾರೆ, ಕೆಲವರು ಅವಮಾನಿಸುತ್ತಿದ್ದಾರೆ. ಹಾಗೆ ಸಮಾಜ ಇರಲು ಕಾರಣ ಯಾರಿಗೂ ಅರ್ಥವಾಗುವುದಿಲ್ಲ ಎಷ್ಟು ಹೇಳಿದರೂ ತಪ್ಪುಗಳನ್ನು ಮಾಡುವವರು ಬದಲಾಗುವುದಿಲ್ಲ. ತಮ್ಮನ್ನು ಬದಲಾಯಿಸಿಕೊಳ್ಳುವುದಿಲ್ಲ. ಇಂತಹ ಪರಿಸ್ಥಿತಿ ಇರುವುದರಿಂದ ಸಮಾಜದಲ್ಲಿ ಅಲ್ಲದೇ, ಸಂಸಾರಗಳಲ್ಲೂ  ತುಂಬಾ ಜನರು ನರಕವನ್ನು ಅನುಭವಿಸುತ್ತಿದ್ದಾರೆ. ಅಶಾಂತಿಯಿಂದ ಜೀವಿಸುತ್ತಿದ್ದಾರೆ. ಅವರಿಗೆ ತಮ್ಮ ಕುಟುಂಬದಲ್ಲಿನವರ ವರ್ತನೆ ಹಾಗೆ ಏಕೆ ಇದೆಯೋ ಎಂದು ಅರ್ಥವಾಗುವುದಿಲ್ಲ. ಎಷ್ಟು ಹೊತ್ತೂ ಕೈಗಳನ್ನು ಜೋಡಿಸಿ ಪ್ರಾರ್ಥಿಸುವುದರ ಹೊರತು ಏನು ಮಾಡಲಾರರು. ಆದರೆ ಅಂತಹವರ ವರ್ತನೆ ಬದಲಾದರೆ ಚೆನ್ನಾಗಿರುತ್ತದೆ ಎಂದು ಆಶಿಸುತ್ತಾರೆ.

ಹಾಗೆ ಸಮಾಜದಲ್ಲಿ ಉಪಕಾರ ಮಾಡುವವರು, ಸೇವೆಗಳನ್ನು ಮಾಡುವವರು ಹಂಚುವವರಿಂದ ಲೋಕದಲ್ಲಿ ಎಲ್ಲರಿಗೂ ಆನಂದ ಉಂಟಾಗುತ್ತದೆ. ಎಲ್ಲರೂ ಶಾಂತಿಯಿಂದ ಜೀವಿಸಬಲ್ಲರು, ಸಂತೋಷದಿಂದ ಇರಬಲ್ಲರು, ಆದರೆ ಅಪಕಾರ ಮಾಡುವವರಿಂದ, ಹಿಂಸೆ ಮಾಡುವವರಿಂದ, ದೋಚಿಕೊಳ್ಳುವರಿಂದ ಲೋಕದಲ್ಲಿ ಎಲ್ಲವೂ, ಎಲ್ಲರೂ ದುಃಖವನ್ನು ಹೊಂದುತ್ತಿದ್ದಾರೆ. ಅಶಾಂತಿಯಿಂದ ಜೀವಿಸುತ್ತಿದ್ದಾರೆ. ಲೋಕದಲ್ಲಿ ಲೋಕ ಕಲ್ಯಾಣಕರವಾದ ಕೆಲಸಗಳನ್ನು ಮಾಡುವವರು ಕೆಲವರಿದ್ದರೆ, ಲೋಕ ಕಂಟಕವಾದ ಕೆಲಸಗಳನ್ನು ಮಾಡುವರು ಇನ್ನೂ ಕೆಲವರಿದ್ದಾರೆ. ಆದರೆ ಪ್ರಸ್ತುತ ಲೋಕದಲ್ಲಿ ಇವರ ಪ್ರಮಾಣವೇ ಹೆಚ್ಚಾಗಿ ಕಾಣಿಸುತ್ತಿದೆ. ಪ್ರಸ್ತುತ ಲೋಕದಲ್ಲಿ ಹೆಚ್ಚಾಗಿ ದುಃಖವಿರಲು ಕಾರಣ ಇದೇ... ಅಂತಹವರ ವರ್ತನೆ ಬದಲಾಯಿಸಿಕೊಳ್ಳಿ ಎಂದು ಹೇಳಿದರೂ ಅವರು ಬದಲಾಯಿಸಿಕೊಳ್ಳುವುದಿಲ್ಲ. ಬದಲಾಗುವುದಿಲ್ಲ. ಅದಕ್ಕೆ ಮುಖ್ಯ ಕಾರಣ ಶ್ರೀ ಕೃಷ್ಣ ಭಗವಾನರು ಹೇಳಿದ್ದೇ ಹೇಳಿದ್ದಾರೆ ಅದು ಅವರ ಗುಣಗಳು ಅವರ ಗುಣಗಳಿಂದ ಅವರ ವರ್ತನೆ ಹಾಗೆ ಇರುತ್ತದೆ ಎಂದು ಗೀತೆಯಲ್ಲಿ ಈ ಶ್ಲೋಕದ ಮೂಲಕ ಹೇಳಿದ್ದಾರೆ.

**ಶ್ಲೋ ॥ ಪ್ರಕೃತೇ ರ್ಗುಣಸಮ್ಮೂಢ ಸಜ್ಜನ್ತೆ ಗುಣಕರ್ಮಸು।**

**ತಾನಕೃತ್ಸ್ನವಿದೋ ಮಂದಾ ಸ್ಕೃತ್ಸ್ನ ವಿನ್ನ ವಿಚಾಲಯೇತ್ ॥(ಭ.ಗೀ.3–29)**

ತಾ :– ಪ್ರಕೃತಿಯ ಒಂದು ಗುಣಗಳಿಂದ ಮೋಹಿತರಾದವರು, ಗುಣಗಳಲ್ಲಿ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಅಂತಹ ಅಲ್ಪಜ್ಞಾನಿಗಳನ್ನು ಆತ್ಮಜ್ಞಾನಿಗಳಾದವರು ಬೆಂಬಲಿಸಬಾರದು.

ಇದರ ಅರ್ಥ ಲೋಕದಲ್ಲಿ ಮಾನವರು ತಮೋಗುಣ, ರಜೋಗುಣ, ಸತ್ವಗುಣ, ನಿರ್ಗುಣ ಎನ್ನುವ 4 ವಿಧಗಳ ಗುಣದೊಂದಿಗೆ ಕೂಡಿರುತ್ತಾರೆ. ಇದು ಪ್ರಕೃತಿ ಸಹಜ ಹಾಗೆ ಯಾವ ಯಾವ ಗುಣಗಳು ಇದ್ದರೆ ಅವರ ವರ್ತನೆ ಅದಕ್ಕೆ ತಕ್ಕಂತೆ ಇರುತ್ತದೆ. ಅಂದರೆ ಅವರು ಮಾಡುವ ಕೆಲಸಗಳು ಅವರ ಗುಣವನ್ನು ಅನುಸರಿಸಿ ಇರುತ್ತವೆ. ಆದ್ದರಿಂದ ತಮೋಗುಣದಲ್ಲಿರುವವರ ವರ್ತನೆ ಒಂದು ವಿಧವಾಗಿ, ರಜೋಗುಣದಲ್ಲಿರುವ ಪ್ರವರ್ತನೆ ಮತ್ತೊಂದು ವಿಧವಾಗಿ ಇರುತ್ತದೆ. ಸಾತ್ವಿಕ ಗುಣದಲ್ಲಿರುವ ವರ್ತನೆ ಮತ್ತೊಂದು ರೀತಿಯಲ್ಲಿ ಇರುತ್ತದೆ. ಹಾಗೆ ನಿರ್ಗುಣ ಸ್ಥಿತಿಯಲ್ಲಿರುವವರ ವರ್ತನೆ ಇವುಗಳೆಲ್ಲಕ್ಕೂ ಭಿನ್ನವಾಗಿರುತ್ತದೆ ಎಂದು ತಿಳಿದುಕೊಳ್ಳಬೇಕು.

ಹಾಗೆ ಅವರ ವರ್ತನೆ ಇರಲು ಕಾರಣ ಅವರ ಲೋಪವಲ್ಲ. ಅವರ ಗುಣವೇ ಅದಕ್ಕೆ ಕಾರಣ. ಅಂದರೆ ಈ ವಿಷಯ ತಿಳಿದುಕೊಂಡವರು, ಆತ್ಮಜ್ಞಾನಿಗಳಾದವರು ಅಂದರೆ ಈ ವಿಷಯವನ್ನು ತಿಳಿದವರು ಹಾಗೆ ವರ್ತಿಸುವವರನ್ನು ವಿಶ್ಲೇಷಿಸುವುದಿಲ್ಲ ವಿಮರ್ಶಿಸುವುದಿಲ್ಲ, ನಿಂದಿಸುವುದಿಲ್ಲ. ಅವರನ್ನು ಬದಲಾಯಿಸಲು ಪ್ರಯತ್ನಿಸುವುದಿಲ್ಲ. ಕಾರಣ ಅವರ ಗುಣ ಬದಲಾಗದ ಹೊರತು ಅವರ ವರ್ತನೆಯಲ್ಲಿ ಬದಲಾವಣೆ ಇರುವುದಿಲ್ಲ. ಆದ್ದರಿಂದ ಆತ್ಮಜ್ಞಾನಿಗಳು, ಯೋಗಿಗಳು, ಋಷಿಗಳು ಅವರ ಗುಣವನ್ನು ಬದಲಾಯಿಸಲು ನೋಡುತ್ತಾರೆ ವಿನಃ ಅವರ ವರ್ತನೆಯನ್ನು ಬದಲಿಸಿಕೊಳ್ಳಲು ಹೇಳುವುದಿಲ್ಲ. ನೀನು ಬದಲಾದರೆ ಚೆನ್ನಾಗಿರಬಹುದು ವರ್ತನೆ ಬದಲಾಯಿಸಿಕೋ, ಆಗ ನೀನು ಚೆನ್ನಾಗಿರಲು ಸಾಧ್ಯ ಎಂದು ಸಲಹೆ ನೀಡುವುದಿಲ್ಲ. ಕಾರಣ ಎಷ್ಟು ಸಲಹೆಗಳು ನೀಡಿದರು ಅವರ ಗುಣ ಬದಲಾಗುವುದಿಲ್ಲ ಅವರ ಪ್ರವರ್ತನೆ ಬದಲಾಗುವುದಿಲ್ಲ ಎನ್ನುವುದು ಅವರಿಗೆ ತಿಳಿದಿದೆ.

ಆದ್ದರಿಂದ ನಾಯಿಯ ಬಾಲದ ಡೊಂಕನ್ನು ಸರಿ ಮಾಡಬೇಕು ಎನ್ನುವುದು ಎಷ್ಟು ಮೂರ್ಖತ್ವವೋ, ಮನುಷ್ಯನ ಗುಣವನ್ನು ಸರಿಪಡಿಸದೆ ಅವನ ವರ್ತನೆ ಬದಲಾಯಿಸಬೇಕು ಎಂದುಕೊಳ್ಳುವುದು ಅಷ್ಟೇ ಮೂರ್ಖತ್ವವಾಗುತ್ತದೆ. ಅಂದರೆ ಲೋಕವು ಚೆನ್ನಾಗಿರಬೇಕೆಂದರೆ ಶಾಂತಿಯಾಗಿ, ಆನಂದವಾಗಿರಬೇಕೆಂದರೆ ಮೊದಲು ಇವರೆಲ್ಲರ ಗುಣಗಳು ಬದಲಾಗಬೇಕು. ಇವರ ಗುಣಗಳು ಬದಲಾಗದ ಹೊರತು, ಅವರ ವರ್ತನೆ ಬದಲಾಗುವುದಿಲ್ಲ. ಲೋಕದಲ್ಲಿ ಸುಖ ಶಾಂತಿಗಳಿರುವುದಿಲ್ಲ ಎನ್ನುವುದನ್ನು ತಿಳಿದುಕೊಳ್ಳಿ. ಮುಖ್ಯವಾಗಿ ಮಾನವರಲ್ಲಿರುವ ತಮೋಗುಣದಿಂದ ರಜೋಗುಣದಿಂದ ಮಾನವರ ವರ್ತನೆ ಲೋಕ ವಿರುದ್ಧವಾಗಿರುತ್ತದೆ. ಲೋಕದಲ್ಲಿ ಹೆಚ್ಚಿನ ಜನರು ಈ ಗುಣಗಳಲ್ಲಿ ಇರುವುದರಿಂದಲೇ, ಜನರ ವರ್ತನೆ ಇಡೀ ಲೋಕಕ್ಕೆ ಹಾನಿಯುಂಟು ಮಾಡುವ ವಿಧವಾಗಿರುತ್ತದೆ.

ಹಾಗಾದರೆ ಇವರ ವರ್ತನೆ ಬದಲಾಗಬೇಕೆಂದರೆ, ಬದಲಾಗುವುದೇ? ಖಂಡಿತ ಬದಲಾಗುವುದಿಲ್ಲ ಎಷ್ಟು ಒಳ್ಳೆಯ ವಿಧವಾಗಿ ಹೇಳಿದರೂ ಎಷ್ಟು ನೀತಿಗಳು ಹೇಳಿದರೂ ಬದಲಾಗುವುದಿಲ್ಲ. ಗುಣ ಹೇಗೆ ಬದಲಾಗುತ್ತದೆ? ಹಾಗಾದರೆ ಗುಣ ಬದಲಾಗುವುದು ಹೇಗೆ ಬದಲಾಗುತ್ತದೆ? ಬದಲಾಗಲು ಅವಕಾಶವೇ ಇಲ್ಲವೇ? ಇದೆ, ಆದರೆ ಅಷ್ಟು ಸುಲಭವಲ್ಲ. ಬ್ರಹ್ಮರ್ಷಿ ಪತ್ರೀಜಿಯವರು ಏನು ಹೇಳುತ್ತಾರೆಂದರೆ, ಯಾವ ಮಾನವನಾದರೂ ಗುಣದಿಂದ ಇನ್ನೊಂದು ಗುಣಕ್ಕೆ ಅಂದರೆ ತಮೋಗುಣದಿಂದ ರಜೋಗುಣಕ್ಕೆ ಬದಲಾವಣೆ ಆಗಬೇಕಾದರೆ, ಸುಮಾರು 100 ರಿಂದ 150 ಜನ್ಮಗಳು ಹಿಡಿಯುತ್ತದೆ ಎಂದು ಹೇಳುತ್ತಾರೆ. ಅಂದರೆ ಒಂದೊಂದು ಜನ್ಮದಲ್ಲಿ ಒಬ್ಬೊಬ್ಬರಿಗೆ ಸಹಜವಾಗಿ ಒಂದು ಮಿಲಿಮೀಟರ್ ನಷ್ಟು ಮಾತ್ರವೇ ಗುಣ ಬದಲಾಗುತ್ತದೆ ಎಂದು ಹೇಳಿದ್ದಾರೆ.

ಅದಕ್ಕೆ ತುಂಬಾ ಜನರು ಕೆಲವರನ್ನು "ಇವನಿಗೆ ಈ ಬುದ್ಧಿ ಜನ್ಮತಃ ಬಂದಿದೆ ಬೆಂಕಿಯಲ್ಲಿಟ್ಟರೂ ಹೋಗುವುದಿಲ್ಲ" ಎನ್ನುತ್ತಾರೆ. ಅಂದರೆ ಮಾನವರ ಗುಣ ಸಹಜವಾಗಿ ಬದಲಾಗಬೇಕೆಂದರೆ ತುಂಬಾ ಜನ್ಮವನ್ನು ತೆಗೆದುಕೊಳ್ಳಬೇಕಾಗಿ ಬರುತ್ತದೆ. ಹಾಗೆ ಇವನು ಬದಲಾಗುವವರೆಗೂ ಅವನ ಕೆಲಸಗಳು ಬದಲಾಗುವುದಿಲ್ಲ. ವರ್ತನೆ ಬದಲಾಗುವುದಿಲ್ಲ. ಒಳ್ಳೆಯದಾಗಿ ಇರುವುದಿಲ್ಲ.

ಸಹಜವಾಗಿ ತಮೋಗುಣ, ರಜೋಗುಣದಲ್ಲಿರುವವರ ಕೆಲಸಗಳು ಲೋಕಕಂಟಕವಾಗಿ ಅಂದರೆ ಎಲ್ಲರಿಗೂ ನಷ್ಟ ಉಂಟು ಮಾಡುವುದಾಗಿರುತ್ತದೆ. ಸಾತ್ವಿಕ ಗುಣದಲ್ಲಿರುವವರ ಕೆಲಸಗಳು ಲೋಕ ಕಲ್ಯಾಣ ಕರವಾಗಿ ಅಂದರೆ ಎಲ್ಲರಿಗೂ ಲಾಭ ಉಂಟುಮಾಡುವ ರೀತಿಯಲ್ಲಿ ಇರುತ್ತವೆ. ಆದ್ದರಿಂದ ಎಲ್ಲರೂ ಒಳ್ಳೆಯವರಾಗಿ ಬದಲಾಗಬೇಕೆಂದರೂ, ಅವರ ಕೆಲಸಗಳು ಇತರರಿಗೆ ಉಪಕಾರ ಮಾಡಿ ಅವರಿಗೆ ಆನಂದವನ್ನು ಉಂಟು ಮಾಡಬೇಕೆಂದರೂ, ಪ್ರತಿಯೊಬ್ಬರೂ ಸಾತ್ವಿಕ ಗುಣಕ್ಕೆ ಬದಲಾಗಲೇಬೇಕು.

ಹಾಗೆ ಮಾನವರ ಗುಣಗಳು ಬದಲಾಯಿಸುವುದಕ್ಕೆ ಅವರಲ್ಲಿ ಬೇಗನೆ ಬದಲಾವಣೆ ತರವುದಕ್ಕೆ ಅವರನ್ನು ಲೋಕಲ್ಯಾಣಕರವಾದ ಕೆಲಸಗಳನ್ನು ಮಾಡುವವರಾಗಿ ಬದಲಾಯಿಸಲು, ಅವರಲ್ಲಿನ ತಮೋಗುಣ, ರಜೋಗುಣವನ್ನು ತೊಲಗಿಸಿ ಅವರನ್ನು ಸಾತ್ವಿಕ ಗುಣಕ್ಕೆ ತರಲು... ಪೂರ್ವ ಕಾಲದ ಹಿರಿಯರು, ಋಷಿಗಳು, ಪಂಡಿತರು ಈ ಆಲಯ ಸಾಂಪ್ರದಾಯವನ್ನು ಎಲ್ಲರಿಗೂ ಪರಿಚಯಿಸಿದರು.

ಈ ಆಲಯ ಸಂಪ್ರದಾಯದಲ್ಲಿ ಅವರು ಪರಿಚಯಿಸಿದ ಆಚಾರಗಳು, ಪದ್ದತಿಗಳು

ಎಲ್ಲವೂ ಕೂಡ ಮಾನವರ ಗುಣಗಳನ್ನು ಬದಲಾಯಿಸುವ ವಿಧವಾಗಿರುತ್ತದೆ. ಅಷ್ಟೇ ಅಲ್ಲ ಅವುಗಳಲ್ಲಿ ತುಂಬಾ ಪದ್ಧತಿಗಳು ಮಾನವರಿಗೆ ಶಾರೀರಕವಾಗಿ ಅಲ್ಲದೆ, ಮಾನಸಿಕವಾಗಿ ಕೂಡ ಲಾಭಗಳನ್ನು ಉಂಟು ಮಾಡುವ ವಿಧವಾಗಿ ಇರುತ್ತವೆ. ಮುಖ್ಯವಾಗಿ ಶರೀರಕ್ಕೆ ಆರೋಗ್ಯ, ಮನಸ್ಸಿಗೆ ಪ್ರಶಾಂತತೆಯನ್ನು ಕೊಡುವ ರೀತಿಯಾಗಿ ಇರುತ್ತವೆ. ಇನ್ನು ಸಮಾಜಕ್ಕೆ ಉಪಯೋಗವಾಗುವ ವಿಧವಾಗಿಯೂ ಕೂಡಾ ಇರುತ್ತವೆ. ಆಲಯ ಸಂಪ್ರದಾಯವನ್ನು ಗಮನಿಸಿದರೆ, ಈ ವಿಷಯವನ್ನು ನಾವು ಸುಲಭವಾಗಿ ಗ್ರಹಿಸಬಹುದು.

ಸಾಮಾನ್ಯ ಜನರನ್ನು ಪಾಮರರನ್ನು ಈ ಲಾಭ ಬರುತ್ತದೆ, ಇಂತಹ ಕೆಲಸ ಮಾಡಿ... ಆ ಲಾಭ ಬರುತ್ತದೆ. ಆ ಕೆಲಸ ಮಾಡಿರಿ ಅಂದರೆ ಅವರು ಅಷ್ಟು ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಆಸಕ್ತಿ ತೋರಿಸುವುದಿಲ್ಲ. ಆದ್ದರಿಂದ ಆ ಪಂಡಿತರಿಗೆ, ಹಿರಿಯರಿಗೆ ಇವರಿಗಿರುವ ಬಲಹೀನತೆ ತಿಳಿದಿದೆ. ಆದ್ದರಿಂದ 'ಪುಣ್ಯ' ಎನ್ನುವ ಪದವನ್ನು ಉಪಯೋಗಿಸಿದರು. ಏಕೆಂದರೆ ಪುಣ್ಯ ಎಂದ ಕೂಡಲೇ ಯಾರಾದರೂ ಆ ಕೆಲಸ ಮಾಡಲು ಇಷ್ಟಪಡುತ್ತಾರೆ. ಪುಣ್ಯ ಬರುತ್ತದೆ ಎಂದರೆ ಆಲೋಚಿಸದಂತೆ ಯಾವ ಕೆಲಸವಾದರೂ ಮಾಡುತ್ತಾರೆ ಆದ್ದರಿಂದ ಮಾನವರು ಆ ಕೆಲಸಕ್ಕೆ ಪ್ರಾಮುಖ್ಯತೆ ನೀಡುತ್ತಾರೆ ಎಂದೇ ಪಂಡಿತರು, ಪುಣ್ಯ ಎಂಬ ಪದವನ್ನು ಸೇರಿಸುವುದಕ್ಕೆ ಕಾರಣ.

ಮುಖ್ಯವಾಗಿ ನಾವು ನೆನಪಿಡಬೇಕಾದದ್ದು ಆಲಯ ಸಂಪ್ರದಾಯ ಎನ್ನುವುದು ಮಾನವರ ಗುಣಗಳನ್ನು ಬದಲಾಯಿಸಲು, ಅದರ ಮೂಲಕ ಲೋಕೋಪಕರವಾದ ಕೆಲಸಗಳನ್ನು ಅವರಿಂದ ಮಾಡಿಸಲು ಮಾತ್ರವೇ. ಹಾಗೆ ಮಾಡುವುದರಿಂದ ಕಡಿಮೆ ಜನ್ಮಗಳಲ್ಲಿ ಅವರ ಗುಣ ಬದಲಾಗುತ್ತದೆ. ಆಗ ಅವರು ಲೋಕಕ್ಕೆ ಒಳಿತು ಮಾಡುತ್ತಾರೆ ಉಪಯೋಗವಾಗುತ್ತಾರೆ ಎನ್ನುವುದು ಅವರ ದೂರದೃಷ್ಟಿ.

ನೆನಪಿರಲಿ ಯಾವ ಮಾನವನಾದರೂ ಮುಖ್ಯವಾಗಿ ಅವರ ಗುಣಗಳನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಬೇಕು. ಆಗಲೇ ಅವರು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಅದರ ಮೂಲಕ ತಾವೂ ಒಳಿತನ್ನು ಹೊಂದುತ್ತಾರೆ. ಇದರೊಂದಿಗೆ ಇತರರಿಗೆ ಕೂಡ ಒಳಿತು ಮಾಡುತ್ತಾರೆ. ಹಾಗೆ ಒಳಿತು ಮಾಡುವುದರಿಂದ ಇಬ್ಬರು ಅಂದರೆ ಉಭಯರು ಲಾಭಗಳನ್ನು ಹೊಂದಬಲ್ಲರು.

ಮತ್ತೊಮ್ಮೆ ನೆನಪಿರಲಿ ಬದಲಾಯಿಸಿಕೊಳ್ಳಬೇಕಾದದ್ದು ಬಟ್ಟೆಗಳು ಅಲ್ಲ ಗುಣಗಳು. ಅದಕ್ಕೆ ಸತ್ಯಸಾಯಿ ಬಾಬಾರವರು "ಬಟ್ಟೆಗಳನ್ನು ಬದಲಾಯಿಸುವುದಿಲ್ಲ ಗುಣಗಳನ್ನು

ಬದಲಾಯಿಸಿಕೊಳ್ಳಿ" ಎನ್ನುತ್ತಾ ಮುಂದುವರೆದು "ಭಜನೆಗಳು ಮಾಡುತ್ತಾರೆ, ರಾಗಗಳನ್ನು ಬದಲಾಯಿಸುತ್ತಾರೆ ಹೊರತು ಗುಣಗಳು ಬದಲಾಗುತ್ತಿವೆಯೇ!? ಎಂದು ನೋಡಿಕೊಳ್ಳುತ್ತಾರಾ?" ಎಂದು ಕೇಳುತ್ತಾರೆ.. ಅಂದರೆ ಗುಣಗಳು ಬದಲಾಯಿಸಿಕೊಳ್ಳುವುದು ಮುಖ್ಯವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಹಾಗೆ ವೀರ ಬ್ರಹ್ಮೇಂದ್ರ ಸ್ವಾಮಿಗಳು ಕೂಡ :

**ಸ್ನಾನಮಂದು ಲೇದು ಪಾನಮಂದು ಲೇದು**
**ಮಂತ್ರ ತಂತ್ರಮುಲಂದು ಮಹಿಮ ಲೇದು**
**ಗುಣಮು ಕುದಿರಿನೇನಿ ಘನಯೋಗಿ ತಾನೌನು**
**ಕಾಳಿಕಾಂಬಾ ಹಂಸ ಕಾಳಿಕಾಂಬಾ**

**ಸ್ನಾನದಲ್ಲಿಲ್ಲ ಪಾನದಲ್ಲಿಲ್ಲ**
**ಮಂತ್ರ ತಂತ್ರದಲ್ಲಿ ಮಹಿಮೆಗಳಿಲ್ಲ**
**ಗುಣಗಳು ಬದಲಾದರೆ, ಘನಯೋಗಿ ತಾನಾಗುವನು**
**ಕಾಳಿಕಾಂಬಾ ಹಂಸ ಕಾಳಿಕಾಂಬಾ**

ನಾವು ಮಾಡುವ ನದಿ ಸ್ನಾನಗಳು, ಸಮುದ್ರ ಸ್ನಾನಗಳು ಯಾವುದರಲ್ಲಿ ಏನೂ ಇಲ್ಲ. ಗಂಗಾ ತೀರ್ಥ ಸೇವಿಸಿದರೂ, ಏನು ಫಲ ಇರುವುದಿಲ್ಲ. ಅಷ್ಟೇ ಅಲ್ಲ ಮನಸ್ಸಿನಿಂದ ಮಾಡುವ ಮಂತ್ರಗಳೊಂದಿಗೆ ಆಗಲಿ ತನುವಿನಿಂದ ಮಾಡುವ ತಂತ್ರಗಳಿಂದಾಗಲಿ ಫಲವೇನು ಇರುವುದಿಲ್ಲ. ಯಾರಿಗಾದರೆ, ಗುಣವು ಬದಲಾಗುವುದೋ... ನಿರ್ಗುಣವಾಗುವುದೋ.. ಅವನೇ ಘನವಾದ ಅಂದರೆ, ಉನ್ನತವಾದ ಯೋಗಿಯೆಂದು ಗುಣ ಬದಲಾಗಬೇಕೆಂದು ವೀರಬ್ರಹ್ಮೇಂದ್ರ ಸ್ವಾಮಿ ಹೇಳಿದ್ದಾರೆ.

**ಭಾಂಢ ಶುದ್ಧಿ ಲೇನಿ ಪಾಕಮೇಲ**
**ಆತ್ಮ ಶುದ್ಧಿ ಲೇನಿ ಆಚಾರಮದಿ ಯೇಲ**
**ಚಿತ್ತ ಶುದ್ಧಿ ಲೇನಿ ಶಿವಪೂಜ ಲೇಲ**
**ವಿಶ್ವದಾಭಿ ರಾಮ ವಿನುರ ವೇಮ**

ಪಾತ್ರೆ ಶುದ್ಧಿ ಇಲ್ಲದ ಪಾಕವೇಕೆ ಅಡುಗೆಯೇಕೆ, ಆತ್ಮಶುದ್ಧಿ ಇಲ್ಲದ ಆಚಾರವೇಕೆ? ಚಿತ್ತ ಶುದ್ಧಿ ಇಲ್ಲದ ಶಿವಪೂಜೆಗಳೇಕೆ? ವಿಶ್ವದಾಭಿರಾಮ ಕೇಳು ವೇಮ.

ಅಂದರೆ ಎಷ್ಟು ಪೂಜೆಗಳು ಮಾಡಿದರೂ ಚಿತ್ತಶುದ್ಧಿ ಆಗದಿದ್ದಾಗ, ಅಂದರೆ ಮನಸ್ಸಿನಲ್ಲಿ ಒಳ್ಳೆಯ ವಿಷಯವಿಲ್ಲದಿರುವಾಗ, ಮನಸ್ಸಿನ ಗುಣ ಬದಲಾಗದಿರುವಾಗ

ಪ್ರಯೋಜನವೇನು? ಎಂದು ವೇಮನ ಕೇಳುತ್ತಿದ್ದಾರೆ. ಗುಣ ಬದಲಾಗಬೇಕೆಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದಾರೆ.

ಅವರು ಇನ್ನೂ ಏನು ಹೇಳುತ್ತಿದ್ದಾರೆ ಎಂದರೆ, ಪಾತ್ರೆ ಶುದ್ಧಿ ಇಲ್ಲದೇ ಎಷ್ಟು ಚೆನ್ನಾಗಿ ಅಡುಗೆ ಮಾಡಿದರೂ, ಅಡುಗೆ ವ್ಯರ್ಥ ಆಗುವುದೋ ಹಾಗೆ ಆತ್ಮಶುದ್ಧಿ ಇಲ್ಲದೇ ಅನುಸರಿಸುವ ಆಚಾರಗಳು ಸತ್ವಹೀನವಾದವು. ಮನಸ್ಸು ಶುದ್ಧವಾಗದೆ ಇರುವಾಗ ಆ ಪೂಜೆಗಳೆಲ್ಲ ನಿರರ್ಥಕವೆಂದು ಯೋಗಿ ವೇಮನ ಹೇಳಿದ್ದಾರೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು

**ಶ್ಲೋ ॥ ತ್ರೈಗುಣ್ಯ ವಿಷಯಾ ವೇದ ನಿಸ್ತ್ರೈಗುಣ್ಯೋ ಭವಾರ್ಜುನ।**

**ನಿರ್ದ್ವಂದ್ವೋ ನಿತ್ಯ ಸತ್ವಸ್ಥೋ ನಿರ್ಯೋಗ ಕ್ಷೇಮ ಆತ್ಮವಾನ್ ।**

**(ಭ.ಗೀ.2–45)**

ತಾ :– ವೇದಗಳು ತ್ರಿಗುಣಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿವೆ. ಆದರೆ ಅರ್ಜುನ ನೀನು ತ್ರಿಗುಣಗಳನ್ನು ಬಿಟ್ಟು ನಿರ್ಗುಣಗಳು ಹೊಂದಿ, ದ್ವಂದ್ವಗಳು ಇಲ್ಲದವನಾಗಿ ನಿರಂತರ ಶುದ್ಧ ಸತ್ಯವನ್ನು ಆಶ್ರಯಿಸಿದವನಾಗಿ ಯೋಗ ಕ್ಷೇಮಗಳ ದೃಷ್ಟಿ ಇಲ್ಲದೇ, ಆತ್ಮಜ್ಞಾನಿಯಾಗು.

ಎಂದು ಭಗವಾನನು ಕೂಡ ಗುಣಗಳನ್ನು ಬದಲಾಯಿಸಿಕೊಳ್ಳಬೇಕೆಂದು ಹೇಳಿದ್ದಾನೆ. ಮೇಲಿನ ಸಂದೇಶಗಳ ಅನುಸಾರ ನೋಡಿದರೆ ಯಾರಿಗಾದರೂ ಗುಣ ಬದಲಾಗಬೇಕೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಬ್ರಹ್ಮರ್ಷಿ ಪತ್ರೀಜಿಯವರು... ಎಷ್ಟೋ ಜನ್ಮಗಳ ಅಗತ್ಯವಿಲ್ಲದೆ ತಮ್ಮ ಗುಣವನ್ನು ಬದಲಾಯಿಸಿಕೊಳ್ಳಬಲ್ಲ ಮಾರ್ಗವನ್ನು ಎಲ್ಲರಿಗೂ ಬೋಧಿಸುತ್ತಿದ್ದಾರೆ. ಆ ಮಾರ್ಗವೇ " ಶ್ವಾಸದ ಮೇಲೆ ಗಮನ" ಧ್ಯಾನ.

ಯಾರಾದರೆ ಧ್ಯಾನ ಮಾಡುತ್ತಾರೋ ಅವರು ಎಷ್ಟೋ ಜನ್ಮಗಳು ಅಗತ್ಯವಿಲ್ಲದೆ, ಈ ಜನ್ಮದಲ್ಲೇ ಎಂತಹ ತಮೋಗುಣದಲ್ಲಿದ್ದರೂ ರಜೋಗುಣಕ್ಕೆ ಬರುತ್ತಾರೆ. ರಜೋಗುಣದಲ್ಲಿದ್ದರೂ, ಸಾತ್ವಿಕ ಗುಣಕ್ಕೆ ಬದಲಾಗುತ್ತಾರೆ. ಎಂದು ಪತ್ರೀಜಿ ಸ್ಪಷ್ಟವಾಗಿ ಹೇಳಿದ್ದಾರೆ. ಧ್ಯಾನ ಎನ್ನುವುದು ಗುಣವನ್ನು ಬದಲಾಯಿಸಿಕೊಳ್ಳಲಿಕ್ಕೆ ಇದೆಯೆಂದು ತಿಳಿದುಕೊಳ್ಳಬೇಕು. ಎಲ್ಲರೂ ಒಳ್ಳೆಯ ರೀತಿಯಲ್ಲಿ ಬದಲಾಗಲು ಧ್ಯಾನವಿದೆ ಎಂದು ತಿಳಿದುಕೊಳ್ಳಬೇಕು.

ಯಾವುದೇನಾದರೂ, ಎಷ್ಟು ಜನರು ಹೇಳಿದರೂ, ಮುಖ್ಯವಾಗಿ, ಯಾರಿಗಾದರೂ ಗುಣವು ಬದಲಾಗಬೇಕು. ಆದ್ದರಿಂದ ಮುಖ್ಯವಾಗಿ, ಮೊದಲು ಗುಣಗಳ ಕುರಿತು ತಿಳಿದುಕೊಳ್ಳೋಣ. ನಿಜವಾಗಿ ಗುಣಗಳನ್ನು ಏಕೆ ಬದಲಾಯಿಸಿಕೊಳ್ಳಬೇಕು ಎನ್ನುವುದನ್ನು

ತಿಳಿದುಕೊಳ್ಳಬೇಕು. ಶ್ರೀಕೃಷ್ಣನು ಹೇಳಿದಂತೆ ಮಾನವರೆಲ್ಲರೂ, ಮೂರು ಗುಣಗಳು ಅಂದರೆ ಸತ್ವ, ರಜೋ, ತಮೋ ಗುಣಗಳೊಂದಿಗೆ ಇರುತ್ತಾರೆ. ಅವರ ಗುಣಗಳನ್ನು ಅನುಸರಿಸಿ ಅವರ ಪ್ರವರ್ತನೆ ಇರುತ್ತದೆ. ಮುಖ್ಯವಾಗಿ ತಮೋ, ರಜೋಗುಣ ಯಾರಿಗಾದರೂ ನಷ್ಟವನ್ನುಂಟು ಮಾಡುವ ಗುಣಗಳು ಆದರೆ ಸತ್ವಗುಣ ಲಾಭವನ್ನುಂಟು ಮಾಡುವ ಗುಣ.

ಏಕೆಂದರೆ ಈ ಮೂರು ಗುಣಗಳುಳ್ಳವರು ಹೇಗೆ ಪ್ರವರ್ತಿಸುವರೋ! ಅವರ ವರ್ತನೆ ಹೇಗೆ ಇರುವುದೋ ಎಂದು ರಾಮಾಯಣದಲ್ಲಿ ವಾಲ್ಮೀಕಿ ಬ್ರಹ್ಮರ್ಷಿ ವಿವರಿಸಿದ್ದಾರೆ. ರಾಮಾಯಣದಲ್ಲಿ ವಾಲ್ಮೀಕಿ ವಿವರಿಸಿದಂತೆ ತಮೋಗುಣದಲ್ಲಿರುವವರು ಕುಂಭಕರ್ಣನಂತೆ ಹೆಚ್ಚು ತಿನ್ನಲು, ಕುಡಿಯಲು, ನಿದ್ರಿಸಲು ಪ್ರಾಮುಖ್ಯತೆ ನೀಡುತ್ತಾರೆ. ಹಾಗೇನೆ ರಜೋಗುಣದಲ್ಲಿರುವವರು ರಾವಣನಂತೆ ಅಹಂಕಾರದೊಂದಿಗೆ ಎಲ್ಲರ ಮೇಲೆ ಅಧಿಪತ್ಯವನ್ನು ಪ್ರದರ್ಶಿಸುತ್ತಿರುತ್ತಾರೆ. ಹಾಗೆ ಸಾತ್ವಿಕ ಗುಣದಲ್ಲಿರುವವರು ವಿಭೂಷಣನಂತೆ ಧರ್ಮ – ಅಧರ್ಮ, ನ್ಯಾಯ – ಅನ್ಯಾಯ, ಒಳಿತು– ಕೆಡಕಿನ ಬಗ್ಗೆ ಆಲೋಚಿಸುತ್ತಾರೆ.

ಒಂದು ರೀತಿಯಲ್ಲಿ ತಮೋಗುಣದಲ್ಲಿ ಜಡತ್ವವಿರುತ್ತದೆ– ಆಲೋಚನೆ ಮಾಡರು. ರಜೋಗುಣದಲ್ಲಿ ಅಹಂಕಾರವಿರುತ್ತದೆ –ಆವೇಶದಿಂದ ಇರುತ್ತಾರೆ.

ಆದರೆ ಸಾತ್ವಿಕಗುಣದಲ್ಲಿ ಇರುವವರಿಗೆ ವಿವೇಕ ವಿರುತ್ತದೆ –ಆಲೋಚಿಸುತ್ತಾರೆ. ಸ್ವಲ್ಪ ಆಲೋಚಿಸಿ ಒಂದೇ ವಿಷಯದಲ್ಲಿ, ಅಂದರೆ ಸೀತೆಯನ್ನು ಎತ್ತಿಕೊಂಡು ಬರುವುದರಲ್ಲಿ ಮೂವರ ವರ್ತನೆ ಮೂರು ವಿಧಗಳಾಗಿ ಇದೆ. ಸೀತೆಯನ್ನು ಅಪಹರಿಸಿ ತಂದರೆ ತನಗೇನು ಸಂಬಂಧಿಸಿಲ್ಲದಂತೆ ಕುಂಭಕರ್ಣ ಇದ್ದನು. ರಾವಣಾಸುರ ಮಾತ್ರ ಅದು ರಾಜಧರ್ಮ, ನಾನು ರಾಜ ಏನಾದರೂ ಮಾಡಬಹುದು ಎಂದನು ಆದರೆ ಸಾತ್ವಿಕ ಗುಣದಲ್ಲಿರುವ ವಿಭೀಷಣ ಮಾತ್ರ ಅದು ಅಧರ್ಮ ಪರರ ಹೆಂಡತಿಯನ್ನು ತಂದು ಇಟ್ಟುಕೊಳ್ಳಬಾರದು ಎಂಬ ಧರ್ಮವನ್ನು ಬೋಧಿಸಿದನು.

ಇಲ್ಲಿ ಗಮನಿಸಿದರೆ ತಮೋಗಣದಲ್ಲಿರುವ ಕುಂಭಕರ್ಣ ಆಲೋಚಿಸದೆ ಅಣ್ಣನ ಆದೇಶದ ಅನುಸಾರ ಪ್ರವರ್ತಿಸಿ ನಾಶವಾದನು. ರಜೋಗುಣದಿಂದ ಅಹಂಕಾರದೊಂದಿಗೆ ಬೀಗಿದ ರಾವಣಸುರ ಸೀತೆಯನ್ನು ಬಿಟ್ಟುಬಿಡುವಂತೆ ಕೇಳಿದರೂ, ಬಿಡದೆ ಯುದ್ಧ ಮಾಡಿ ನಾಶವಾದನು. ಆದರೆ ಸಾತ್ವಿಕ ಗುಣದೊಂದಿಗೆ ಇರುವ ವಿಭೀಷಣನು ಧರ್ಮಗಳನ್ನು ಆಲೋಚಿಸಿ, ಧರ್ಮವನ್ನು ಆಶ್ರಯಿಸಿ ಕೊನೆಗೆ ಲಾಭವನ್ನು ಹೊಂದಿದನು. ರಾಜನಾದನು.

ಇದರ ಅನ್ವಯ ಸಾತ್ವಿಕ ಗುಣದಲ್ಲಿ ಯಾರು ಇದ್ದರೂ ಅವರಿಗೆ ವಿವೇಕ ಇರುತ್ತದೆ.

ವಿಚಕ್ಷಣಾ ಜ್ಞಾನ ಹೆಚ್ಚುತ್ತದೆ. ಧರ್ಮ ಅಧರ್ಮಗಳು ಅರ್ಥವಾಗುತ್ತವೆ. ಇದು ಮಾಡಬೇಕಾದದ್ದು, ಇದು ಮಾಡಬಾರದು ಎನ್ನುವ ವಿಷಯವನ್ನು ಸ್ಪಷ್ಟವಾಗಿ ಗ್ರಹಿಸಬಲ್ಲರು. ಮಾಡಬೇಕಾದುದ್ದನ್ನು ಮಾತ್ರ ಮಾಡುತ್ತಾರೆ ಕೊನೆಗೆ ಲಾಭ ಹೊಂದುತ್ತಾರೆ. ಹಾಗೆ ವಿಭೀಷಣನು ಲಾಭ ಹೊಂದಿದನು. ನಂತರ ಎಲ್ಲರಿಗೂ ಶಾಂತಿಯನ್ನು, ಆನಂದವನ್ನುಂಟು ಮಾಡಿದನು. ಆದರೆ ರಜೋಗುಣದಲ್ಲಿ ಅಹಂಕಾರದೊಂದಿಗೆ ಇರುವ ರಾವಣಾಸುರನು ನಾಶವಾದನು ಎಲ್ಲರಿಗೂ ಎಲ್ಲರ ನಾಶಕ್ಕೂ ಕಾರಣನಾದನು.

ಆದ್ದರಿಂದ ತಿಳಿದಿರಲಿ ಯಾರಾದರೂ ಎಲ್ಲರಿಗೂ ನಷ್ಟ ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ, ಎಂದರೆ ಅದಕ್ಕೆ ಅವರ ಗುಣವೇ ಕಾರಣ. ಅಂತಹವರು ಇರುವಷ್ಟು ಕಾಲ ಲೋಕದಲ್ಲಿ ಸುಖ ಶಾಂತಿಗಳಿರುವುದಿಲ್ಲ ಆದ್ದರಿಂದ ಇವೆಲ್ಲವನ್ನು ಗ್ರಹಿಸಿದ ಆ ಮಹಾನುಭಾವರು, ಮಹಾತ್ಮರು ಋಷಿಗಳು, ಮಾನವರಿಗೆ ನಷ್ಟ ಉಂಟು ಮಾಡುವ ಗುಣಗಳನ್ನು ಬದಲಾಯಿಸಲು ಈ ಆಲಯ ಸಾಂಪ್ರದಾಯವನ್ನು ಪರಿಚಯಿಸಿದರು. ಮತ್ತೊಮ್ಮೆ ನೆನಪಿರಲಿ ಮಹಾಪುರುಷರು ಏನು ಮಾಡಿದರೂ ಯಾವುದು ಲೋಕಕ್ಕೆ ನೀಡಿದರೂ ಅದರಲ್ಲಿ ಎಷ್ಟೋ ಅಷ್ಟು ಲಾಭ ಇದ್ದೇ ಇರುತ್ತದೆ. ಅಷ್ಟೇ ಹೊರತು ನಾವು ಆಶಿಸಿದ ನಾವು ಕೋರಿದ ಲಾಭಗಳು ಇರುವುದಿಲ್ಲ. ಈ ವಿಷಯ ನಾವು ಗ್ರಹಿಸಿದರೆ ಮಾತ್ರ ಈ ಆಲಯ ಸಾಂಪ್ರದಾಯದ ಮೂಲಕ ನಾವು ಎಂತಹ ಲಾಭಗಳನ್ನು ಹೊಂದಬಹುದು ಎನ್ನುವುದನ್ನು ಸ್ಪಷ್ಟವಾಗಿ ಗ್ರಹಿಸಬಹುದು.

ಸಾಂಪ್ರದಾಯದ ಪ್ರಕಾರ ಮಾಡುವ ಈ ಕೆಲಸಗಳೆಲ್ಲ ಗುಣಗಳನ್ನು ಬದಲಾಯಿಸಲು ಹೊರತು ಮೋಕ್ಷವನ್ನು ನೀಡಲು ಅಲ್ಲ. ಕೋರಿಕೆಗಳು ತೀರಿಸುವುದಿಲ್ಲ, ಕಷ್ಟಗಳು ತೊಲಗಿಸುವುದಿಲ್ಲ. ಪಾಪಗಳನ್ನು ಕಳೆಯುವುದಿಲ್ಲವೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಆಲಯ ಸಂಪ್ರದಾಯಗಳಲ್ಲಿ ಯಾವ ಯಾವ ಕೆಲಸಗಳಿಂದ ಎಂತಹ ಪುಣ್ಯ ಅಂದರೆ ಯಾವ ಯಾವ ಲಾಭಗಳು ಉಂಟಾಗುತ್ತವೆ ಎನ್ನುವುದನ್ನು ತಿಳಿದುಕೊಳ್ಳೋಣ.

**{ದೇವರು ಬೇರೆ ಬೇರೆ ಎನ್ನುವ ಭಾವನೆ ಧ್ಯಾನ ಮಾಡಿದರೆ ನೀರಿನಲ್ಲಿ ಉಪ್ಪು ಕರಗಿ ನೀರಿನೊಂದಿಗೆ ಏಕವಾದಂತೆ, ಎಲ್ಲಾ ಒಂದೇ ಎನ್ನುವ ಭಾವ ಉಂಟಾಗುತ್ತದೆ}**

# ಪವಿತ್ರ ಸ್ನಾನ



ಬೆಳಗ್ಗೆ ಆಲಯದ ಕಲ್ಯಾಣಿ ಅಥವಾ ಪಕ್ಕದಲ್ಲಿರುವ ನದಿಗಳಲ್ಲಾಗಲಿ ಅಥವಾ ಸಮುದ್ರದಲ್ಲಾಗಲಿ ಸ್ನಾನಗಳು ಮಾಡಿದರೆ ಪುಣ್ಯವೆಂದು ಭಾವಿಸುತ್ತಾರೆ. ಮುಖ್ಯವಾಗಿ ಕಾರ್ತಿಕ ಮಾಸದಲ್ಲಿ ತಿಂಗಳು ಕಾಲ ಉದಯಕಾಲದಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗುತ್ತಾರೆ.

ಸಹಜವಾಗಿ ತುಂಬಾ ಜನರು ಜಡತ್ವದಿಂದ ಬೆಳಿಗ್ಗೆ ಏಳುವುದಿಲ್ಲ. ಸೂರ್ಯ ನೆತ್ತಿಮೇಲೆ ಬರುವವರೆಗೂ, ನಿದ್ರೆ ಮಾಡುತ್ತಿರುತ್ತಾರೆ. ಹಾಗೆ ಜಡತ್ವ ಎನ್ನುವುದು ತಮೋಗುಣಕ್ಕೆ ಸಂಕೇತ ತಮೋಗುಣ ಎನ್ನುವುದು ಯಾರಿಗಾದರೂ ಜೀವನದಲ್ಲಿ ನಷ್ಟವನ್ನುಂಟು ಮಾಡುವ ಗುಣವೆಂದು ತಿಳಿದುಕೊಳ್ಳಬೇಕು. ಕಾರಣ ಮಾಡುವ ಸಾಮರ್ಥ್ಯವಿದ್ದರೂ, ಯಾವ ಕೆಲಸವನ್ನು ಮಾಡುವುದಿಲ್ಲ. ಸುಮ್ಮನೆ ಕುಳಿತು ಸಮಯ ವ್ಯರ್ಥ ಮಾಡುತ್ತಾರೆ. ಬುದ್ದಿಯನ್ನು ಉಪಯೋಗಿಸುವುದಿಲ್ಲ. ಅಂದರೆ ಆಲೋಚಿಸುವುದಿಲ್ಲ. ಆದರಿಂದ ಜೀವನದಲ್ಲಿ ಎಷ್ಟೋ ನಷ್ಟವನ್ನು ಹೊಂದುತ್ತಾರೆ. ಕೊನೆಗೆ ಜೀವನವನ್ನೇ ನಾಶ ಮಾಡಿಕೊಳ್ಳುತ್ತಾರೆ ಕೆಳಗಿನ ಶ್ಲೋಕದ ಮೂಲಕ ಶ್ರೀ ಕೃಷ್ಣನು ಹೀಗೆ ಹೇಳಿದ್ದಾರೆ

**ಶ್ಲೋ :– ಅಪ್ರಕಾಶೋ ಪ್ರವೃತ್ತಿಶ್ಚ ಪ್ರಮೋರೋ ಮೊಹೋ ಏವಚ**
**ತಮಸ್ಯೆತಾನಿ ಜಾಯಂತೆ ವಿವೃದ್ದೆ ಕುರುನಗ್ದನ (ಭ.ಗೀ.14–13)**

ತಾ :– ಕುರುವಂಶೀಯನಾದ ಓ ಅರ್ಜುನಾ! ತಮೋಗುಣವು ಹೆಚ್ಚಾದರೆ ಮನುಷ್ಯನಲ್ಲಿ ಅವಿವೇಕ (ಬುದ್ಧಿಮಾಂದ್ಯ) ಸೋಮಾರಿತನ, ಅಜಾಗ್ರತೆ, ಅಜ್ಞಾನ (ಮೂಡತ್ವ ಅಥವಾ ವಿಪರೀತ ಜ್ಞಾನ) ಉಂಟಾಗುತ್ತದೆ. ಎಂದು ಶ್ರೀಕೃಷ್ಣ ಹೇಳಿದ್ದಾನೆ.

ಆದ್ದರಿಂದ ಆ ಪಂಡಿತರು ಇವರ ಜಡತ್ವವನ್ನು ಬಿಡಿಸಲು ಪುಣ್ಯವೆಂದು ಕಾರ್ತಿಕಮಾಸವೆಲ್ಲ ಉದಯಕಾಲದಲ್ಲಿ ಎದ್ದು ಸ್ನಾನ ಮಾಡಲು ಹೇಳಿದ್ದಾರೆ. ಹಾಗೆ ಮಾಡಿದರೆ ಪುಣ್ಯ ಬರುತ್ತದೆ ಎಂದು ಹೇಳಿದ್ದಾರೆ. ಹಾಗೆ ತಿಂಗಳುಗಳ ಕಾಲ ಬೆಳಗ್ಗೆ ಎದ್ದು ಸ್ನಾನ ಮಾಡಿದರೆ ಸುಲಭವಾಗಿ ಯಾರಿಗಾದರೂ ಜಡತ್ವ ಹೋಗುತ್ತದೆ. ಬೆಳಗ್ಗೆ ಬೇಗ ಏಳುತ್ತಾರೆ. ಹಾಗೆ ಬೆಳಿಗ್ಗೆ ಬೇಗ ಏಳುವ ಅಭ್ಯಾಸವಾದವರು,ತಮ್ಮ ಕೆಲಸಗಳನ್ನು ತಾವು

ಚೆನ್ನಾಗಿ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಹಾಗೆ ನಿದ್ರಿಸುತ್ತಾ, ಅವರು ಮಾಡಬೇಕಾದ ಎಷ್ಟೋ ಕೆಲಸಗಳನ್ನು ಮಾಡಲಾರರು. ಅದರಿಂದ ನಷ್ಟ ಹೊಂದುವರು.

ಹಾಗೆಯೇ ಕಾರ್ತಿಕ ಸ್ನಾನಗಳಿಂದ ಬರುವ 'ಪುಣ್ಯ' ಅಂದರೆ ಲಾಭ ತಮೋಗುಣವನ್ನು, ಜಡತ್ವವನ್ನು ತೊಲಗಿಸಿಕೊಳ್ಳುವುದು. ಕೆಲವರಿಗೆ ಮತ್ತೆ ಜಡತ್ವ ಹೆಚ್ಚುತ್ತದೆ ಎಂಬ ಉದ್ದೇಶದಿಂದ ಹಿರಿಯರು ಪ್ರತಿವರ್ಷ ಕಾರ್ತಿಕ ಸ್ನಾನಗಳನ್ನು ಮಾಡಲು ಹೇಳಿದ್ದಾರೆ. ಹಾಗೆ ನಿಧಾನವಾಗಿ ಯಾರಾದರೂ ತಮೋಗುಣವನ್ನು ಹೋಗಲಾಡಿಸಿಕೊಳ್ಳಬಲ್ಲರು. ಅಷ್ಟೇ ಅಲ್ಲ ಹೆಚ್ಚಾಗಿ ಆಲಯಗಳು ಬೆಟ್ಟದ ಮೇಲೆ ಗುಡ್ಡಗಳ ಮೇಲೆ ನಿರ್ಮಿಸಿದ್ದಾರೆ. ಕಾರಣವೇನೆಂದರೆ ಇದೇ.. ಅಂತಹ ಗುಡಿಗೆ ಹೋಗಬೇಕೆಂದರೆ ಎಷ್ಟು ಕಷ್ಟಪಟ್ಟು ಮೆಟ್ಟಿಲನ್ನು ಹತ್ತಿ ಗುಡಿಯನ್ನು ಸೇರಿಕೊಳ್ಳಬೇಕು. ಹಾಗೆ ಎಷ್ಟೋ ಸಾರಿ ಕಷ್ಟಪಟ್ಟು ಹತ್ತುವುದರಿಂದ ಅವರಲ್ಲಿರುವ ಜಡತ್ವ ತೊಲಗಿ ಹೋಗುತ್ತದೆ. ನಿಧಾನವಾಗಿ ತಮೋಗುಣದಿಂದ ಹೊರಗೆ ಬರುತ್ತಾರೆ.

## ಪ್ರದಕ್ಷಿಣೆಗಳು



ಹಾಗೆ ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆಗಳು ಹಾಕುತ್ತಾರೆ. ಒಮ್ಮೊಮ್ಮೆ 108 ಬಾರಿ ಪ್ರದಕ್ಷಣೆಗಳು ಮಾಡುವುದು ಅಂಗಪ್ರದರ್ಶನಗಳು ಇವೆಲ್ಲವೂ ಜಡತ್ವವನ್ನು ಬಿಡಿಸುವ ಚರ್ಯಗಳೇ... ಇಲ್ಲದಿದ್ದರೆ ಕೆಲವರಿಗೆ ಸುಖವು ಅಭ್ಯಾಸವಾಗಿ ಯಾವ ಕೆಲಸವನ್ನು ಮಾಡುವುದಿಲ್ಲ. ಕಷ್ಟಪಡುವುದಿಲ್ಲ, ಇದ್ದಲ್ಲಿಂದ ಕದಲುವುದಿಲ್ಲ. ಅಂತಹವರು ಪುಣ್ಯ ಎಂದ ಕೂಡಲೇ, ಏನೋ ಬರುತ್ತದೆ ಅಂದುಕೊಂಡಿದ್ದು ಆಗುತ್ತದೆ ಎಂದು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆಗಳು ಹಾಕುತ್ತಾರೆ. ಆದರೆ ಹಾಗೆ ಕಷ್ಟಪಟ್ಟು ಪ್ರದಕ್ಷಿಣೆಗಳು ಹಾಕುವುದರಿಂದ ಮುಖ್ಯವಾಗಿ ಅವರಲ್ಲಿರುವ ಜಡತ್ವ ಹೋಗುತ್ತದೆ. ಎಲ್ಲಾ ಕೆಲಸಗಳನ್ನು ಚೆನ್ನಾಗಿ ಮಾಡಿಕೊಳ್ಳುತ್ತಾರೆ. ಅದೇ ಪ್ರದಕ್ಷಿಣೆಗಳಿಂದ ಬರುವ 'ಪುಣ್ಯ' ಅಂದರೆ 'ಲಾಭ' ಹಾಗೆ ಪುಣ್ಯವೆನ್ನುವ ಹೆಸರಿನೊಂದಿಗೆ ಕೆಲವು ಜನ್ಮಗಳು ಮಾಡುವುದರಿಂದ ಅವರಲ್ಲಿನ ತಮೋಗುಣ ಹೋಗುತ್ತದೆ ರಜೋಗುಣದಲ್ಲಿ ಪ್ರವೇಶಿಸುತ್ತಾರೆ.

# ಸಾಷ್ಟಾಂಗ ನಮಸ್ಕಾರ
# ಶಠಗೋಪ



ರಜೋಗುಣ ಯಾರಿಗಾದರೂ ನಷ್ಟವನ್ನುಂಟುಮಾಡುತ್ತದೆ. ರಜೋಗುಣ ದಲ್ಲಿರುವವರ ಪ್ರವರ್ತನೆ ಹೇಗಿರುತ್ತದೆ ಎನ್ನುವುದನ್ನು. ಶ್ರೀಕೃಷ್ಣ ಭಗವಾನ್ ಈ ಕೆಳಗಿನ ಶ್ಲೋಕದ ಮೂಲಕ ಹೇಳಿದ್ದಾರೆ.

**ಶ್ಲೋ :– ಲೋಭ: ಪ್ರವೃತ್ತಿ**
**ರಾರಾಮ್ಭ: ಕರ್ಮಣಾ ಮಾಶಮಃ ಸ್ಪೃಹಾ ।**
**ರಜಸ್ಯೆತಾನಿ ಜಾಯನ್ತೆ ವಿವೃದ್ಧೆ ಭರತರ್ಷಭ॥( ಭ.ಗೀ. 14–12)**

ತಾ :– ಭರತ ಕುಲ ಶ್ರೇಷ್ಠನಾದ ಅರ್ಜುನ ರಜೋಗುಣ ಹೆಚ್ಚಿದಾಗ, ಮನುಷ್ಯನಲ್ಲಿ ಲೋಭತ್ವ ಹೆಚ್ಚುತ್ತದೆ. ನಿಷಿದ್ಧ ಕರ್ಮಗಳನ್ನು ಮಾಡಲು ಆರಂಭಿಸುತ್ತಾನೆ. ಮನಶಾಂತಿ ಇಲ್ಲವಾಗುತ್ತದೆ, (ಇಂದ್ರಿಯ ನಿಗ್ರಹವಿಲ್ಲದಿರುವುದು) ಆಸೆಯು ಹುಟ್ಟುತ್ತದೆ.

ಭಗವಾನನು ಹೇಳಿದಂತೆ ರಜೋಗುಣದಲ್ಲಿ ಇರುವವರು ಆಸೆಯೊಂದಿಗೆ ಲೋಭದಲ್ಲಿದ್ದು ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಅಹಂಕಾರದೊಂದಿಗೆ ಇರುವುದರಿಂದ ಮನಶಾಂತಿಯನ್ನು ಕಳೆದುಕೊಳ್ಳುತ್ತಾರೆ. ತಾವು ನಷ್ಟ ಹೊಂದುತ್ತಾರೆ. ಇತರರಿಗೂ ನಷ್ಟವನ್ನುಂಟು ಮಾಡುತ್ತಾರೆ. ಆದ್ದರಿಂದ ಈ ರಜೋಗುಣದಿಂದ ಮಾನವರು ಹೊರಬರಬೇಕು. ಹಾಗೆ ಹೊರಬರಲು ಹಿಂದೆ ಹಿರಿಯರು ಆಲಯಗಳಲ್ಲಿ ಕೆಲವು ಪದ್ಧತಿಗಳನ್ನು ಪುಣ್ಯವೆಂಬ ಹೆಸರಿನೊಂದಿಗೆ ಪರಿಚಯಿಸಿದರು.

ನೋಡಿ ಎಂತಹ ಅಹಂಕಾರವಿರುವವನಾದರೂ, ಧನವಂತನಾದರೂ, ದೊಡ್ಡ ದೊಡ್ಡ ಪದವಿಗಳಲ್ಲಿರುವವರೂ, ಅಧಿಕಾರದಲ್ಲಿರುವವರಾಗಲಿ, ಉದ್ಯೋಗ ಗಳಲ್ಲಿರುವವರಾಗಲಿ, ದೇಗುಲಕ್ಕೆ ಹೋದಾಗ ತಮ್ಮ ಅಹಂಕಾರವನ್ನು ಮರೆಯುತ್ತಾರೆ. ಸಹಜವಾಗಿ ಎಲ್ಲರಿಂದಲೂ ನಮಸ್ಕಾರಗಳನ್ನು ಸ್ವೀಕರಿಸುವವರೂ, ತಾವೇ ಬಾಗಿ ನಮಸ್ಕರಿಸುತ್ತಾರೆ. ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಅಷ್ಟೇ ಅಲ್ಲ ಶಠಗೋಪ ತೆಗೆದುಕೊಳ್ಳಬೇಕೆಂದರೆ, ಎಂತಹವರಾದರೂ ತಲೆಬಾಗಲೇಬೇಕು. ಎಂತಹ ದೊಡ್ಡ ಮನುಷ್ಯನಾದರೂ, "ನಿನ್ನ ಪಾದಗಳ ಕೆಳಗೆ ಇರುವವನು ನಾನು " ಎಂದು ಭಾವಿಸಿ ಬಾಗಿ ಪಾದುಕೆಗಳಿಗೆ ನಮಸ್ಕರಿಸುತ್ತಾರೆ. ಆ ವಿಧವಾಗಿ ಮಾಡುವುದರಿಂದ ಅವರಲ್ಲಿನ ಅಹಂಕಾರ ನಿಧಾನವಾಗಿ ಕಡಿಮೆಯಾಗುತ್ತದೆ. ಸಾತ್ವಿಕ ಗುಣದಲ್ಲಿ ಪ್ರವೇಶಿಸುತ್ತಾರೆ. ಹಾಗೆ ಶಠಗೋಪದಿಂದ ಸಾಷ್ಟಾಂಗ ಪ್ರಣಾಮದಿಂದ ಬರುವ 'ಪುಣ್ಯ' ಅಂದರೆ, 'ಲಾಭ'....

ಅವರಲ್ಲಿನ ಅಹಂಕಾರ ಕಡಿಮೆ ಮಾಡಿಕೊಳ್ಳುವುದು.. ರಜೋಗುಣವನ್ನು ತೊಲಗಿಸಿಕೊಳ್ಳುವುದು. ಅಷ್ಟೇ ಹೊರತು ಇವೆಲ್ಲ ಮಾಡುವುದರಿಂದ ಯಾವುದೋ ಪುಣ್ಯ ಅಥವಾ ಅವನಿಗೆ ಕೋಟಿ ರೂಪಾಯಿಗಳು ಬರುವುದಿಲ್ಲ. ಕಷ್ಟಗಳು ತೀರುವುದಿಲ್ಲ, ಕೋರಿಕೆಗಳು ನೆರವೇರುವುದಿಲ್ಲ. ಮಾಡಿದ ಪಾಪಗಳು ಹೋಗುವುದಿಲ್ಲ. ಆದರೆ ಇವುಗಳಿಂದ ಕೆಲವು ಜನ್ಮಗಳಿಗಾದರೂ, ನಿಧಾನವಾಗಿ ರಜೋಗುಣ ಹೋಗಿ, ಸಾತ್ವಿಕಗುಣಕ್ಕೆ ಪ್ರವೇಶಿಸಿ ಅವರ ಪ್ರವರ್ತನೆ ಬದಲಾಗುತ್ತದೆ. ಒಳ್ಳೆಯ ಮಾರ್ಗಕ್ಕೆ ಬರುತ್ತಾರೆ. ವಿವೇಕ ಹೆಚ್ಚಿಸಿಕೊಂಡು ಒಳ್ಳೆಯ ಕೆಲಸಗಳನ್ನು ಮಾಡುತ್ತಾ, ಜೀವನದಲ್ಲಿ ಸುಖ ಶಾಂತಿಗಳನ್ನು ಹೊಂದುತ್ತಾರೆ. ಸತ್ವಗುಣಕ್ಕೆ ಪ್ರವೇಶಿಸಿದವರ ಪ್ರವರ್ತನೆ ಹೇಗಿರುತ್ತದೆ ಎಂದು ಗೀತೆಯಲ್ಲಿ ಹೇಳಲಾಗಿದೆ.

**ಶ್ಲೋ॥ ಸರ್ವದ್ವಾರೇಷು ದೇಹಾಸ್ಮಿ ಸ್ಪ್ರಕಾಶ ಉಪಜಾಯತೆ ।**

**ಜ್ಞಾನಂ ಯದಾ ತದಾ ವಿದ್ಯಾ ದ್ವಿವೃದ್ಧಂ ಸತ್ವ ಮಿತ್ಯುತ ॥(ಭ.ಗೀ.14–11)**

ತಾ:– ಸತ್ವಗುಣವು ಅಭಿವೃದ್ಧಿ ಹೊಂದಿದಾಗ ಮಾನವನ ಸಮಸ್ತ ಚರ್ಯೆಗಳು, ಸಾತ್ವಿಕವಾಗಿ, ಪ್ರಕಾಶಯುತವಾಗಿ, ಜ್ಞಾನವಂತವಾಗಿರುವುದು.

ಅಂದರೆ ಸತ್ವಗುಣಕ್ಕೆ ಪ್ರವೇಶಿಸಿದವರ ಪ್ರವರ್ತನೆ ಸಂಪೂರ್ಣವಾಗಿ ಬದಲಾಗುತ್ತದೆ. ವಿವೇಕ ಹೆಚ್ಚುತ್ತದೆ. ವಿಚಕ್ಷಣಾ ಜ್ಞಾನ ಉಂಟಾಗುತ್ತದೆ. ಎಲ್ಲಾ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಲೋಕ ಹಿತವಾದ ಕೆಲಸಗಳನ್ನೇ ಮಾಡುವರು. ಆ ವಿಧವಾಗಿ ಸತ್ವಗುಣದೊಂದಿಗೆ ಮಾಡುವ ಕೆಲಸಗಳು ತಮಗೇ ಅಲ್ಲ ಲೋಕಕ್ಕೆ ಲಾಭ ಉಂಟು ಮಾಡುವ ವಿಧವಾಗಿ ಇರುತ್ತವೆ. ಆದ್ದರಿಂದ ಯಾರಾದರೂ ಸತ್ವಗುಣಕ್ಕೆ ಬದಲಾಗಲೇ ಬೇಕು. ಅದಕ್ಕೋಸ್ಕರವೇ ಈ ಆಲಯ ಸಂಪ್ರದಾಯ.

ಅಷ್ಟೇ ಅಲ್ಲ ಯಾವ ಗುಣದೊಂದಿಗೆ ಮಾಡುವ ಕರ್ಮಗಳಿಗೆ ಎಂತಹ ಫಲವು ಬರುವುದು ಎಂದು ಈ ಕೆಳಗಿನ ಶ್ಲೋಕದ ಮೂಲಕ ಶ್ರೀಕೃಷ್ಣನು ಹೇಳಿದ್ದಾನೆ.

**ಶ್ಲೋಕ :– ಕರ್ಮಣ: ಶುಕೃತಸ್ಯಾಹು: ಸಾತ್ವಿಕಂ ನಿರ್ಮಲಂ ಫಲಂ।**

**ರಜಸಸ್ತು ಫಲಂ ದುಃಖ ಮಜ್ಞಾನಂ ತಮಸ: ಫಲಂ ॥(ಭ.ಗೀ 14–16)**

ತಾ :– ಸಾತ್ವಿಕವಾದ ಕರ್ಮಗಳಿಗೆ ನಿರ್ಮಲ ಸುಖವು, ಫಲವೀಯುವುದು. ರಜೋಗುಣ ಸಂಬಂಧವಾದ ಕರ್ಮಗಳಿಗೆ ದುಃಖವು ಫಲವೀಯುವುದು. ತಮೋಗುಣ ಸಂಬಂಧವಾದ ಕರ್ಮಗಳಿಗೆ ಅಜ್ಞಾನವು ಫಲವೆಂದು ಹೇಳಿದ್ದಾರೆ.

ಮೇಲಿನ ಶ್ಲೋಕದ ಅನುಸಾರ ತಮೋಗುಣ, ರಜೋಗುಣ ನಷ್ಟದಾಯಕವೆಂದು, ಸಾತ್ವಿಕ ಗುಣ ಯಾರಿಗಾದರೂ ಲಾಭವೆಂದು ತಿಳಿದುಕೊಳ್ಳಬಹುದು. ಶ್ರೀ ಕೃಷ್ಣ ಇನ್ನೂ ಮುಂದುವರೆದು ಯಾವ ಗುಣದೊಂದಿಗೆ ಮರಣಿಸಿದರೆ ಎಂತಹ ಭವಿಷ್ಯತ್ತು ಲಭಿಸುವುದು ಎನ್ನುವುದನ್ನು ಹೇಳಿದ್ದಾರೆ.

**ಶ್ಲೋ:– ಯದಾಸತ್ವೇ ಪ್ರವೃದ್ಧೆ ತು ಅಲಯಂ ಯಾತಿ ದೇಹಾಭೃತ್।**

**ತದೋತ್ತಮವಿದಾಂ ಲೋಕಾ ನಮಲಾ ನ್ಪ್ರತಿಪದ್ಯತೆ॥ (ಭ. ಗೀ.14–14)**

ಯಾವಾಗ ಮಾನವನು ಸತ್ವಗುಣ ಅಭಿವೃದ್ಧಿ ಹೊಂದುತ್ತಾ, ಹೊಂದುತ್ತಾ ಮರಣಿಸುವನೋ, ಆಗ ಆತನು ಉತ್ತಮ ಜ್ಞಾನವುಳ್ಳವರ ಒಂದು ಪರಿಶುದ್ಧವಾದ ಲೋಕಗಳನ್ನು ಹೊಂದುತ್ತಾನೆ.

**ರಜಸಿ ಪ್ರಲಯಂ ಗತ್ವಾ ಕರ್ಮ ಸಂಗಿಷು ಜಾಯತೆ ।**

**ತಥಾ ಪ್ರಲೀನಸ್ತಮಸಿ ಮೂಢ ಯೋನಿಷು ಜಾಯತೆ॥ (ಭ.ಗೀ.14–15)**

ತಾ :– ರಜೋಗುಣ ಅಭಿವೃದ್ಧಿ ಹೊಂದಿರುವಾಗ ಮರಣಿಸಿದವನು, ಕರ್ಮಾಸಕ್ತಿಗಳು ಉಳ್ಳವರ ಗರ್ಭದಲ್ಲಿ ಜನಿಸುತ್ತಿದ್ದಾನೆ. ಹಾಗೆ ತಮೋಗುಣ ಅಭಿವೃದ್ಧಿ ಹೊಂದಿದಾಗ ಮರಣಿಸುವವನು ಮೂರ್ಖರ (ಅವಿವೇಕಿಗಳ )ಗರ್ಭದಲ್ಲಿ ಹುಟ್ಟುತ್ತಿದ್ದಾನೆ.

ಭಗವಾನನು ಹೇಳಿದರ ಅನುಸಾರ ತಮೋಗುಣ, ರಜೋಗುಣ ಭವಿಷ್ಯತ್ ಜನ್ಮಗಳಿಗೂ ನಷ್ಟದಾಯಕವೆಂದು ಗ್ರಹಿಸಬೇಕು. ಆದ್ದರಿಂದ ಅವುಗಳನ್ನು ದಾಟಿ, ಯಾರಾದರೂ ಸರಿ, ಸತ್ವಗುಣಕ್ಕೆ ಪ್ರವೇಶಿಸಲೇಬೇಕೆಂದು ತಿಳಿದುಕೊಳ್ಳಬೇಕು. ಅದಕ್ಕೋಸ್ಕರವೇ ಈ ಆಲಯ ಸಾಂಪ್ರದಾಯವನ್ನು ಮಾಡಲಾಗಿದೆ.

ತಿಳಿದಿರಲಿ ಈ ಪವಿತ್ರ ಸ್ನಾನಗಳು, ಬೆಟ್ಟವನ್ನು ಹತ್ತುವುದು, ಪ್ರದಕ್ಷಿಣೆಗಳು, ಸಾಷ್ಟಾಂಗ ನಮಸ್ಕಾರಗಳು, ಶಠಗೋಪಗಳು, ಪೂಜೆಗಳು ಸ್ತೋತ್ರಗಳಿಂದ ಬರುವ ಪುಣ್ಯ ನಮ್ಮ ಕಷ್ಟಗಳನ್ನು ತೀರಿಸುವುದಿಲ್ಲ. ಕೋರಿಕೆಗಳನ್ನು ನೆರವೇರಿಸಲಾರವು. ನಾವು ಮಾಡಿದ ಪಾಪಗಳನ್ನು ತೊಲಗಿಸಲಾರವು. ಆದರೆ ಅವು ಮಾನವರಲ್ಲಿ ಇರುವ ಗುಣಗಳನ್ನು ಬದಲಾಯಿಸಲು ಮಾನವನನ್ನು ಒಳ್ಳೆಯ ಮಾರ್ಗಕ್ಕೆ ತರಲು ಮಾತ್ರ. ಅದೇ ಇದರಿಂದ ಬರುವ 'ಪುಣ್ಯ' ಅಂದರೆ 'ಲಾಭ'.

ಅಷ್ಟೇ ಅಲ್ಲ ಈ ಆಲಯ ಸಾಂಪ್ರದಾಯವನ್ನು ನಮ್ಮ ಪೂರ್ವಿಕರು ಪರಿಚಯಿಸಲು, ಒಂದು ಕಾರಣ ಇದೆ. ಅದೇನೆಂದರೆ ಪೂರ್ವ ಕಾಲದಲ್ಲಿ ವಿದ್ಯೆಯನ್ನು ಅಭ್ಯಸಿಸಲು ಯಾವ ಸೌಕರ್ಯಗಳು ಇರಲಿಲ್ಲ. ಪಾಠಶಾಲೆಗಳು, ವಿದ್ಯಾಲಯಗಳು, ಹಾಗೆ ಪುಸ್ತಕಗಳು, ಪೆನ್ನುಗಳು, ಕ್ಯಾಲ್ಕುಲೇಟರ್ಗಳು, ಕಂಪ್ಯೂಟರ್‌ಗಳಂತಹ ಆಧುನಿಕ ಸೌಕರ್ಯಗಳು ಇರಲಿಲ್ಲ. ಆ ಕಾಲದಲ್ಲಿ ಗುರುಕುಲ ವಿದ್ಯಾಭ್ಯಾಸ ಇರುತ್ತಿತ್ತು. ಯಾರಾದರೂ ವಿದ್ಯೆ ಕಲಿಯಬೇಕೆಂದರೆ, ಯಾವುದೋ ಒಂದು ಗುರುಕುಲಕ್ಕೆ ಹೋಗಿ ಅಲ್ಲಿರುವ ಗುರುವಿನ ಬಳಿ ವಿದ್ಯೆ ಅಭ್ಯಸಿಸಬೇಕಾಗಿರುತ್ತಿತ್ತು. ಆ ವಿದ್ಯಾಭ್ಯಾಸವು ಹೇಗೆ ಇರುತ್ತಿತ್ತು ಎಂದರೆ ಗುರು ಬಾಯಿಯಿಂದ ಹೇಳಿದರೆ ಶಿಷ್ಯನು ಕೇಳಿ ಬಾಯಿಯಿಂದ ಮನನ ಮಾಡುತ್ತಿದ್ದನು. ಹಾಗೆ

ವಿದ್ಯೆಯನ್ನು ಮಸ್ತಿಷ್ಕದಲ್ಲಿ ನಿಕ್ಷಿಪ್ತ ಮಾಡಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಮಸ್ತಿಷ್ಕಗಳೇ ಪುಸ್ತಕಗಳು. ಹಾಗೆ ಕಲಿತ ವಿದ್ಯೆಯನ್ನು ಶಿಷ್ಯರು ಅದೇ ವಿಧವಾಗಿ ನಂತರದ ತಲೆಮಾರುಗಳಿಗೆ ನೀಡುತ್ತಿದ್ದರು. ಅಂದಿನ ವಿದ್ಯಾ ವಿಧಾನ ಹಾಗೆಯೇ ಮುಂದುವರೆಯುತ್ತಿತ್ತು.

ಅಲ್ಲಿನ ಋಷಿಗಳು, ಗುರುಗಳು ಮಾಡಿರುವಂತಹ ತಪಸ್ಸಿನಿಂದ, ಅಂದರೆ ಧ್ಯಾನ ಸಾಧನೆಯಿಂದ ಅವರು ಸತ್ಯವನ್ನು ತಿಳಿದುಕೊಳ್ಳುತ್ತಿದ್ದರು. ಅವರು ತಿಳಿದುಕೊಂಡಿರುವ ಸತ್ಯವೇ 'ಆತ್ಮ'. ಅಂದರೆ ಆತ್ಮವೇ ಭಗವಂತನೆಂದು, ಭಗವಂತ ಎಲ್ಲಾ ಜೀವಿಗಳಲ್ಲಿರುವನೆಂದು ತಿಳಿದುಕೊಂಡಿದ್ದರು. ಆದರೆ ಬಾಯಿಂದ ಬೋಧಿಸುವುದರಿಂದ ಕೆಲ ದಿನಗಳಿಗೆ ಅಥವಾ ತಲೆಮಾರುಗಳ ನಂತರ ಮಾನವರು ಆತ್ಮವೇ ಭಗವಂತ ಎನ್ನುವ ಸತ್ಯವನ್ನು ಮರೆತು ಹೋಗಿದ್ದರು. ಒಂದು ವೇಳೆ ಕೆಲವರು ಈ ಸತ್ಯವನ್ನು ತಿಳಿದುಕೊಂಡರೂ, ಅದು ಅವರವರೆಗೂ ಮಾತ್ರ ಪರಿಮಿತವಾಗಿರುತ್ತಿತ್ತು. 'ಆತ್ಮ' ಭಗವಂತ ಎನ್ನುವ 'ಸತ್ಯ' ಸಾಮಾನ್ಯರಿಗೆ, ಪಾಮರರಿಗೆ ತಿಳಿಯುವ ಅವಕಾಶ ಇರುತ್ತಿರಲಿಲ್ಲ. ಅವರಿಗೆ ಭಗವಂತನ ಕುರಿತು ತಿಳಿಯುತ್ತಿರಲಿಲ್ಲ. ಆದ್ದರಿಂದ ಆತ್ಮವೇ ಭಗವಂತ ಎನ್ನುವ ಸತ್ಯ ಎಲ್ಲರಿಗೂ ತಿಳಿಸಲು ತಲೆಮಾರುಗಳಲ್ಲಿಯೂ ಯಾರೂ ಮರೆಯಬಾರದು ಎಂದು ಹಿಂದಿನ ಕಾಲದ ಋಷಿಗಳು, ಗುರುಗಳು ಆಲೋಚಿಸಿ ಈ ಆಲಯ ಸಂಪ್ರದಾಯವನ್ನು ಪರಿಚಯಿಸಿದಂತೆ ನಮಗೆ ಅರ್ಥವಾಗುತ್ತದೆ.

ಗಮನಿಸಿದರೆ ಗುಡಿಯನ್ನು ದೇಹದೊಂದಿಗೆ ಹೋಲಿಸಬಹುದು. ಕಾರಣ ದೇವರು ಇರುವ ಪ್ರದೇಶವನ್ನು ದೇವಾಲಯ ಎನ್ನುತ್ತಾರೆ. ದೇವರು ಆತ್ಮವಾದ್ದರಿಂದ 'ಆತ್ಮ' ದೇಹದಲ್ಲಿ ಇರುತ್ತದೆ. ಆದ್ದರಿಂದ ದೇಹವೇ ದೇವಾಲಯವಾಗುತ್ತದೆ. ಅದಕ್ಕೆ ಶಂಕರಾಚಾರ್ಯರು "ದೇಹವೇ ದೇವಾಲಯ ಜೀವನೇ ದೇವರು" ಎಂದಿದ್ದಾರೆ. ಹಾಗೆ ದೇಹವೆನ್ನುವ ದೇವಾಲಯಕ್ಕೆ ಪ್ರತಿರೂಪವೇ ಗುಡಿ. ದೇಹದಲ್ಲಿರುವ ದೇವರಿಗೆ ಪ್ರತಿರೂಪವೇ ಗುಡಿಯಲ್ಲಿರುವ ವಿಗ್ರಹ. ವಿವಿಧವಾಗಿ ಆಲಯ ನಿರ್ಮಾಣಗಳು ಮಾಡಿ ಈ ಸತ್ಯವನ್ನು ಶಾಶ್ವತವಾಗಿ ಲೋಕಕ್ಕೆ ನೀಡಿದವರು ಅಂದಿನ ಪಂಡಿತರು. ಭಗವಂತ ದೇಹದಲ್ಲಿ ಇದ್ದಾನೆ ಎಂದು ತಿಳಿಸಿ ಹೇಳುವುದೇ ಈ ಆಲಯ ಸಂಪ್ರದಾಯದಲ್ಲಿನ ಅಂತರಾರ್ಥ.

ಮಾನವ ಜೀವನ ಲಕ್ಷ್ಯ ತಿನ್ನುವುದು, ಕುಡಿಯುವುದು, ನಿದ್ರಿಸುವುದಲ್ಲ. ಭಗವಂತನ ಕುರಿತು ತಿಳಿದುಕೊಂಡು ಭಗವಂತನನ್ನು ಸೇರುವುದೇ ಮಾನವ ಜೀವನ ಲಕ್ಷ್ಯ. ಈ ಲಕ್ಷ್ಯವನ್ನು ಸಾಧಿಸಿದವರು ದುಃಖಗಳಿಂದ, ಕಷ್ಟಗಳಿಂದ ಶಾಶ್ವತವಾಗಿ ಹೊರಬರುತ್ತಾರೆ. ಆ ಲಕ್ಷ್ಯ ಸಾಧಿಸಬೇಕೆಂದು ಪಂಡಿತರು ಆಲಯ ಸಂಪ್ರದಾಯವನ್ನು ಲೋಕಕ್ಕೆ ನೀಡಿದ್ದಾರೆ.

ಆದರೆ ಮಾನವರು ಬಾಹ್ಯವಾದ ಅರ್ಥ ತೆಗೆದುಕೊಳ್ಳುತ್ತಿದ್ದಾನೆ, ಆದರೆ ಅಂತರಾರ್ಥ ತಿಳಿದುಕೊಳ್ಳುತ್ತಿಲ್ಲ.

ನೋಡಿ ದೇವಾಲಯಗಳಿಗೆ ಏಕೆ ಹೋಗುತ್ತಿದ್ದಾರೆ? ವಿಗ್ರಹ ದರ್ಶಿಸಬೇಕೆಂಬ ಉದ್ದೇಶದೊಂದಿಗೆ ಹೋಗುತ್ತಿದ್ದಾರೆ. ಹಾಗೆ ಗುಡಿಗೆ ಹೋದವರು ಮೊದಲು ಹೊರಗೆ ಪಾದರಕ್ಷೆಗಳನ್ನು ಬಿಡುತ್ತಾರೆ. ನಂತರ ಗುಡಿಯ ಸುತ್ತಲೂ ಮೂರು ಪ್ರದಕ್ಷಿಣೆಗಳನ್ನು ಹಾಕುತ್ತಾರೆ. ನಂತರ ಪೂಜಾರಿಯನ್ನು ಆಶ್ರಯಿಸುತ್ತಾರೆ. ಅಲ್ಲಿ ಆತನಿಗೆ ಕರ್ಪೂರ,ತೆಂಗಿನಕಾಯಿ ಕೊಡುತ್ತಾರೆ. ಅವರು ಕೊಟ್ಟ ಕೂಡಲೇ ಪೂಜಾರಿ ತೆಂಗಿನಕಾಯಿ ಒಡೆದು ಆರತಿ ಕೊಡುತ್ತಾನೆ. ಆತ ಆರತಿ ಕೊಡುವಾಗ ಜನರು ವಿಗ್ರಹಕ್ಕೆ, ನಮಸ್ಕರಿಸಿಕೊಳ್ಳುತ್ತಾರೆ. ನಂತರ ಪೂಜಾರಿ ಕೊಬ್ಬರಿಯನ್ನು ನಿವೇದನೆ ಮಾಡಿ ಅರ್ಧ ಹೋಳನ್ನು ಕೊಡುತ್ತಾನೆ. ಅದನ್ನೇ ಪ್ರಸಾದವೆನ್ನುತ್ತಾರೆ. ಅದು ತಿಂದು ಅದರ ಮಾಧುರ್ಯವನ್ನು ಆಸ್ವಾದಿಸುತ್ತಾರೆ. ಅಲ್ಲೇ ಸ್ವಲ್ಪ ಹೊತ್ತು ಕುಳಿತು ಮನೆಗೆ ಹೋಗುತ್ತಾರೆ. ಆಲಯಕ್ಕೆ ಹೋದಾಗ ಯಾರಾದರೂ ಮಾಡುವುದು ಇದನ್ನೇ... ಆದರೆ ಇವೆಲ್ಲವನ್ನು ಅರ್ಥ ಇಲ್ಲದೆ ಮಾಡಿಲ್ಲ ಅರ್ಥದೊಂದಿಗೆ ಇವೆಲ್ಲವನ್ನೂ ಪರಿಚಯಿಸಲಾಗಿದೆ.

ಹಾಗೆ ಜೀವನದಲ್ಲಿ ಯಾರಿಗಾದರೂ ಸತ್ಯವಾದ ದೇವರನ್ನು ದರ್ಶಿಸದೆ ಅಂದರೆ ದೇವರನ್ನು ಸೇರದೆ ಕಷ್ಟಗಳು ತೀರುವುದಿಲ್ಲ, ಮುಕ್ತಿ ಬರುವುದಿಲ್ಲ. ವಿಗ್ರಹ ದರ್ಶನ ಮಾಡಿಕೊಳ್ಳಬೇಕು ಎಂಬುದರ ಹಿಂದೆ ಇರುವ ಅರ್ಥ ದೈವವನ್ನು ದರ್ಶಿಸಬೇಕೆನ್ನುವುದೇ ಆಗಿದೆ. ಸತ್ಯವಾದ ದೈವವನ್ನು ದರ್ಶಿಸಬೇಕೆಂದರೆ, ಮೊದಲು ಧೂಳಿನಿಂದ ಕೂಡಿದ ಪಾದರಕ್ಷೆಗಳನ್ನು ಹೊರಗೆ ಬಿಟ್ಟಂತೆ, ನಮ್ಮಲ್ಲಿರುವ ಅರಿಷಡ್ವರ್ಗಗಳನ್ನು, ಕೆಟ್ಟಗುಣಗಳನ್ನು, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಬಿಡಬೇಕು. ಮೂರು ಪ್ರದಕ್ಷಿಣೆಗಳನ್ನು ಮಾಡುವುದರ ಅರ್ಥ ನಮ್ಮಲ್ಲಿರುವ ಮೂರು ಗುಣಗಳು ಸತ್ವ, ರಜೋ, ತಮೋಗುಣಗಳನ್ನು ಬಿಡಬೇಕೆಂದು ಅರ್ಥ. ಹಾಗೆ ಗುಡಿಯಲ್ಲಿರುವ ವಿಗ್ರಹವನ್ನು ದರ್ಶಿಸಬೇಕೆಂದರೆ ಮೊದಲು ಪೂಜಾರಿಯನ್ನು ಆಶ್ರಯಿಸಬೇಕು. ಹಾಗೆ ನಿಮ್ಮಲ್ಲಿರುವ ದೈವವನ್ನು ಅಂದರೆ ಆತ್ಮವನ್ನು ಆಶ್ರಯಿಸಬೇಕೆಂದರೆ, ಮುಖ್ಯವಾಗಿ ದೈವರನ್ನು ದರ್ಶಿಸುವಂತೆ ಮಾಡಬಲ್ಲ ಒಬ್ಬ ಗುರುವನ್ನು ಆಶ್ರಯಿಸಬೇಕು.

ಪೂಜಾರಿಯನ್ನು ಆಶ್ರಯಿಸಿದಾಗ ಆತ ಒಂದೇ ಒಂದು ಜುಟ್ಟಿನಲ್ಲಿರುವಂತೆ ಮಾಡಿ ತೆಂಗಿನ ನಾರನ್ನು ತೆಗೆಯುತ್ತಾನೆ. ಏಕೆಂದರೆ, ನಮ್ಮನ್ನು ಸುತ್ತಿಕೊಂಡಿರುವ ಕೋರಿಕೆಗಳನ್ನು ಬಿಡಬೇಕೆಂದು, ಇಲ್ಲದಂತೆ ಮಾಡಿಕೊಳ್ಳಬೇಕೆನ್ನುವುದು ಇದರ ಅರ್ಥ. ನಂತರ ಪೂಜಾರಿ

ಆ ತೆಂಗಿನಕಾಯಿ ಒಡೆಯುತ್ತಾನೆ. ಅದರ ಅರ್ಥ ದೈವವನ್ನು ದರ್ಶಿಸಬೇಕೆಂದು ನಾವು ಗುರುವನ್ನು ಆಶ್ರಯಿಸಿದಾಗ ಮೊದಲು ಗುರು ನಮ್ಮಲ್ಲಿ ಆಳವಾಗಿ ಬೇರೂರಿರುವ ಅಹಂಕಾರವನ್ನು ಒಡೆಯುತ್ತಾನೆ. ಅಂದರೆ ಹೋಗಲಾಡಿಸುತ್ತಾನೆ. ಗಟ್ಟಿಯಾಗಿರುವ ತೆಂಗಿನಕಾಯಿ ಒಡೆಯುವುದರ ಅರ್ಥ ಇದೇ...

ನಂತರ ಪೂಜಾರಿ ಆರತಿ ಮಾಡಿ ವಿಗ್ರಹದ ಸುತ್ತಲೂ ಮೂರು ಸಾರಿ ಬೆಳಗುತ್ತಾರೆ. ಆರತಿಯ ಬೆಳಕಿನಲ್ಲಿ ವಿಗ್ರಹ ಕಂಡ ಕೂಡಲೇ ನಾವು ಅಲ್ಲಿಯವರೆಗೂ ಬೇರೆಯಾಗಿದ್ದ ಎರಡು ಕೈಗಳನ್ನು ಹತ್ತಿರಕ್ಕೆ ಸೇರಿಸಿ ನಮಸ್ಕರಿಸುತ್ತೇವೆ. ಹಿಂದಿನ ಕಾಲದ ಆಲಯಗಳಲ್ಲಿ, ಅಂದರೆ ಆಗಮ ಶಾಸ್ತ್ರದ ಪ್ರಕಾರ ನಿರ್ಮಿಸಿದ ಆಲಯದ ಗರ್ಭಗುಡಿಯಲ್ಲಿ ಕತ್ತಲಾಗಿರುತ್ತದೆ. ಯಾವುದೋ ಒಂದು ಮೂಲೆಯಲ್ಲಿ ಮಾತ್ರ ಅಖಂಡ ದೀಪ ಬೆಳಗುತ್ತಿರುತ್ತದೆ. ಚಿಕ್ಕ ಬೆಳಕಿನಲ್ಲಿ ವಿಗ್ರಹ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆದ್ದರಿಂದ, ಆರತಿ ಮಾಡುವಾಗ ಆ ಬೆಳಕಿನಲ್ಲಿ ವಿಗ್ರಹ ಸ್ಪಷ್ಟವಾಗಿ ಕಾಣುವುದರಿಂದ, ಬೇರೆಯಾಗಿರುವ ನಮ್ಮ ಕೈಗಳು ನಮಗೆ ತಿಳಿಯದೆ ಹತ್ತಿರಕ್ಕೆ ಬರುತ್ತವೆ ನಮಸ್ಕರಿಸಿಕೊಳ್ಳುತ್ತೇವೆ.

ಯಾವಾಗ ಗುರು ನಮ್ಮಲ್ಲಿನ ಅಹಂಕಾರವನ್ನು ತೊಲಗಿಸುವನೋ, ನಮ್ಮಲ್ಲಿರುವ ಅಜ್ಞಾನ ಎನ್ನುವ ಅಂಧಕಾರ ತೊಲಗುತ್ತದೆ. ಜ್ಞಾನವೆನ್ನುವ ಬೆಳಕು ಪ್ರಕಾಶಿಸುತ್ತದೆ. ಆ ಜ್ಞಾನವೆನ್ನುವ ಬೆಳಕಿನಲ್ಲಿ ಸತ್ಯವಾದ ದೈವ, ಅಂದರೆ ಆತ್ಮ ಸಾಕ್ಷಾತ್ಕರಿಸುತ್ತದೆ. ಹಾಗೆ ಆತ್ಮ ಸಾಕ್ಷಾತ್ಕರಿಸಿದ ಕೂಡಲೇ ಅಲ್ಲಿಯವರೆಗೂ ದೇವರು ಬೇರೆ ನಾನು ಬೇರೆ ಎನ್ನುವ ಭಾವದಿಂದ ಇರುವವರು ದೈವ ಬೇರೆ ನಾನು ಬೇರೆಯಲ್ಲ ಇಬ್ಬರೂ ಒಂದೇ ಎಂದು ತಿಳಿದುಕೊಳ್ಳುತ್ತಾರೆ. ನಾನೇ ಆ ದೇವರು ಎನ್ನುವ ಸತ್ಯ ಅರಿವಾಗುತ್ತದೆ. "ಅಹಂ ಬ್ರಹ್ಮಾಸ್ಮಿ" ಎನ್ನುವ ಸತ್ಯದ ಅರಿವಾಗುತ್ತದೆ. ಅದೇ ಬಿಡಿಯಾಗಿರುವ ಕೈಗಳು ಹತ್ತಿರಕ್ಕೆ ಸೇರಿಸಿ ನಮಸ್ಕರಿಸುವುದರಲ್ಲಿರುವ ಅಂತರಾರ್ಥ.

ಆದ್ದರಿಂದ ತಿಳಿದಿರಲಿ ನಿಮ್ಮಲ್ಲಿರುವ ದೈವವನ್ನು ದರ್ಶಿಸಬೇಕೆಂದು ತಿಳಿಸಿ ಹೇಳುವುದೇ, ಗುಡಿಯಲ್ಲಿರುವ ವಿಗ್ರಹವನ್ನು ದರ್ಶಿಸಬೇಕೆಂದು ಹೇಳುವುದರ ಹಿಂದಿರುವ ಅಂತರಾರ್ಥ.

# ಪ್ರಸಾದ



ನಂತರ ನಾವು ನೀಡಿದವುಗಳಲ್ಲಿ ಬಾಳೆಹಣ್ಣಾಗಲಿ, ತೆಂಗಿನಕಾಯಿ ಆಗಲಿ ಇನ್ನು ಯಾವುದಾದರೂ, ಅರ್ಚಕರು ನಮಗೆ ಕೊಡುತ್ತಾರೆ. ಅಂದರೆ ನಾವು ಯಾವುದು ಕೊಟ್ಟರೆ ಅದು ಅರ್ಚಕರು ಕೊಡುತ್ತಾರೆ. ಅದನ್ನೇ ಪ್ರಸಾದವಾಗಿ ಸ್ವೀಕರಿಸುತ್ತೇವೆ. ಅದನ್ನು ಪವಿತ್ರವಾಗಿ ಭಾವಿಸಿ ತೆಗೆದುಕೊಳ್ಳುತ್ತೇವೆ. ಇದಕ್ಕೂ ಅರ್ಥ ಇದೆ. ನಾವು ಯಾವುದನ್ನು ದೇವರಿಗೆ ಕೊಡುತ್ತೇವೆ ಅಂದರೆ ಸೃಷ್ಟಿಗೆ ನೀಡುತ್ತೇವೆ, ಅದೇ ನಮಗೆ ಮತ್ತೆ ಪಡೆಯುತ್ತೇವೆ ಎಂದು ಪ್ರಸಾದ ಕೊಡುವುದರ ಅರ್ಥ. ನೋಡಿ ಸೃಷ್ಟಿಯಲ್ಲಿ ನೀವು ಏನು ಕೊಟ್ಟರೆ ಅದು, ಎಷ್ಟು ಕೊಟ್ಟರೆ ಅಷ್ಟೇ, ಮರಳಿ ಬರುತ್ತದೆ. ಎಂತಹದು ಕೊಟ್ಟರೆ ಅಂತದ್ದು ಹೊಂದುತ್ತೆವೆ ಎನ್ನುವುದು, ಪ್ರಸಾದವನ್ನು ಮತ್ತೆ ಕೊಡುವುದರಲ್ಲಿನ ಅರ್ಥ. ಅದಕ್ಕೆ ಬಾಳೆಹಣ್ಣು ಕೊಟ್ಟರೆ ಬಾಳೆಹಣ್ಣು ತೆಂಗಿನಕಾಯಿ ಕೊಟ್ಟರೆ ತೆಂಗಿನಕಾಯಿ. ಹಾಗೆ ಯಾವುದು ಕೊಟ್ಟರೆ ಅದು ಪ್ರಸಾದವಾಗಿ ಹೊಂದುತ್ತೇವೆ. ಅಂದರೆ ಒಳಿತನ್ನು ಮಾಡಿದರೆ ಒಳಿತು, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು, ಹಿಂಸೆ ಮಾಡಿದರೆ ಹಿಂಸೆ, ಸೇವೆ ಮಾಡಿದರೆ ಸೇವೆ, ಗೌರವಿಸಿದರೆ ಗೌರವ, ಅವಮಾನಿಸಿದರೆ ಅವಮಾನ, ನಷ್ಟವನ್ನುಂಟು ಮಾಡಿದರೆ ನಷ್ಟವನ್ನು ಹೊಂದುತ್ತೇವೆ. ಕಷ್ಟವನ್ನು ನೀಡಿದರೆ ಕಷ್ಟಗಳನ್ನೇ ಹೊಂದುತ್ತೇವೆ ಎಂದು ಹೇಳುವುದೇ, ಕೊಟ್ಟದ್ದನ್ನು ಮತ್ತೆ ಪ್ರಸಾದವಾಗಿ ಕೊಡುವುದರಲ್ಲಿನ ಅರ್ಥ.

ಇದು ಅರ್ಥ ಮಾಡಿಕೊಂಡು ಆಚಾರವನ್ನು ಅನುಸರಿಸುತ್ತಾ, ಗುಡಿಯಲ್ಲಿ ಕೊಟ್ಟರೆ ನಿಮಗೆ ಅರ್ಚಕರು ಬರುತ್ತದೆ ಎನ್ನುವುದರ ಅರ್ಥ ತಿಳಿದುಕೊಂಡು, ಒಳಿತನ್ನು ಲೋಕಕ್ಕೆ ನೀಡಿದರೆ ಇನ್ನೂ ಅಧಿಕವಾಗಿ ನಮಗೆ ಮರಳಿ ಬರುತ್ತದೆ ಎಂದು ತಿಳಿದುಕೊಳ್ಳಬೇಕು.

ಇದನ್ನು ನಾವು ಅರ್ಥ ಮಾಡಿಕೊಂಡು ಈ ಸೃಷ್ಟಿಯಿಂದ ನಾವು ಏನನ್ನು ಆಶಿಸುತ್ತೇವೆ ಅದೇ ಕೊಡಲು ಪ್ರಯತ್ನಿಸಬೇಕು. ಯಾವುದು ಬೇಡ ಎಂದುಕೊಂಡರೆ ಅದು ಕೊಡಬಾರದು. ಆದರೆ ಇದು ಅರ್ಥ ಮಾಡಿಕೊಳ್ಳದೇ ಇರುವುದರಿಂದ, ಎಲ್ಲರೂ ಸೃಷ್ಟಿಗೆ ವಿರುದ್ಧವಾಗಿ ಪ್ರವರ್ತಿಸುತ್ತಿದ್ದಾರೆ. ಹೇಗೆಂದರೆ, ಎಲ್ಲರೂ ಜೀವಿಗಳನ್ನು ಹಿಂಸಿಸುತ್ತಾ ಖುಷಿಪಡುತ್ತಿದ್ದಾರೆ. ಆನಂದ ಬಯಸುತ್ತಿದ್ದಾರೆ...., ಅಂದರೆ ಕೊಡುವುದೊಂದು

ಬಯಸುವುದು ಮತ್ತೊಂದು. ಹಾಗಾದಾಗ ಕೋರಿಕೊಂಡಿದ್ದು ಹೇಗೆ ಬರುತ್ತದೆ ಹೇಳಿ? ಏನು ಮಾಡಿದರೆ ಅದೇ ಈ ಸೃಷ್ಟಿಯಿಂದ ಬರುತ್ತದೆ ಅಲ್ಲವೇ. ಆದ್ದರಿಂದ ಹಿಂಸೆ ನೀಡದಿರಿ. ಆದಷ್ಟು ಎಲ್ಲರನ್ನೂ, ಎಲ್ಲಾ ಪ್ರಾಣಿಗಳನ್ನು ಆನಂದವಾಗಿರುವಂತೆ ಮಾಡಲು ಪ್ರಯತ್ನಿಸಿ. ಆಗ ನೀವು ಯಾವಾಗಲೂ ಆನಂದವಾಗಿ ಜೀವಿಸಬಲ್ಲಿರಿ. ಇದೇ ದೇವಾಲಯದಲ್ಲಿ ಪ್ರಸಾದ ಹಿಂತಿರುಗಿಸುವುದರ ಮೂಲಕ ನಿಮಗೆ ನೀಡಲಾಗಿರುವ ಸಂದೇಶ. ಹಾಗೆ ನೀಡುವುದರ ಅರ್ಥ.

ಅಷ್ಟೇ ಅಲ್ಲ ಕೊಟ್ಟಿರುವ ಪ್ರಸಾದವನ್ನು ಪವಿತ್ರವಾಗಿ ಭಾವಿಸುತ್ತಾ ಕಣ್ಣಿಗೆ ಒತ್ತಿಕೊಂಡು ಸ್ವೀಕರಿಸುತ್ತೇವೆ. ಅದರ ಅರ್ಥ ಜೀವನದಲ್ಲಿ ನಮಗೆ ಯಾವುದು ಕೊಡಲ್ಪಟ್ಟರು ಅದು ಭಗವಂತನ ಪ್ರಸಾದವಾಗಿ ಭಾವಿಸಬೇಕು. ಆನಂದವಾಗಿ ಸ್ವೀಕರಿಸಬೇಕು. ನಾವು ನೀಡಿರುವುದ್ದಕ್ಕೆ ಕೊಡಲ್ಪಟ್ಟ ಪ್ರಸಾದವಿದು ಎಂದು ಭಾವಿಸಬೇಕು. ಅದು ಕಷ್ಟವೋ – ಸುಖವೋ, ಲಾಭವೋ – ನಷ್ಟವೋ, ಗೌರವವೋ – ಅಗೌರವವೋ..., ಹಿಂಸೆಯಾದರೂ, ರೋಗವಾದರೂ, ಆನಂದದಿಂದ ಸ್ವೀಕರಿಸಬೇಕು. ಎಲ್ಲದರಲ್ಲೂ ಸಮಭಾವವನ್ನು ಪ್ರದರ್ಶಿಸಬೇಕು. ಸುಖ ಬಂದರೆ ಹಿಗ್ಗಬಾರದು ಕಷ್ಟ ಬಂದರೆ ಕುಗ್ಗಬಾರದು. ಇದು ಪ್ರಸಾದವನ್ನು ಕಣ್ಣಿಗೆ ಒತ್ತಿಕೊಂಡು ತೆಗೆದುಕೊಳ್ಳುವುದರ ಅರ್ಥ.

ನೆನಪಿರಲಿ ಪೂಜಾರಿ ಕೊಟ್ಟಿದ್ದು ಪೂಜಾರಿ ಪ್ರಸಾದವಾಗುತ್ತದೆ. ಸೃಷ್ಟಿಯಿಂದ ನಮಗೆ ಲಭಿಸುವುದು ಭಗವಂತನ ಪ್ರಸಾದ. ಆದರೆ ಎಲ್ಲರೂ ಪೂಜಾರಿ ಕೊಟ್ಟಿರುವುದನ್ನು ಕಣ್ಣಿಗೆ ಒತ್ತಿಕೊಂಡು ಪವಿತ್ರವಾಗಿ ಸ್ವೀಕರಿಸುತ್ತಿದ್ದಾರೆ. ಆದರೆ ಭಗವಂತ ನೀಡಿರುವುದನ್ನು ಪವಿತ್ರವಾಗಿ ಭಾವಿಸುತ್ತಿಲ್ಲ .

ನೆನಪಿರಲಿ ನಮಗೆ ಏನಿದ್ದರೂ, ಏನೂ ಹೊಂದಿದ್ದರೂ ಅವು ಎಲ್ಲವೂ ಭಗವಂತನ ಸೃಷ್ಟಿಯಿಂದ ಹೊಂದಿರುವುದೇ ಹೊರತು ನಾವು ಬರುವಾಗ ತಂದುಕೊಂಡಿರುವುದಲ್ಲ. ಆದ್ದರಿಂದ ನಮ್ಮ ಜೀವನದಲ್ಲಿ ಏನು ಕೊಡಲ್ಪಟ್ಟರೂ ಅದು ಭಗವಂತನ ಪ್ರಸಾದವೆಂದು ಭಾವಿಸಬೇಕು. ಅದೇ ಪ್ರಸಾದವನ್ನು ಕಣ್ಣಿಗೆ ಒತ್ತಿಕೊಳ್ಳುವುದರಲ್ಲಿನ ಅಂತರಾರ್ಥ, ಅಷ್ಟೇ ಹೊರತು ನಾವು ತಿನ್ನುವ ಪ್ರಸಾದದಿಂದ ನಾವು ಬಯಸಿರುವುದು ಯಾವುದು ಬರುವುದಿಲ್ಲ. ಕಷ್ಟಗಳು ಹೋಗುವುದಿಲ್ಲ. ಆದ್ದರಿಂದ ಅದರಲ್ಲಿನ ಅಂತರಾರ್ಥವನ್ನು ತಿಳಿದುಕೊಂಡು ವರ್ತಿಸಬೇಕು.

ಪ್ರಸಾದದ ವಿಷಯದಲ್ಲಿ ನಾವು ಇನ್ನೂ ಕೆಲವು ವಿಷಯಗಳನ್ನು ತಿಳಿದುಕೊಳ್ಳಬೇಕು. ಆಲಯದಲ್ಲಿ ನಿವೇದಿಸಿರುವುದೆಲ್ಲ ಸಾತ್ವಿಕವಾದ ಪದಾರ್ಥಗಳೇ ಆಗಿರುತ್ತದೆ. ಅಂದರೆ ಪುಳಿಯೋಗರೆ, ಮೊಸರನ್ನ, ಸಕ್ಕರೆ ಪೊಂಗಲ್, ಪಾಯಸ ಅಲ್ಲದೆ ವಡೆ, ತಂಬಿಟ್ಟುಗಳನ್ನು ನಿವೇದಿಸುತ್ತಾರೆ. ಹೆಚ್ಚಾಗಿ ಹಣ್ಣು ಹಂಪಲುಗಳು ಕೊಡುವ ಆಚಾರ ಕಾಣಿಸುತ್ತದೆ. ಕಾರಣ ಎಲ್ಲಕ್ಕಿಂತ ಫಲಹಾರವೇ ವಿಶೇಷವಾದ್ದರಿಂದ, ಫಲಗಳು ಶ್ರೇಷ್ಠವೇ ಅಲ್ಲದೇ ಸಾತ್ವಿಕ

ಗುಣವನ್ನು ಹೆಚ್ಚಿಸುತ್ತವೆ. ಅಷ್ಟೇ ಅಲ್ಲ ಎಲ್ಲರೂ ಸಾತ್ವಿಕ ಗುಣಕ್ಕೆ ಬದಲಾಗಬೇಕೆಂದು ಎಲ್ಲರೂ ಸಾತ್ವಿಕವಾದ ಆಹಾರ ತೆಗೆದುಕೊಳ್ಳಬೇಕೆಂದು ಆಲಯಗಳಲ್ಲಿ ಇಂತಹವನ್ನು ನಿವೇದಿಸುವುದರ ಹಿಂದಿರುವ ಅಂತರಾರ್ಥ.

ಪುಣ್ಯವೆನ್ನುವ ಭಾವದೊಂದಿಗೆ ಪ್ರಸಾದದವರೆಗೂ, ಸಾತ್ವಿಕತೆಯನ್ನು ಅನುಸರಿಸುತ್ತಿದ್ದಾರೆ. ಆದರೆ ಆಲಯಗಳಲ್ಲಿ ಅಂತಹ ಸಾತ್ವಿಕವಾದ ಪದಾರ್ಥಗಳು ಹಣ್ಣುಗಳನ್ನು ಏಕೆ ನಿವೇದಿಸುತ್ತಿದ್ದಾರೋ, ಅದು ಆಲಯ ಸಾಂಪ್ರದಾಯಗಳಲ್ಲಿ ಹಿರಿಯರು ಅಂತಹುದನ್ನೇ ಏಕೆ ನಿವೇದಿಸಲು ಹೇಳುತ್ತಿದ್ದಾರೋ, ಅರ್ಥ ಮಾಡಿಕೊಳ್ಳದಿರುವುದರಿಂದ ಅದರಲ್ಲಿನ ಅಂತರಾರ್ಥ ಗ್ರಹಿಸಲಾರದಿರುವುದರಿಂದ... ದಿನ ತೆಗೆದುಕೊಳ್ಳುವ ಆಹಾರ ವಿಷಯದಲ್ಲಿ ಈ ನಿಯಮ ಅನುಸರಿಸದೆ, ಇಷ್ಟ ಬಂದಂತೆ ಅವರಿಗೆ ಇಷ್ಟವಾದ ಆಹಾರ ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಯಾವಾಗಲೂ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಹಾಗೆ ರುಚಿಗೆ ಪ್ರಾಮುಖ್ಯತೆ ನೀಡಿ ಮಾಂಸಹಾರವನ್ನು ಅಂದರೆ ಚಿಕನ್, ಮಟನ್, ಮೀನುಗಳು, ಮೊಟ್ಟೆಗಳು ತಿನ್ನುತ್ತಿದ್ದಾರೆ. ರುಚಿಗೆ ಪ್ರಾಮುಖ್ಯತೆ ಕೊಟ್ಟು, ಮಾಂಸಾಹಾರವನ್ನು ತಯಾರಿಸಿ ತಿನ್ನುತ್ತಿದ್ದಾರೆ. ಹಾಗೆ ತಿಂದರೆ ಮಾತ್ರ ಜೀವನ ಎಂದುಕೊಳ್ಳುತ್ತಿದ್ದಾರೆ. ಅದಕ್ಕಿಂತ ಹೆಚ್ಚು ಆಲೋಚಿಸುತ್ತಿಲ್ಲ.

ಆದರೆ ಮಾಂಸಹಾರ ಮೊಟ್ಟೆಗಳು ಎಲ್ಲವೂ ರಜೋಗುಣವನ್ನು ಹೆಚ್ಚಿಸುತ್ತವೆ ಎಂದು ತಿಳಿಯಲಾರದೆ ಹೋಗುತ್ತಿದ್ದಾರೆ. ರಜೋಗುಣದಲ್ಲಿ ಆವೇಶ ಇರುತ್ತವೆ ವಿವೇಕ ನಶಿಸುತ್ತದೆ. ಆಲೋಚನೆ ಇರುವುದಿಲ್ಲ. ಅದರ ಮೂಲಕ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಸೃಷ್ಟಿಗೆ, ಸೃಷ್ಟಿ ಧರ್ಮಗಳಿಗೆ ವಿರುದ್ಧವಾಗಿ ವರ್ತಿಸಿ ಇತರರಿಗೆ ನಷ್ಟವನ್ನುಂಟು ಮಾಡುತ್ತಾರೆ. ಅಂತಹ ಕೆಲಸ ಮಾಡುವುದರಿಂದ, ಭವಿಷ್ಯತ್ತಿನಲ್ಲಿ ತಾವು ನಷ್ಟ ಹೊಂದುತ್ತೇವೆ ಎಂದು ತಿಳಿದುಕೊಳ್ಳುತ್ತಿಲ್ಲ. ತಪ್ಪುಗಳು ಮಾಡುತ್ತಿದ್ದಾರೆ. ಏಕೆ ಹಾಗೆ ಪ್ರವರ್ತಿಸುತ್ತಿದ್ದಾರೆ ಎಂದರೆ ತಪ್ಪೇನು? ಎನ್ನುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಹಾಗೆ ಮಾತನಾಡದೇ ಇರಲು ಸಾಧ್ಯವಿಲ್ಲ. ಹಾಗೆ ವರ್ತಿಸದಿದ್ದರೆ ಸಾಧ್ಯವಿಲ್ಲ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ತಮ್ಮ ವರ್ತನೆ ಹಾಗಿರಲು ತಮ್ಮ ಗುಣವೇ ಕಾರಣವೆಂದು ಗ್ರಹಿಸುತ್ತಿಲ್ಲ.

ತಿಳಿದುಕೊಳ್ಳಿ– ಆಲಯ ಸಾಂಪ್ರದಾಯವನ್ನು ನಂಬಿದವರು ಸಾತ್ವಿಕವಾದ ಶಾಕಾಹಾರವನ್ನೇ ತೆಗೆದುಕೊಳ್ಳಬೇಕು. ಅಧಿಕವಾಗಿ ಫಲಹಾರ ತೆಗೆದುಕೊಳ್ಳಬೇಕು. ಅದು ಅವರಿಗೆ ಶ್ರೇಷ್ಠವೂ, ಲಾಭದಾಯಕವೂ ಆಗಿರುತ್ತದೆ. ಅದಕ್ಕೆ ಆಲಯಗಳಲ್ಲಿ ಮಾಂಸ, ಮೀನು, ಪಲಾವ್ ನೈವೇದ್ಯಕ್ಕೆ ಇಡುತ್ತಿಲ್ಲ. ಕಾರಣ ಅಂತಹ ಆಹಾರ, ಶಾಖಾಹಾರಕ್ಕಾಗಿ ನಿರ್ಮಿತವಾದ ಮಾನವ ಶರೀರಕ್ಕೆ ನಿಷಿದ್ಧ. ಆದ್ದರಿಂದ ಪ್ರಸಾದದ ಒಂದು ವಿಶಿಷ್ಟತೆ,

ಅಂತರಾರ್ಥ ತಿಳಿದುಕೊಂಡು ನಿಜ ಜೀವನದಲ್ಲಿಯೂ, ಯಾರು ಸಾತ್ವಿಕವಾದ ಶಾಖಾಹಾರ ತೆಗೆದುಕೊಳ್ಳುತ್ತಾರೋ, ಅವರ ಜೀವನ ಸಂಪೂರ್ಣವಾಗಿ ಬದಲಾಗುತ್ತದೆ. ಅವರ ಗುಣಗಳು ಬದಲಾಗುತ್ತವೆ.... ಇದೇ ಪ್ರಸಾದದಲ್ಲಿರುವ ಅಂತರಾರ್ಥ.


ಅಷ್ಟೇ ಅಲ್ಲಾ ದೇಹಕ್ಕೆ ಪ್ರತಿರೂಪ ಆಲಯವೆಂದು ತಿಳಿದುಕೊಂಡಿದ್ದೇವೆ. ಅಂದರೆ ಆಲಯದಲ್ಲಿ ಸಾತ್ವಿಕವಾದ ಶಾಖಾಹಾರ ನೈವೇದ್ಯ ಏಕೆ ಮಾಡುತ್ತಾರೆಂದರೆ, ನಮ್ಮ ದೇಹದಲ್ಲೂ ಕೂಡ ಸಾತ್ವಿಕವಾದ ಶಾಖಾಹಾರ ಹಾಕಬೇಕೆನ್ನುವುದು ಅದರ ಅರ್ಥ. ಕಾರಣ ದೇಹವೇ ನಿಜವಾದ ದೇವಾಲಯ. ಏಕೆಂದರೆ ದೇವರು ಇರುವುದು ದೇಹದಲ್ಲಿ. ಶಂಕರಾಚಾರ್ಯರು "**ದೇಹೋ ದೇವಾಲಯೋ ಪ್ರೋಕ್ತಾ ಜೀವೋ ದೇವೋ ಸನಾತನಃ**" ಎಂದಿದ್ದಾರೆ. ಅಂದರೆ ದೇಹವೇ ದೇವಾಲಯ ಅದರಲ್ಲಿರುವ ಜೀವವೇ ದೇವರು ಎಂದು ಸ್ಪಷ್ಟವಾಗಿ ಹೇಳಿದ್ದಾರೆ .

ಅದರಿಂದ ಸತ್ಯವಾದ ದೇವಾಲಯದಲ್ಲಿ ಎಂತಹ ಆಹಾರ ಇರಬೇಕು ಎಂದು ತಿಳಿಸಿ ಹೇಳಲು ಆಲಯದಲ್ಲಿ ಸಾತ್ವಿಕವಾದ ಪದಾರ್ಥಗಳನ್ನು ನೈವೇದ್ಯ ಮಾಡುತ್ತಾರೆ. ಆದರೆ ಮಾನವರು ಇದು ಅರ್ಥಮಾಡಿಕೊಳ್ಳದೆ, ದೇವರು ಇರುವ ಆಲಯದಲ್ಲಿ.... ಅಂದರೆ ಈ ದೇಹದಲ್ಲಿ ಸತ್ತ ಪ್ರಾಣಿಗಳ ಮಾಂಸವನ್ನು ಹಾಕುತ್ತಿದ್ದಾರೆ. ಅದಕ್ಕಿಂತ ಮುಂದೆ ಏನೂ ಆಲೋಚಿಸುತ್ತಿಲ್ಲ. ಸತ್ತ ಪ್ರಾಣಿಯನ್ನು ಶವ ಎನ್ನುತ್ತಾರೆ. ಅಂತಹ ಶವವನ್ನು ದೇವರು ಆಲಯದಲ್ಲಿರಿಸಿದರೆ, ಅದು ಎಷ್ಟು ಅಪವಿತ್ರವಾದ ಕೆಲಸ. ಎಷ್ಟು ಅಪಚಾರವೋ ಆಲೋಚಿಸಿ... ಶವಗಳನ್ನು ಸ್ಮಶಾನದಲ್ಲಿ ಹೂಳುತ್ತಾರೆ. ಅಷ್ಟೇ ಹೊರತು, ದೇಹದಂತಹ ದೇವಾಲಯದಲ್ಲಿ ಇರಿಸುವುದಿಲ್ಲ. ನೋಡಿ ಯಾವ ಗುಡಿಯಲ್ಲಾದರೂ, ಯಾವುದೇ ಕಾರಣದಿಂದಾದರೂ, ಯಾರ ಶವವನ್ನಾದರೂ ಇರಿಸಿದರೆ, ಅಪಚಾರ ಜರುಗಿದೆ ಎಂದು ಆಲಯವನ್ನು ಶುದ್ಧೀಕರಣ ಮಾಡುತ್ತಾರೆ.

ಆಲೋಚಿಸಿ ದೇವನ ರೂಪಕ್ಕೆ ಪ್ರತಿರೂಪವಾದ, ವಿಗ್ರಹವಿರಿಸಿದ ಗುಡಿಯಲ್ಲಿ ಅಪವಿತ್ರ ಮಾಡಿದರೆನೇ ಅಷ್ಟು ಅಪಚಾರ ನಡೆಯುತ್ತದೆ ಎಂದು ಭಾವಿಸುವವರು, ಅನುಸರಿಸುತ್ತಿರುವವರು ಸಾಕ್ಷಾತ್ ದೇವರೇ ಇರುತ್ತಿರುವ ದೇಹವನ್ನು ಹೇಗೆ ಅಪವಿತ್ರ ಮಾಡುತ್ತಾರೆ? ಶವಗಳನ್ನು ಹೇಗೆ ಇರಿಸುತ್ತಾರೆ? ಮಾಂಸವನ್ನು ಹೇಗೆ ತಿನ್ನುತ್ತಾರೆ? ಆಲೋಚಿಸಿ.

ಆದ್ದರಿಂದ ಆಲಯ ಸಂಪ್ರದಾಯದಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ಪಂಡಿತರು, ಹಿರಿಯರು ನೀಡಿದ ಆಲಯ ಸಾಂಪ್ರದಾಯದಲ್ಲಿನ ಅರ್ಥಗಳನ್ನು ತಿಳಿದುಕೊಂಡು ಆಚರಣೆಯಲ್ಲಿಡಬೇಕು. ಅಷ್ಟೇ ಹೊರತು ಯಾವುದೋ ಆಚಾರವಾಗಿ ಅನುಸರಿಸುವುದಲ್ಲ. ತಿಳಿದಿರಲಿ "**ಆಚಾರವಾಗಿ ಅನುಸರಿಸಿದರೆ ಯಾವ ಪ್ರಯೋಜನವಿಲ್ಲ. ಅರ್ಥ ತಿಳಿದುಕೊಂಡು ಆಚರಿಸಿದರೇ ಎಲ್ಲವೂ ಲಾಭವೇ ಎಲ್ಲವೂ 'ಪುಣ್ಯವೇ'.**"

# ಹುಂಡಿಯಲ್ಲಿ ಕಾಣಿಕೆಗಳು




ಹುಂಡಿಯಲ್ಲಿ ಕಾಣಿಕೆಗಳು ಹಾಕುವ ಆಚಾರವೂ ಇದೆ. ತುಂಬಾ ಜನರು ಹುಂಡಿಯಲ್ಲಿ ಹಾಕುವ ಕಾಣಿಕೆಗಳೆಲ್ಲವೂ ದೇವರಿಗೆ ನೀಡಿದಂತೆ ಭಾವಿಸುತ್ತಾರೆ. ಅದರ ಮೂಲಕ ದೇವರು ಆನಂದಿಸುತ್ತಾನೆ ಎಂದುಕೊಳ್ಳುತ್ತಾರೆ. ಪ್ರತಿಯಾಗಿ ತನಗೆ ಸಂಪತ್ತನ್ನು ಕೊಡುತ್ತಾನೆ, ಅಷ್ಟೆ ಅಲ್ಲದೆ ಕೋರಿಕೆಗಳನ್ನು ನೆರವೇರಿಸುತ್ತಾನೆ ಎಂದು ಭಾವಿಸುತ್ತಾರೆ. ತಮ್ಮ ಕಷ್ಟಗಳು ತೀರುತ್ತವೆ ಎಂದು ಆಶಿಸುತ್ತಾರೆ.

ಆದರೆ ಹುಂಡಿಯಲ್ಲಿ ಕಾಣಿಕೆಗಳು ಸಮರ್ಪಿಸುವುದರಲ್ಲೂ ಅರ್ಥವಿದೆ. ಹಾಗೆ ಭಗವಂತನಿಗೆ ನೀಡುವುದೆಂದರೆ, ಲೋಕಕ್ಕೆ ಕೊಡುವುದು ಎಂದು ಈ ಮೂಲಕ ನಮ್ಮ ಹಿರಿಯರು ತಿಳಿಸಿದ್ದಾರೆ. ಕಾಣಿಕೆಯನ್ನು ಸಮರ್ಪಿಸುವುದರ ಹಿಂದೆ ಇರುವ ಉದ್ದೇಶ ... ಗುಡಿಗೆ ಹೋಗುವವರು ಕಾಣಿಕೆಗಳನ್ನು ಸಮರ್ಪಿಸುವ ಆಚಾರ ಪರಿಚಯಿಸಲು ಕಾರಣ ಇದೇ... ಏಕೆಂದರೆ ಭಗವಂತನ ಲೋಕದಿಂದ ನಾವು ಹೊಂದುತ್ತಿದ್ದೇವೆ, ಆದ್ದರಿಂದ ಅದರಲ್ಲಿ ಸ್ವಲ್ಪ ಭಾಗ ಲೋಕಕ್ಕೆ ಖರ್ಚು ಮಾಡಬೇಕು. ಅಂದರೆ ಭಗವಂತನಿಗೆ ಸಮರ್ಪಿಸಬೇಕು.

**ಲೋಕಕ್ಕೆ ನೀಡಿದರೆ ಹೇಗೆ ಭಗವಂತನಿಗೆ ನೀಡಿದಂತಾಗುತ್ತದೆ?**


ನೆನಪಿರಲಿ ಈ ಲೋಕದಲ್ಲಿ ಭಗವಂತನಲ್ಲದ್ದು, ಆತ ಇಲ್ಲದಿರುವ ಚರಾಚರ ವಸ್ತುಗಳು ಯಾವುದು ಇಲ್ಲ. ಆದ್ದರಿಂದ ಈ ಲೋಕಕ್ಕೆ ಏನು ನೀಡಿದರೂ, ಅದು ಭಗವಂತನಿಗೆ ನೀಡಿದಂತೆ. ಅಂದರೆ ಲೋಕ ಕಲ್ಯಾಣಕರವಾದ ಕೆಲಸಗಳು ನಾವು ಏನು ಮಾಡಿದರೂ, ಅದು ಭಗವಂತನಿಗೆ ಸಮರ್ಪಿಸಿದಂತೆ. ತಿಳಿದುಕೊಳ್ಳಿ ಧನವು ನೀಡಿದರೇ ಮಾತ್ರ ಕಾಣಿಕೆಯಲ್ಲ. ಏನಾದರೂ ಆಗಬಹುದು ನಿಮ್ಮ ಬಳಿ ಇರುವ ಸಮಯವಾಗಲಿ,

ಶಕ್ತಿಯಾಗಲಿ, ಜ್ಞಾನವಾಗಲಿ, ಬುದ್ಧಿವಂತಿಕೆಯಾಗಲಿ, ವಾಕ್ಕು, ಯಾವುದಾದರೂ ಸರಿಯೇ ಲೋಕಕ್ಕೆ ನೀಡಬೇಕು. ಅಂದರೆ ಭಗವಂತನಿಗೆ ಸಮರ್ಪಿಸಬೇಕು.

ಈ ವಿಷಯವನ್ನೇ ಶಿರಡಿ ಬಾಬಾ ಕೂಡ ಹೇಳಿದ್ದಾರೆ. "**ಎಲ್ಲಾ ಪರಬ್ರಹ್ಮನದೇ ಆದ್ದರಿಂದ, ಯಾರಿಗೆ ಏನು ಲಭಿಸಿದರೂ! ಇದ್ದರೂ! ಅದು ಈಶ್ವರನಿಂದ ಲಭಿಸಿರುವುದೇ ಎಂದು ತಿಳಿದುಕೊಳ್ಳಬೇಕು.**"

ಅಷ್ಟೇ ಅಲ್ಲ "**ಈಶ್ವರನಿಂದ ಲಭಿಸಿದ ಐಶ್ವರ್ಯವನ್ನು ತ್ಯಾಗ ಪೂರ್ವಕವಾಗಿ ಅನುಭವಿಸಬೇಕು. ಹಂಚಬೇಕು. ಯಾವ ವಿಧವಾದ ಲೋಭವನ್ನು ಮೋಹವನ್ನು ಇಟ್ಟುಕೊಳ್ಳಬಾರದು.**" ಎಂದು ಬಾಬಾ ಹೇಳುತ್ತಾ, ಈಶಾವಾಸ್ಯ ಉಪನಿಷತ್ ನಲ್ಲಿನ ಒಂದು ಶ್ಲೋಕವನ್ನು ಉದಾಹರಿಸಿದ್ದಾರೆ.

ಕಾಣಿಕೆಗಳನ್ನು ಸಮರ್ಪಿಸುವುದರ ಅರ್ಥ, ಲೋಕಕ್ಕೆ ಹಂಚಬೇಕು. ಅಂದರೆ ಕೊಡಬೇಕು, ಇದು ತಿಳಿಸಿ ಹೇಳಲು ಪಂಡಿತರು ಕಾಣಿಕೆಗಳ ಹೆಸರಿನಲ್ಲಿ ಸಮರ್ಪಿಸಲು ಹೇಳಿದ್ದಾರೆ. ಇದರಲ್ಲಿನ ಅಂತರಾರ್ಥ ಇದೆ.



# ಮುಡಿ ನೀಡುವುದು



ಹಾಗೆಯೇ ಕೆಲವು ಆಲಯಗಳಲ್ಲಿ ತಲೆಕೂದಲನ್ನು ಸಮರ್ಪಿಸುತ್ತಾರೆ. ಇದಕ್ಕೂ ಅರ್ಥವಿದೆ. ಪತ್ರಿಜಿಯವರು ಕೂಡಾ " ತಲೆಯನ್ನು ಬೋಳಿಸುವುದಲ್ಲ, ನಮ್ಮ ಆಲೋಚನೆಗಳನ್ನು ಬೋಳಿಸಬೇಕು" ಎನ್ನುತ್ತಾರೆ. ಅಂದರೆ ತಲೆಯಿಂದ ತೆಗದು ಹಾಕಬೇಕು ಎಂದರ್ಥ.

ತಲೆಯ ಕೂದಲುಗಳನ್ನು ತೆಗೆಯ ಬೇಕಿಲ್ಲ, ತಲೆಯಲ್ಲಿರುವ ಆಲೋಚನೆಗಳನ್ನು ತೆಗೆದು ಹಾಕಬೇಕು. ಅಂದರೆ ಆಲೋಚನೆಗಳು ಇಲ್ಲದಂತೆ ಮಾಡಬೇಕು. ಮನಸ್ಸನ್ನು ಶೂನ್ಯ ಮಾಡಬೇಕು. ಅದನ್ನೇ 'ಧ್ಯಾನಸ್ಥಿತಿ' ಎನ್ನುತ್ತಾರೆ.

ಇದನ್ನೇ ಪತಂಜಲಿ ಮಹರ್ಷಿ "**ಚಿತ್ತವೃತ್ತಿ ನಿರೋಧ:**" ಎಂದಿದ್ದಾರೆ. ಇದನ್ನೇ ಅವರು ಯೋಗವವೆಂದೂ, ಹೇಳಿದ್ದಾರೆ. ಆತ ಇನ್ನು ಏನು ಹೇಳಿದ್ದಾರೆಂದರೆ, "**ಯೋಗ: ಚಿತ್ತವೃತ್ತಿ ನಿರೋದ:**" ಎಂದಿದ್ದಾರೆ.

ಶ್ರೀ ಕೃಷ್ಣ ಭಗವಾನರು ಕೂಡಾ ಅರ್ಜುನನನ್ನು ಯೋಗಿಯಾಗು ಎಂದು ಹೇಳಿದ್ದಾರೆ. ಎಲ್ಲರಿಗಿಂತ ಯೋಗಿ ಉನ್ನತವಾದವನು ಎಂದು ಹೇಳಿದ್ದಾರೆ.

ಶ್ಲೋ ॥ ತಪಸ್ವಿಭ್ಯೋಧಿಕೋ ಯೋಗಿ ಜ್ಞಾನಿಭ್ಯೋಪಿ ಮತೋಧಿಕ:

**ಕರ್ಮಿಭ್ಯಶ್ಚಾಧಿಕೋ ಯೋಗಿ ತಸ್ಮಾದ್ಯೋಗಿ ಭವಾರ್ಜುನ (ಭ.ಗೀ.6–46)**

ತಾ :– "ಓ ಅರ್ಜುನಾ, ಯೋಗಿ ಎನ್ನುವವನು ತಪಸ್ಸುಗಳು ಮಾಡುವವರಿಗಿಂತ, ಶಾಸ್ತ್ರ ಜ್ಞಾನವುಳ್ಳವರಿಗಿಂತ, ಅಗ್ನಿಹೋತ್ರಾದಿ ಕರ್ಮಗಳು ಮಾಡುವವರಿಗಿಂತ ಶ್ರೇಷ್ಠವಾದವನು ಆದ್ದರಿಂದ ನೀನು ಯೋಗಿಯಾಗು..."

ಇದೇ ಮಾನವ ಸಾಧಿಸಬಹುದಾದ ಉನ್ನತ ಸ್ಥಿತಿ. ಹಾಗೆ ಯೋಚನೆಗಳನ್ನು ತೆಗೆದು ಹಾಕಿದವರು, ನಿಧಾನವಾಗಿ ದೈವತ್ವವನ್ನೇ ಹೊಂದುತ್ತಾರೆ. ಶಾಸ್ತ್ರಗಳು ಬರೆದ ಪಂಡಿತರು ತಲೆಕೂದಲನ್ನು ಸಮರ್ಪಿಸಿಕೊಳ್ಳುವಿಕೆಯನ್ನು ಸೂಚ್ಯವಾಗಿ ಯೋಚನೆಗಳನ್ನು, ಮನಸ್ಸಿನಲ್ಲಿನ ವ್ಯರ್ಥ ಆಲೋಚನೆಗಳನ್ನು ತೆಗೆದು ಹಾಕಬೇಕೆಂದು, ಕೆಟ್ಟದ್ದನ್ನು ತೆಗೆಯಬೇಕೆಂದು ಹೇಳಿದ್ದಾರೆ.... ತೆಗೆಯಬೇಕೆಂದರೆ, ಶ್ವಾಸದ ಮೇಲೆ ಗಮನವಿರಿಸಿ ಧ್ಯಾನ ಮಾಡಬೇಕು. ಇದೇ ತಲೆ ಕೂದಲುಗಳನ್ನು ಸಮರ್ಪಿಸುವುದರಲ್ಲಿರುವ ಅರ್ಥ.

**{ಒಂದೇ ಕುರ್ಚಿಯಲ್ಲಿ ಇಬ್ಬರು ಕೂರಲಾರರು. ಒಬ್ಬರು ಕುಳಿತರೆ ಇನ್ನೊಬ್ಬರಿಗೆ ಅವಕಾಶವಿರುವುದಿಲ್ಲ. ಹಾಗೆ ಭಗವಂತನ ಮೇಲೆ ದೃಷ್ಟಿ ಇರಿಸಬೇಕೆಂದರೆ, ಪ್ರಪಂಚದ ಮೇಲೆ, ಪ್ರಾಪಂಚಿಕ ಸುಖಗಳ ಮೇಲೆ ದೃಷ್ಟಿಯನ್ನು ಸರಿಸಬೇಕು}**

# ಅಖಂಡ ದೀಪ ಹಾಗೂ ಗುಡಿಯಲ್ಲಿ ಗಂಟೆ



ಪ್ರತಿ ದೇಹದಲ್ಲಿ ಆತ್ಮವೆನ್ನುವ ಜ್ಯೋತಿ ಬೆಳಗುತ್ತಾ ಇರುತ್ತದೆ. ದೇಹದಲ್ಲಿ ಆತ್ಮವಿಲ್ಲದಿದ್ದರೆ ದೇಹ ಶವವಾಗುತ್ತದೆ. ಆದ್ದರಿಂದ ದೇಹದಲ್ಲಿ ಆತ್ಮ ಯಾವಾಗಲೂ ಪ್ರಕಾಶಿಸುತ್ತಾ ಇರಬೇಕು. ಅದಕ್ಕೆ ದೇಹಕ್ಕೆ ಪ್ರತಿರೂಪವಾದ ಗುಡಿಯಲ್ಲಿ ದೀಪ ನಂದಿ ಹೋಗಬಾರದೆಂಬ ಕಾರಣಕ್ಕೆ ಅಖಂಡ ದೀಪ ಹಚ್ಚುತ್ತಾರೆ. ದೇಹದಲ್ಲಿ ಆತ್ಮಜ್ಯೋತಿ ಪ್ರಕಾಶಿಸುತ್ತಿರುವಂತೆ ದೇಹಕ್ಕೆ ಪ್ರತಿರೂಪವಾದ ಗುಡಿಯಲ್ಲಿ ಕೂಡ ಅಖಂಡ ದೀಪ ಬೆಳಗುತ್ತಾ ಇರಬೇಕು ಎನ್ನುವ ಉದ್ದೇಶ ಅರ್ಥ ಅದೆ. ಅದಕ್ಕೆ ಅಖಂಡ ದೀಪ.

ಹಾಗೆ ಗುಡಿಯಲ್ಲಿ ಗಂಟೆಗಳು ಧ್ವನಿಸುತ್ತಾ ಇರಬೇಕು ಎನ್ನುವುದರ ಅರ್ಥ ಪ್ರತಿಯೊಬ್ಬರ ದೇಹದಲ್ಲಿ ನಿತ್ಯ ಓಂಕಾರನಾದ ಧ್ವನಿಸಬೇಕು. ಅದರ ಸಂಕೇತವಾಗಿಯೇ ಪ್ರತಿ ಗುಡಿಯಲ್ಲಿ ಗಂಟೆಯನ್ನು ಹೊಡೆಯುತ್ತಾರೆ. ಯಾವ ಮತದಲ್ಲಾದರೂ ಗುಡಿಯಲ್ಲಿ ಗಂಟೆಗಳನ್ನು ಹೊಡೆಯುತ್ತಾರೆ.

ಹಾಗೆ ಗೋಪುರಗಳು ಎತ್ತರವಾಗಿ ಕಟ್ಟಲು ಕಾರಣ ರಾತ್ರಿಯಲ್ಲಿ ಆಕಾಶ ದೀಪ ಇರಿಸಲು ಎಂದು ಅರ್ಥವಾಗುತ್ತದೆ. ಹಿಂದಿನ ಕಾಲದಲ್ಲಿ ಈಗ ಇರುವಂತೆ ರೋಡ್‌ಗಳು, ಮಾರ್ಗಗಳು, ಆ ಕಾಲದಲ್ಲಿ ಸರಿಯಾಗಿ ಇರುತ್ತಿರಲಿಲ್ಲ. ದಾರಿಹೋಕರು ಗೋಪುರಗಳಿಂದ ಹಗಲು, ಆಕಾಶ ದೀಪದಿಂದ ರಾತ್ರಿ ವೇಳೆ, ಅಲ್ಲಿ ಗ್ರಾಮ ಇದೆ ಎಂದು ದೂರದಿಂದಲೇ ತಿಳಿದುಕೊಳ್ಳುತ್ತಿದ್ದರು. ಹಾಗೆ ಆ ಗ್ರಾಮವನ್ನು ಸೇರಿಕೊಳ್ಳುತ್ತಿದ್ದರು. ಆಲಯ ಪ್ರಾಂಗಣದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆಲಯ ಸಾಂಪ್ರದಾಯದಲ್ಲಿ, ಆಲಯ ನಿರ್ಮಾಣದಲ್ಲಿ ಇಷ್ಟು ಅರ್ಥಗಳು ಅಂತರಾರ್ಥಗಳು ಇವೆ. ಎಲ್ಲವೂ ಮಾನವರಿಗೆ ಲಾಭ ತರುವಂತಹುದೆ.

ಹಾಗೆಯೇ ದೇವರಿಗೆ ಪ್ರತಿಯಾಗಿ ವಿಗ್ರಹ ಹೇಗೋ, ದೇಹಕ್ಕೆ ಪ್ರತಿಯಾಗಿ ದೇವಾಲಯವು ಇರುತ್ತದೆ. ಅಷ್ಟೇ ಅಲ್ಲ ದೇಹದಲ್ಲಿರುವ ಪಂಚಭೂತಗಳಿಗೆ ಪ್ರತಿ ಗುಡಿಯಲ್ಲಿ ಕೂಡ ಪ್ರಸಾದವೆನ್ನುವ ಭೂತತ್ವ, ಉದಕವೆನ್ನುವ ನೀರಿನ ತತ್ವ, ದೀಪ ಎನ್ನುವ ಅಗ್ನಿತತ್ವ, ಧೂಪವೆನ್ನುವ ವಾಯು ತತ್ವ, ಗಂಟನಾದವೆನ್ನುವ ಆಕಾಶ ತತ್ವಗಳು ಕೂಡಾ

ನಮಗೆ ಗುಡಿಯಲ್ಲಿ ಕಾಣಿಸುತ್ತದೆ.

ಅಷ್ಟೇ ಅಲ್ಲ ಆಲಯದಲ್ಲಿರುವ ಮಂಟಪಗಳು ವಿನೋದ, ವಿಜ್ಞಾನ ಕಾರ್ಯಕ್ರಮಗಳಿಗೆ ಎಷ್ಟೋ ಉಪಯೋಗವಾಗುತ್ತಿದ್ದವು. ಅಲ್ಲಿ ಗುರುಗಳು, ಪಂಡಿತರು ಉಪನ್ಯಾಸಗಳನ್ನು ಹೇಳುತ್ತಿದ್ದರು. ನರ್ತಕಿಯರು, ನಾಟ್ಯಗಳೊಂದಿಗೆ ಮನರಂಜನೆ ನೀಡುತ್ತಿದ್ದರು. ಕಲಾಕಾರರು ತಮ್ಮ ಭಕ್ತಿರಸ ಸಂದೇಶಗಳೊಂದಿಗೆ ನಾಟಕಗಳು, ಹರಿ ಕಥೆಗಳು ಪ್ರದರ್ಶಿಸುತ್ತಿದ್ದರು. ಹಾಗೆ ಆಲಯಗಳು ಎಷ್ಟೋ ಉಪಯೋಗವಾಗುತ್ತಿದ್ದವು.

ಹಾಗೆ ಯಾವ ವಿಧವಾಗಿ ನೋಡಿದರೂ ಅರ್ಥಗಳೊಂದಿಗೆ ಕೂಡಿಕೊಂಡಿರುವ ಶಾಸ್ತ್ರಗಳು ಹೊರತು ಅರ್ಥವಿಲ್ಲದ್ದು ಯಾವುದು ಇಲ್ಲ. ಆದರೆ ನಾವು ನಿಜವಾದ ಅರ್ಥ ತಿಳಿಯದೆ ಆಚಾರವಾಗಿ ಬಂದಿದೆ ಎಂದು ಆಚರಿಸುತ್ತಿದ್ದೇವೆ. ಎಂತಹ ಲಾಭಗಳು ಉಂಟಾಗುತ್ತವೆಯೋ, ಆಲೋಚಿಸದೇ ವಿಧವಿಧವಾದ ಕೋರಿಕೆಗಳನ್ನು ಕೋರುತ್ತಿದ್ದೇವೆ. ಮಾಡುವುದು ಒಂದು ಬಯಸುವುದು ಮತ್ತೊಂದು. ಆಚರಿಸುವುದು ಒಂದು,ಆಶಿಸುವುದು ಮತ್ತೊಂದು ಆಗುವುದರಿಂದ ನಾವು ಆಶಿಸುವುದು ಹೇಗೆ ಲಭಿಸುತ್ತದೆ? ಕೋರುವುದು ಹೇಗೆ ಬರುತ್ತದೆ? ಹಾಗೆ ನಡೆಯದೇ ಹೋಗುವುದರಿಂದ ನಿರಾಶೆಗೆ ಒಳಗಾಗಿ ಕೊನೆಗೆ ದೇವರ ಮೇಲೆ ನಮ್ಮ ನಂಬಿಕೆ ಹೋಗುವ ಪರಿಸ್ಥಿತಿ ಏರ್ಪಡುತ್ತದೆ. ಅದಕ್ಕೆ ದೇವರನ್ನು ಬದಲಾಯಿಸುವುದು, ಫೋಟೋಗಳನ್ನು ಬದಲಾಯಿಸುವುದು, ಮತಗಳನ್ನು ಬದಲಾಯಿಸುತ್ತಿದ್ದೇವೆ. ಆದ್ದರಿಂದ ಪುಣ್ಯ ಎಂದ ಕೂಡಲೇ ಮಾಡುವುದಲ್ಲ. ಆ ಕೆಲಸ ಮಾಡಿದರೆ ಎಂತಹ ಪುಣ್ಯ ಬರುತ್ತದಯೋ ಎಂದು ತಿಳಿದುಕೊಳ್ಳಬೇಕು.

ಆದ್ದರಿಂದ ನೀವು ಏನು ಮಾಡುತ್ತಿರುವಿರೋ, ಅದಕ್ಕೆ ಯಾವ ಫಲಿತ ಬರುವುದು ತಿಳಿದುಕೊಳ್ಳಬೇಕು. ತಿಳಿದುಕೊಂಡು ಅಂತಹ ಕೆಲಸ ಮಾಡಿದರೆ ಖಂಡಿತ ಬಯಸಿದ ಲಾಭ ಬರುತ್ತದೆ. ನೆನಪಿರಲಿ, ಆಲಯ ಸಾಂಪ್ರದಾಯವೆಲ್ಲವೂ ನಿನ್ನಲ್ಲೇ ಇರುವ ದೈವವನ್ನು ಅಂದರೆ ಆತ್ಮವನ್ನು ಆಶ್ರಯಿಸಬೇಕೆಂದು... ಅಂದರೆ ಧ್ಯಾನ ಮಾಡಬೇಕೆಂದು ಹೇಳುತ್ತದೆ. ಅದಕ್ಕೆ ವಿಗ್ರಹ ದರ್ಶನವಾದ ನಂತರ ಕೊನೆಯಲ್ಲಿ ಸ್ವಲ್ಪ ಹೊತ್ತು ಕುಳಿತು ಹೇಳುತ್ತಾರೆ ಅಂದರೆ ಪೂರ್ವಕಾಲದಲ್ಲಿ ಯಾರಾದರೂ ಅಲ್ಲಿಯೇ ಕುಳಿತು ಸ್ವಲ್ಪ ಹೊತ್ತು ಧ್ಯಾನ ಮಾಡಿ ಹೋಗುತ್ತಿದ್ದರು. ಅಂದರೆ ಆಲಯಗಳನ್ನು ಧ್ಯಾನಾಲಯಗಳಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಗುಡಿಯಲ್ಲಿ ವಿಗ್ರಹವನ್ನು ನೋಡಿದ ಕೂಡಲೇ, ತಮ್ಮಲ್ಲಿರುವ ದೈವವನ್ನು ನೆನಪಿಗೆ ತಂದುಕೊಳ್ಳುತ್ತಿದ್ದರು. ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತು

ಧ್ಯಾನದ ಮೂಲಕ ಆ ದೇವರ ಮೇಲೆ ದೃಷ್ಟಿ ಇರಿಸುತ್ತಿದ್ದರು. ದಿನಗಳು ಕಳೆಯುತ್ತಾ ಕುಳಿತುಕೊಂಡು ಏಳುವ ಆಚಾರ ಹೋಯಿತು. ಧ್ಯಾನ ಮಾಡಿ ಬರಬೇಕೆಂಬ ಅರ್ಥ ಮರೆತು ಹೋದರು. ಆದರೆ, ದೇವಸ್ಥಾನಕ್ಕೆ ಹೋದರೆ ಹಿಂತಿರುಗುವ ಮೊದಲು ಸ್ವಲ್ಪ ಹೊತ್ತು ಕುಳಿತು ಏಳಬೇಕು ಎನ್ನುವುದರ ಅರ್ಥ, ಧ್ಯಾನ ಮಾಡಬೇಕೆಂದೇ ಆಗಿರುತ್ತದೆ.

ಹಿಂದಿನ ಕಾಲದಲ್ಲಿ ಜನರಿಗೆ ಅವರ ಮನೆ, ಧ್ಯಾನಕ್ಕೆ ಅನುಕೂಲವಾಗಿ ಇರುತ್ತಿರಲಿಲ್ಲ. ಅದಕ್ಕೆ ಗುಡಿಗೆ ಹೋಗಿ ಧ್ಯಾನ ಮಾಡಿ ಬರುತ್ತಿದ್ದರು. ಹಿಂದಿನ ಕಾಲದಲ್ಲೇ ಅಲ್ಲ ಪ್ರಸ್ತುತ ಕೂಡ ತುಂಬಾ ಜನರಿಗೆ ತಮ್ಮ ಮನೆಗಳು ಧ್ಯಾನಕ್ಕೆ ಅನುಕೂಲವಾಗಿರುವುದಿಲ್ಲ. ಆದ್ದರಿಂದ ನಾವು ಸಹಾ ಆಲಯಗಳನ್ನು, ಧ್ಯಾನಾಲಯಗಳನ್ನಾಗಿ ಉಪಯೋಗಿಸಿಕೊಳ್ಳೋಣ. ನಮ್ಮಲ್ಲಿರುವ ದೈವವನ್ನು ಧ್ಯಾನಿಸೋಣ... ಧ್ಯಾನ ಮಾಡೋಣ.

ನೆನಪಿರಲಿ ದೈವವನ್ನು ಸ್ಮರಿಸಲು ಧ್ಯಾನ ಮಾಡಬೇಕೆಂದೇ ಆಲಯಗಳ ಕಟ್ಟಿರುವುದರ ಅಂತರಾರ್ಥವಾಗಿದೆ. ಆದ್ದರಿಂದ ಆಲಯಗಳನ್ನು ಧ್ಯಾನಾಲಯಗಳಾಗಿ ಬದಲಾಯಿಸೋಣ. ಜೀವನವನ್ನು ಧನ್ಯವಾಗಿಸಿಕೊಳ್ಳೋಣ. ಧ್ಯಾನ ಮಾಡಿ ದೇವರನ್ನು ಸೇರೋಣ.

**{ದೈವವನ್ನು ಸ್ಮರಿಸದವರು ಅಧಮರು. ದೈವವನ್ನು ದರ್ಶಿಸಬೇಕೆಂದುಕೊಳ್ಳುವರು ಮಧ್ಯಮರು. ದೈವಾನುಭೂತಿಗಾಗಿ ಯಾವಾಗಲೂ ಧ್ಯಾನ ಮಾಡುವವರು ಉತ್ತಮರು}**

# ಮಂತ್ರಪುಷ್ಪ - ಅದರ ಅರ್ಥ



ಪೂಜೆ ಮುಗಿದ ನಂತರ ಮಂತ್ರ ಪುಷ್ಪ ಹೇಳುತ್ತಾರೆ. ನಂತರ ತಮ್ಮ ಕೋರಿಕೆಗಳನ್ನು ಕೋರುತ್ತಾರೆ. ಗೋತ್ರ ನಾಮಗಳು ಹೇಳುತ್ತಾರೆ. ಅಷ್ಟೇ ಹೊರತು, ಮಂತ್ರ ಪುಷ್ಪದ ಒಂದು ಅರ್ಥ ತಿಳಿದುಕೊಳ್ಳುವುದಿಲ್ಲ. ಆದರೆ ಮಂತ್ರ ಪುಷ್ಪದ ಅರ್ಥ ತಿಳಿದುಕೊಂಡರೆ,ಭಗವಂತನು ಯಾರು? ಆತ ಎಂತಹ ಉನ್ನತವಾದವನು, ಆತನನ್ನು ಹೇಗೆ ಆರಾಧಿಸಬೇಕು? ಎನ್ನುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಆತ ಎಲ್ಲರಲ್ಲಿ ಇರುವ ಆತ್ಮವೇ ಎಂದು, ನಾಶವಾಗದವನು ಎಂದು, ಎಲ್ಲವನ್ನು ವ್ಯಾಪಿಸಿ ಇರುವವನೆಂದು, ಎಲ್ಲದಕ್ಕೂ ಆಧಾರವಾದವನು ಎಂದು, ಆತನೇ ಬ್ರಹ್ಮ, ಆತನೇ ಹರಿ, ಆತನೇ ಶಿವ, ಆತನೇ ಇಂದ್ರ, ಅಂತಹ ನಾರಾಯಣನನ್ನು ಅಂದರೆ ಭಗವಂತನನ್ನು ಧ್ಯಾನಿಸಬೇಕೆಂದು ಮಂತ್ರ ಪುಷ್ಪದ ಮೂಲಕ ತಿಳಿಯುತ್ತದೆ. ಅಂದರೆ ಭಗವಂತನನ್ನು ಧ್ಯಾನಿಸಬೇಕೆಂದು ಮಂತ್ರ ಪುಷ್ಪದ ಅರ್ಥ. ಅಷ್ಟೇ ಹೊರತು ಮಂತ್ರ ಓದಿ ಆ ಪುಷ್ಪವನ್ನು ಅಲ್ಲಿ ಇರಿಸಬೇಕು ಎನ್ನುವುದಲ್ಲ. ಕೋರಿಕೆಗಳನ್ನು ಕೋರಬೇಕು ಎಂದಲ್ಲ.

ಅಕ್ಷರ ಪರಬ್ರಹ್ಮನಾದ ಆ ಭಗವಂತನನ್ನು, ಅಂದರೆ ನಾರಾಯಣನನ್ನು ಅಂದರೆ ಆತ್ಮವನ್ನು ಧ್ಯಾನಿಸಬೇಕು, ತಿಳಿದುಕೊಳ್ಳಬೇಕು. ಅಂದರೆ ಅಂತರಂಗದಲ್ಲಿರುವ ಆತ್ಮದ ಮೇಲೆ ದೃಷ್ಟಿ ಇರಿಸಬೇಕು. ಅಂದರೆ 'ಅಂತರ್ಮುಖರಾಗಬೇಕು' 'ಶ್ವಾಸದ ಮೇಲೆ ಗಮನ' ಇರಿಸಬೇಕು 'ಧ್ಯಾನ' ಮಾಡಬೇಕೆಂದು ತಿಳಿದುಕೊಳ್ಳಬೇಕು. ಧ್ಯಾನ ಮಾಡಿ ಜೀವನವನ್ನು ಧನ್ಯವಾಗಿಸಿಕೊಳ್ಳಬೇಕು. ಮೋಕ್ಷವನ್ನು ಹೊಂದಬೇಕು. ಆದ್ದರಿಂದ ತಿಳಿದುಕೊಳ್ಳಿ ಮಂತ್ರ ಪುಷ್ಪ ಅಂದರೆ **"ಮಂತ್ರವನ್ನು ಓದಿ ಪುಷ್ಪವನ್ನು ಸಮರ್ಪಿಸುವುದಲ್ಲ.... ಮಂತ್ರದ ಅರ್ಥವನ್ನು ತಿಳಿದುಕೊಂಡು ಆಚರಿಸುವುದು."**

**ಮಂತ್ರ ಪುಷ್ಪದ ಅರ್ಥ ತಿಳಿದುಕೊಳ್ಳೋಣ :–**

**1.ಓಂ ಸಹಸ್ರ ಶ್ರೀರ್ಷಮ್ ದೇವಂ ವಿಶ್ವಾಕ್ಷಂ ವಿಶ್ವಶಮ್ಭುವಮ್।**

ಅನೇಕ ಶಿರಗಳನ್ನು ಉಳ್ಳವನು, ಅನೇಕ ನೇತ್ರಗಳನ್ನು ಉಳ್ಳವನು, ವಿಶ್ವಕ್ಕೆ ಸುಖವನ್ನು ಉಂಟು ಮಾಡುವವನು.

**2. ವಿಶ್ವಂ ನಾರಾಯಣಂ ದೇವ ಮಕ್ಷರಂ ಪರಮಂ ಪದಮ್।**

ವಿಶ್ವವೆಲ್ಲ ವ್ಯಾಪಿಸಿರುವ ನಾರಾಯಣನು. ನಾಶವಿಲ್ಲವದವನು. ಪರಮೋತ್ಕೃಷ್ಟವಾದ ಸ್ಥಾನದಲ್ಲಿರುವವನು.

**3. ವಿಶ್ವತಃ ಪರಮೋ ನಿತ್ಯಮ್ ವಿಶ್ವಂ ನಾರಾಯಣಗೊಮ್ ಹರಿಂ।**

ವಿಶ್ವವ್ಯಾಪಕನು ಉನ್ನತವಾದವನು, ನಿತ್ಯವಾದವನು, ನಾರಾಯಣನೆಂದು, ಹರಿಯೆಂದು ಕರೆಯಲ್ಪಡುವವನು.

**4. ವಿಶ್ವಮೇ ವೇದಂ ಪುರುಷ ಸ್ತ ದ್ವಿಶ್ವ ಮುಪಜೀಪತಿ।**

ಕಾಣುತ್ತಿರುವ ಪ್ರಪಂಚವೆಲ್ಲದರಲ್ಲೂ ಆ ಪುರುಷನ ಸ್ವರೂಪವೇ .. ಅದನ್ನು ಆಶ್ರಯಿಸಿಯೇ ಪ್ರಪಂಚವು ಜೀವಿಸುತ್ತಿದೆ.

**5. ಪತಿಂ ವಿಶ್ವಸ್ಯಾತ್ಮೆ ಶ್ವರಗೋಂ ಶಾಶ್ವತಗೋಂ ಶಿವ ಮಚ್ಯುತಂ।**

ವಿಶ್ವಕ್ಕೆ ಅಧಿಪತಿಯಾದವನು ತನಗೆ ತಾನೇ ಅಧಿಕಾರಿಯಾದವನು. ಶಾಶ್ವತ ವಾದವನು, ಮಂಗಳಕರವಾದವನು, ನಾಶವಿಲ್ಲದವನು,ನರರೆಲ್ಲರಲ್ಲಿಯೂ ಇರುವವನು.

**6. ನಾರಾಯಣಂ ಮಹಾ ಜ್ಞೆಯಂ ವಿಶ್ವಾತ್ಮಾನಾಂ ಪರಾಯಣಂ**

ಉನ್ನತವಾದವನು, ತಿಳಿದುಕೊಳ್ಳಲು ಯೋಗ್ಯನಾದವನು, ವಿಶ್ವವೆಲ್ಲವೂ ವ್ಯಾಪಿಸಿರುವ ಆತ್ಮ ಸ್ವರೂಪವಾದವನು. ನಮಗೆ ಅದೇ ಪರಮ ಗತಿಯಾಗಿದೆ.

**7. ನಾರಾಯಣ ಪರೋಜ್ಯೋತಿ ರಾತ್ಮಾ ನಾರಾಯಣ: ಪರ:।**

ಆ ನಾರಾಯಣನೇ ನರರಲ್ಲಿರುವ ಆತ್ಮ, ಅಖಂಡ ತೇಜಸ್ಸುಳ್ಳ ಪರಮಾತ್ಮ.

**8. ನಾರಾಯಣಂ ಪರಂಬ್ರಹ್ಮಂ ತತ್ವಂ ನಾರಾಯಣಃ ಪರ: ।**

ಆ ನಾರಾಯಣನೇ ಪರಬ್ರಹ್ಮ ನಾರಾಯಣನೇ ಪರತತ್ವ.

**9. ನಾರಾಯಣ ಪರೋಧ್ಯಾತಾ ಧ್ಯಾನಂ ನಾರಾಯಣ ಪರ:**

ಧ್ಯಾನ ಮಾಡುವವನು, ಆ ಧ್ಯಾನವನ್ನು ಮಾಡಿಸಲ್ಪಡುವವನು, ಸರ್ವವು ಉತ್ಕೃಷ್ಟವಾದ ನಾರಾಯಣನೇ, ಅದೇ ಪರಮಾತ್ಮ ಅದೇ ಪರತತ್ವ.

**10.ಯಚ್ಛ ಕಿ ನ್ಚ ಜಗತ್ಸರ್ವಂ ದೃಶ್ಯತೇ ಶ್ರೂಯತೇಪಿವಾ।**

ನಮಗೆ ಕಾಣುತ್ತಿರುವ, ನಾವು ಕೇಳುತ್ತಿರುವ ಪ್ರಪಂಚ ಯಾವುದು ಇರುವುದೋ? ಅದೆಲ್ಲವೂ ನಾರಾಯಣನೇ. ಅಷ್ಟೇ ಅಲ್ಲದೆ ನಾವು ನೋಡದಿರುವ, ಕೇಳದಿರುವ ಪ್ರಪಂಚದಲ್ಲಿ ಆತ ವ್ಯಾಪಿಸಿದ್ದಾನೆ.

**11.ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ತಿಯ ನಾರಾಯಣ ಸ್ಥಿತಃ।**

ಒಳಗೆ ಹೊರಗೆ ಸಮಸ್ತವೂ ವ್ಯಾಪಿಸಿರುವವನೇ, ನಾರಾಯಣ... ಅಂದರೆ ಆತ್ಮ.

**12. ಅನಂತ ಮವ್ಯಯಂ ಕವಿಗೋಂ ಸಮುದ್ರೇನ್ತಂ ವಿಶ್ವ ಶಮ್ಭುವಮ್।**

ಅಂತ್ಯವಿಲ್ಲದವನು,ನಾಶವಿಲ್ಲದವನು, ಸರ್ವವೂ ತಿಳಿದವನು, ಸಮುದ್ರದಂತಹವನು (ಸಮುದ್ರವೆಂದರೆ ಆಕಾಶ. ಆಕಾಶ ಎಲ್ಲಿ ಕೊನೆಯಗುವುದೋ ಅಲ್ಲಿ ಇದಕ್ಕೆ ಅಂತ್ಯ. ಆಕಾಶಕ್ಕೆ ಅಂತ್ಯವಿಲ್ಲ ಅದಕ್ಕೆ ಭಗವಂತನನ್ನು ಆದಿ ಅಂತ್ಯ ಇಲ್ಲದವನು ಎನ್ನುತ್ತಾರೆ.) ಪ್ರಪಂಚಕ್ಕೆ ಸುಖವನ್ನು ನೀಡುವನು.

ಹೀಗೆ ಪರಮಾತ್ಮನ ವಿಶಿಷ್ಟತೆಯ ಕುರಿತು ಹೇಳಿ ಜೀವಾತ್ಮದ ಕುರಿತು ಅದು ಇರುವ ಸ್ಥಾನದ ಕುರಿತು ಈ ಕೆಳಗೆ ವರ್ಣಿಸುತ್ತಿದ್ದಾನೆ.

**13. ಪದ್ಮಕೋಶ ಪ್ರತಿಕಾಶಗ್ ಹೃದಯಂ ಚಾಪ್ಯಧೋ ಮುಖಂ।**

ತಾವರೆ ಮೊಗ್ಗಿನ ಆಕಾರದಂತೆ ಅಧೋ ಮುಖವಾಗಿ ನೇತಾಡುತ್ತಾ..

**14. ಅಧೋ ನಿಷ್ಟ್ಯಾ ವಿತಸ್ತ್ಯಾನ್ತೆ ನಾಭ್ಯಾಮುಪರಿ ತಿಷ್ಠತಿ।**

ನಾಭಿಗೆ 12 ಅಂಗುಲದ ಮೇಲೆ (ಒಂದು ವಸ್ತು)ಇದೆ.

**15. ಜ್ವಾಲಾ ಮಾಲಾ ಕುಲಂ ಭಾರತಿ ವಿಶ್ವಸ್ಯಾಯ ತನಂ ಮಹತ್।**

ಅದು ಜ್ವಾಲೆಯೊಂದಿಗೆ ತುಂಬಿ ಸಮಸ್ತ ಪ್ರಪಂಚಕ್ಕೆ ಆಧಾರವಾದ ಸ್ಥಳ.

**16.ಸನ್ತತಗ್ಂ ಶಿರಾಬಿಸ್ತುಲಮ್ಬ ತ್ಯಾ ಕೋಶ ಸನ್ನಿಭಂ।**

ಯಾವಾಗಲೂ ರಕ್ತನಾಡಿಗಳಿಗೆ ನೇತಾಡುತ್ತಿರುವುದು. ಬಿರಿದ ಮೊಗ್ಗಿನಂತೆ ಇರುವುದು(ಅಂದರೆ ಕೊನೆಯಲ್ಲಿ ಸ್ವಲ್ಪ ಸೀಳಿದೆ ಎನ್ನುವ ಭಾವ)

**17.ತಾಸ್ಯಾಂತೆ ಸುಷಿರಗ್ಂ ಸೂಕ್ಷ್ಮ ತಸ್ಮಿನ್ನೋತ್ಸರ್ವಂ ಪ್ರತಿಷ್ಟಿತಂ।**
ಆ ಮೊಗ್ಗಿನ ಕೊನೆಯಲ್ಲಿ ರಂಧ್ರವಿದೆ ಆ ಕೊನೆಯಲ್ಲೂ ಅವರಿಸಿದೆ.

**18. ತಸ್ಯ ಮಧ್ಯೆ ಮಹೋ ನಗ್ನಿ ರಿಶ್ವಾರ್ಸಿ ರಿಶ್ವತೋ ಮುಖ:।**
ಅದರ ಒಳಗೆ ದೊಡ್ಡ ಅಗ್ನಿ ಇರುವುದು. ಎಲ್ಲಿ ನೋಡಿದರಲ್ಲಿ ಜ್ವಾಲೆ ಇದೆ. ಎಲ್ಲಾ ಕಡೆಗೂ ಆ ಜ್ವಾಲೆ ವ್ಯಾಪಿಸುತ್ತಿದೆ. ಆ ಅಗ್ನಿಯೇ ಆಹಾರವನ್ನು ಮೊದಲು ತಿನ್ನುತ್ತದೆ. (ತಿಂದ ಆಹಾರವನ್ನು ಎಲ್ಲದಕ್ಕೂ ಹಂಚುತ್ತದೆ.)

**19.ತಿರ್ಯಗೂರ್ಧ್ವ ಮಧಶಾಯಿರಶ ಯಸ್ತಸ್ಯ ಸನ್ತತಾ।**
ಸನ್ತಾ ಪಯತಿ ಸ್ವಂದೇಹಾ ಮಾ ಪಾದ ತಲ ಪುಸ್ತಕ:॥
ಆ ಅಗ್ನಿಗೆ ಹಿಂಜರಿಕೆಯಿಲ್ಲ. ಅದಕ್ಕೆ ಎಲ್ಲಾ ತಿಳಿದಿದೆ. ಅದಕ್ಕೆ ಕಿರಣಗಳು ಅಡ್ಡವಾಗಿ, ನೇರವಾಗಿ, ಕೆಳಗಿನವರೆಗೂ ಎಲ್ಲಾ ಕಡೆ ಪ್ರಸರಿಸಿದೆ.

**20. ತಸ್ಯ ಮಧ್ಯೆ ವಹ್ನಿ ಶಿಖಾ ಅಣಿ ಯೋರ್ಧ್ವಾ ವ್ಯವಸ್ಥಿತ:**
ಅದರ ಮಧ್ಯದಲ್ಲಿ ಸಣ್ಣದಾಗಿ ಮೇಲ್ಮುಖಕ್ಕೆ ಪ್ರಸರಿಸುತ್ತಾ ಅಗ್ನಿಶಿಕೆ ಎಂದರೆ ಅಗ್ನಿ ಜ್ವಾಲೆಯು ಇದೆ.

**21.ನೀಲತೋಯದ ಮಧ್ಯಸ್ತಾದ್ವಿದ್ಯುಲ್ಲೇಖೇನ ಭಾಸ್ವರಾ।**
ಕಪ್ಪನೆಯ ಮೇಘವು ಮಧ್ಯ ಭಾಗವನ್ನು ಮಿಂಚಿಂನಂತೆ ಪ್ರಕಾಶಿಸುತ್ತಿದೆ.

**22.ನೀವಾರ ಶೂಕ ವತ್ತನ್ವಿ ಪೀತಾ ಭಾಸ್ವತ್ವವ ನೂಪಮಾ।**
ಭತ್ತದ ಮುಳ್ಳು ಎಷ್ಟು ಸಣ್ಣದಾಗಿದೆಯೋ ಅಷ್ಟು ಸಣ್ಣದಾಗಿ, ಹಸಿರು ಹರಿಶಿಣ ಬಣ್ಣವನ್ನು ಹೊಂದಿ ಅಣು ಮಾತ್ರವಾಗಿ ಚೆನ್ನಾಗಿ(ಆಹಾರವನ್ನು) ತಿನ್ನುತ್ತಿದೆ.

**23.ತಸ್ಯಾ ಶ್ರಿಖಾಯಾ ಮಧ್ಯೆ ಪರಮಾತ್ಮಾ ವ್ಯವಸ್ಥಿತಃ।**
ಆ ಅಗ್ನಿ ಜ್ವಾಲೆ ಮಧ್ಯೆ ಪರಮಾತ್ಮನಿದ್ದಾನೆ.
ಅಚಿದರೆ ಮೇಲೆ ಹೇಳಿರುವುದೆಲ್ಲವೂ ಜೀವ ವಿಷಯಗಳು ಅಂದರೆ, ಆ ಜೀವಿಯಲ್ಲೇ, ಆ ಮಾನವನಲ್ಲೇ ಭಗವಂತ ಇದ್ದಾನೆಂದು ಇದರ ತಾತ್ಪರ್ಯ.

**24. ಸ ಬ್ರಹ್ಮ ಸ ಶಿವ ಸ್ಸ ಹರಿಸ್ಸೇಂದ್ರ ಸ್ಸೋಕ್ಷರ: ಪರಮಸ್ವರಾಟ್ ।**

ಆತನೇ ಬ್ರಹ್ಮ, ಆತನೇ ಶಿವ, ಆತನೇ ಹರಿ, ಆತನೇ ಇಂದ್ರ, ಆತನೇ ಅಕ್ಷರ (ನಾಶವಿಲ್ಲದ) ಪರಬ್ರಹ್ಮ, ಸ್ವರಾಟ್

**25. ರಾಜಾಧಿ ರಾಜಾಯ ಪ್ರಸಹ್ಯ ಸಾಹಿನಿ**

ನಮೋ ವಯಂ ವೈ ಶ್ರವಣಾಯ ಕುರ್ಮಹೇ

ಸ ಮೇ ಕಾಮಾನ್ಕಾಮ ಕಾಮಾಯ ಮಹ್ಯಂ

ರಾಮೇಶ್ವರ ವೈ ಶ್ರವಣೋ ದದಾತು

ಕುಬೇರಾಯ ವೈ ಶ್ರವಣಾಯ ಮಹಾರಾಜಾಯ ನಮಃ

ಅಂತಹ ರಾಜಾಧಿರಾಜನಾದ ನಾರಾಯಣನ ಒಂದು ಆತ್ಮತತ್ವ ವಿಚಾರಣೆ ಸಿದ್ಧಿಸುವಿಕೆಗಾಗಿ, ನಾವು ನಮಸ್ಕರಿಸುತ್ತೇವೆ. ಆತ್ಮಜ್ಞಾನವನ್ನು ಹೊಂದಬೇಕೆನ್ನುವ ನಮ್ಮ ಅದೃಷ್ಟವನ್ನು ಆತ ನೆರವೇರಿಸಲಿ. ಕಾಮೇಶ್ವರನಾದ ಆ ಪರಮಾತ್ಮ ನಾವು ಮಾಡುವ ಶ್ರವಣವನ್ನು ಅನುಗ್ರಹಿಸಲಿ. ಮಹಾರಾಜಾಧಿರಾಜ ಕುಬೇರನಿಗೆ ರಾಜನಾದವನು, ಪರಮಾತ್ಮನಿಗೆ ಸಂಬಂಧಿಸಿದ, ನಾವು ಕೇಳಿದ ವಿಷಯವನ್ನು ಸ್ಥಿರಪಡಿಸಿಕೊಳ್ಳಲು ನಮಸ್ಕರಿಸುತ್ತಿದ್ದೇವೆ.

**26. ಓಂ ತದ್ಬ್ರಹ್ಮ = ಅದೇ ಬ್ರಹ್ಮ**

**27. ಓಂ ತದ್ವಾಯು = ಅದೇ ವಾಯು**

**28. ಓಂ ತದಾತ್ಮ = ಅದೇ ಆತ್ಮ**

**29. ಓಂ ತತ್ಸತ್ಯಂ = ಅದೇ ಸತ್ಯ**

**30. ಓಂ ತತ್ಸರ್ವಂ = ಅದೇ ಸರ್ವ**

**31. ಓಂ ತತ್ಪುರೋರ್ನಮಃ = ಅದೇ ಮೊದಲು ಕಾಣುವುದು**

**32. ಅನ್ತಶ್ಚರತಿ ಭೂತೇಷು = ಗುಹಾಯಾಂ ವಿಶ್ವ ಮೂರ್ತಿಷು ।**

ಆತ ಎಲ್ಲಾ ಭೂತಗಳು ಅಂದರೆ ಪ್ರಾಣಿಗಳಲ್ಲಿ ಇರುವವನು, ಆತ ಸಕಲ ಶರೀರಗಳಲ್ಲಿ ಇರುವವನು. ಇದನ್ನೇ ಗುಹೆಯಲ್ಲಿ ಇರುವವನು ಎಂದಿದ್ದಾರೆ. (ಗುಹಾ ಎಂದರೆ ಇಲ್ಲಿಯವರೆಗೂ ಹೇಳಿದ ತಾವರೆ ಮೊಗ್ಗಿನ ಮಧ್ಯೆ ಇರುವ ಆಕಾಶ. ಅದು ಅಂಗುಷ್ಟದಷ್ಟು ಮಾತ್ರ ಇರುತ್ತದೆ. ಅದನ್ನೇ ದಹಾರಾಕಾಶ ಎನ್ನುತ್ತಾರೆ)

**33.ತ್ವಂ ಯಜ್ಞಸ್ತ್ವಂ ವರ್ಷಟ್ಕಾರ ಸ್ತ್ವ ಮಿಂದ್ರಸ್ತ್ಯಂ।**

ರುದ್ರಸ್ತ್ವಂ ವಿಷ್ಣುಸ್ತ್ವಂ ಬ್ರಹ್ಮಾತ್ವಂ ಪ್ರಜಾಪತಿ: ॥

ಆತನೇ ಯಜ್ಞರೂಪ, ಆತನೇ ವಷಟ್ ಎಂದು ಉಚ್ಚರಿಸಿ ಮಾಡಿದ ಹೋಮ ಸ್ವರೂಪನು. ಆತನೇ ಇಂದ್ರ, ಆತನೇ ರುದ್ರ, ಆತನೇ ಶಿವ, ಆತನೇ ವಿಷ್ಣು, ಆತನೇ ಬ್ರಹ್ಮ, ಆತನೇ ಪ್ರಜಾಪತಿ.

**34. ಓನ್ ತದಾಪ ಹಾಕು ಜ್ಯೋತಿ ರಸ್ಕೋ ಮೃತಂ।**

**ಬ್ರಹ್ಮ ಭೂರ್ಭು ವಸ್ಸುವರೋಮ್॥**

ಆತನೇ ಉದಕ, ಉದಕದಲ್ಲಿನ ತೇಜಸ್ಸು ಅಂದರೆ ವಿದ್ವತ್ತು, ಆತನೇ ಅದರಲ್ಲಿರುವ ರುಚಿ, ಆತನೇ ಅಮೃತ, ಆತನೇ ಬ್ರಹ್ಮ, ಸಮಸ್ತ ಲೋಕಗಳು ಆತನೇ.

**35. ಈಶಾನ ಸರ್ವ ವಿದ್ಯಾನಾಂ ಈಶ್ವರ ।ಸರ್ವಭೂತಾನಂ ಬ್ರಹ್ಮಾಧಿಪತಿಃ**

**ಬ್ರಾಹ್ಮಣ್ಯೋಧಿಪತಿ: ಬ್ರಹ್ಮೋ ಶಿವೋಮೇ ಅಸ್ತು ಸದಾಶಿವಂ ॥**

ಸಮಸ್ತ ವಿದ್ಯೆಗಳಿಗೆ ಪ್ರಭು ಆತನೇ, ಸರ್ವಭೂತಗಳಿಗೆ ಪ್ರಭು ಆತನೇ, ವೇದ ಸಂರಕ್ಷಕನು ಆತನೇ, ಬ್ರಹ್ಮದೇವನಿಗೆ ಆತನೇ ಅಧಿಪತಿ, ಅಂತಹ ಬ್ರಹ್ಮ ನನಗೆ ಮಂಗಳಕರನಾಗಿರಬೇಕು! ನಾನು ಸದಾಶಿವನೇ.

**36. ತದ್ವಿಷ್ಣೋ: ಪರಮಂ ಪದಗ್ ಮ್ ಸದಾ ಪಶ್ಯನ್ತಿ ಸೂರಯ:**

**ದಿವೀವ ಚಕ್ಷುರಾತತಂ ತದ್ವಿ ಪ್ರಾಸೋ ವಿಪನ್ಯವೋ***

**ಜಾಗೃದಾಂ ಸಸ್ಸ ಮಿಂಥತೇ ವಿಷ್ಣೋ ರ್ಯತ್ಪರಮಂ ಪದಂ॥**

ಗಗನದಲ್ಲಿ ವ್ಯಾಪಿಸಿರುವ ಜ್ಯೋತಿಯನ್ನು ದರ್ಶಿಸಿದಂತೆ ಪಂಡಿತರು ಸದಾ ಪರಮಪದವನ್ನು ಹೊಂದುತ್ತಿದ್ದಾರೆ. ಅಂತಹ ಪಂಡಿತರು ಕಷ್ಟಗಳಿಲ್ಲದವರಾಗಿ, ಜಾಗರೂಕರಾಗಿ, ವಿಷ್ಣುಪದವನ್ನು ಹೊಂದುತ್ತಾರೆ.

**37. ಋತುಗ್ಂ ಸತ್ಯಂ ಪರಂಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ।**

**ಊರ್ದ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ॥**

ಅಂತಹ ಸತ್ಯ ಸ್ವರೂಪನು, ಪರಬ್ರಹ್ಮ, ಪುರುಷ, ಕೃಷ್ಣವರ್ಣ, ಪಿಂಗಳ ವರ್ಣವುಳ್ಳವನು, ಊರ್ದ್ವರೇತಸ್ಕನು, ವಿರೂಪಾಕ್ಷನಾದ ವಿಶ್ವರೂಪನಿಗೆ ನಮಸ್ಕಾರ.

**38. ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ತನ್ನೋ ವಿಷ್ಣು: ಪ್ರಚೋದಯಾ।**

ಅಂತಹ ನಾರಾಯಣನನ್ನು ಅಂದರೆ ಆತ್ಮವನ್ನು ತಿಳಿದುಕೊಳ್ಳೋಣ. ಅಂತ ವಾಸುದೇವನನ್ನು ಅಂದರೆ ಆತ್ಮನನ್ನು ಧ್ಯಾನಿಸೋಣ. ಆ ವಿಷ್ಣು ನಮ್ಮನ್ನು ಧ್ಯಾನದ ಕಡೆಗೆ ನಡೆಯಿಸಲಿ!

ಇದರ ಅನುಸಾರ ಮಂತ್ರ ಪುಷ್ಪದ ಒಂದು ಅರ್ಥ, ಅಂತಹ ಉನ್ನತನಾದ ನಿನ್ನನ್ನು ಧ್ಯಾನಿಸುವೆನು. ನಮ್ಮನ್ನು ಧ್ಯಾನದ ಕಡೆಗೆ ನಡೆಯಿಸು ಎಂದು ಪ್ರಾರ್ಥಿಸುವುದೇ ಮಂತ್ರ ಪುಷ್ಪದ ಒಂದು ಅರ್ಥ. ಅಷ್ಟೇ ಹೊರತು ಕೋರಿಕೆಗಳನ್ನು ಕೋರುವುದಲ್ಲ. ಬೇಡುವುದಲ್ಲ, ಪ್ರಾರ್ಥಿಸುವುದಲ್ಲ, ಏನೆಂದು ಪ್ರಾರ್ಥಿಸುವುದು...? ಆದ್ದರಿಂದ ಪ್ರಾರ್ಥಿಸಿ ಸುಮ್ಮನಿರುವುದಲ್ಲ. ಅದನ್ನು ಆಚರಣೆಯಲ್ಲೂ ಇಡಬೇಕು. ಅಂದರೆ ಅಲ್ಲಿಯೇ ಕುಳಿತು ಸ್ವಲ್ಪ ಹೊತ್ತು ಧ್ಯಾನ ಮಾಡಬೇಕು. ಸ್ವಲ್ಪ ಹೊತ್ತು ಎಲ್ಲವನ್ನು ಮರೆತು ಭಗವಂತನ ದೃಷ್ಟಿಯಲ್ಲಿ ಇರಬೇಕು. ಯಾವ ಆಲೋಚನೆ ಇಲ್ಲದಂತೆ ಇದ್ದರೆ ಅದು ಸಾಧ್ಯವಾಗುತ್ತದೆ. ಅದಕ್ಕಾಗಿ "ಶ್ವಾಸದ ಮೇಲೆ ಗಮನ" ಇರಿಸಬೇಕು.

ಯಾವ ಯೋಚನೆಯಿಲ್ಲದಿದ್ದರೆ ನಿಮ್ಮ ಗಮನ ಭಗವಂತನ ಮೇಲೆ ಇರುವಂತೆ. ಹಾಗೆ ಒಂದು ನಿಮಿಷ ಇರಿಸಿದರೂ, ನಮ್ಮ ಜೀವನ ಧನ್ಯವಾಗುತ್ತದೆ. ಅದಕ್ಕೆ ಉತ್ತರ ಗೀತೆಯಲ್ಲಿ

**ಶ್ಲೋಕ॥**

**ನಿಮುಷಂ ನಿಮಿಷಾರ್ಧಂ ವಾಜ್ಞಾನಿನೋ ಚಿಂತಯಾ ।**

**ಕ್ರತು ಕೋಟಿ ಸಹಸ್ರಾಣಂ ಧ್ಯಾನ ಮೇಕಂ ವಿಶಿಷ್ಯತೆ॥**

ತಾ :– "ಆತ್ಮಜ್ಞಾನಿಗಳು ನಿಮಿಷವಾಗಲಿ ಅರೆ ನಿಮಿಷವಾಗಲಿ ಆತ್ಮಧ್ಯಾನ ಮಾಡುವುದರಿಂದ ಸಾವಿರ ಕೋಟಿ ಯಜ್ಞ ಮಾಡಿದ ಫಲ ಬರುತ್ತದೆ ಆದ್ದರಿಂದ ಧ್ಯಾನವೊಂದೇ ವಿಶಿಷ್ಟವಾದದ್ದು"

ಅಂದರೆ ಅಂತಹ ಉನ್ನತವಾದ ಭಗವಂತನನ್ನು ಒಂದು ನಿಮಿಷವಾಗಲಿ, ಅರ್ಧ ನಿಮಿಷವಾಗಲಿ, ಧ್ಯಾನಿಸುವುದರಿಂದ ಸಾವಿರ ಕೋಟಿ ಯಜ್ಞಗಳಿಂದ ಬರುವ ಫಲಿತ ಬರುತ್ತದೆ ಎಂದು ಉತ್ತರ ಗೀತೆಯಲ್ಲಿ ಭಗವಾನನೆ ಹೇಳುತ್ತಿದ್ದಾನೆ. ಆದ್ದರಿಂದ ಮಂತ್ರ ಪುಷ್ಪ ಓದಿ ಹೂ ಸಮರ್ಪಿಸಿ ಕೋರಿಕೆಗಳನ್ನು ಕೋರುವುದಲ್ಲ. ಆಚರಣೆಯಲ್ಲಿ ಇಡಬೇಕು. ಕೋರದೆ ಫಲಗಳು ಬರುತ್ತವೆ. ಧ್ಯಾನ ಮಾಡಿ. ಧ್ಯಾನವೇ ಮಂತ್ರಪುಷ್ಪಾರ್ಥ.

ತಿಳಿದುಕೊಳ್ಳಿ ಭಗವಂತನು ಉನ್ನತವಾದವನು ಎಂದು ಹೇಳುವುದೇ ಮಂತ್ರಪುಷ್ಪದ ಅರ್ಥ. ಅಂತಹ ಉನ್ನತವಾದ ಭಗವಂತನನ್ನು ಧ್ಯಾನಿಸಬೇಕೆಂದು ತಿಳಿದುಕೊಳ್ಳುವುದೇ, ಅದರಲ್ಲಿರುವ ಅಂತರಾರ್ಥ.

**ಓಂ ಶಾಂತಿ ಶಾಂತಿ ಶಾಂತಿಃ**



# ಶ್ರೀ ರಾಮಧಾಮ ಧ್ಯಾನಕೇಂದ್ರ

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.
ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮೀ ಎಸ್.ಎನ್. 80500 82689

## ಆತ್ಮಜ್ಞಾನ ಶಿಕ್ಷಣ ಶಿಬಿರ ಕಾರ್ಯಕ್ರಮಗಳು

* ಪ್ರತಿ ಸೋಮವಾರ ಸಂಜೆ 6.30 ರಿಂದ 8.30 ರವರೆಗೆ ಧ್ಯಾನ ತರಗತಿಗಳು ನಡೆಯುತ್ತವೆ.
* ಹುಣ್ಣಿಮೆ ಹಾಗೂ ಅಮಾವಾಸ್ಯೆ ಧ್ಯಾನ
* ಧ್ಯಾನಕಸ್ತೂರಿಯಲ್ಲಿ ಹಾಗೂ ಪಿಎಂಸಿ ಕನ್ನಡ ಚಾನೆಲ್‌ನಲ್ಲಿ ಪ್ರಕಟಿಸಲಾಗುವುದು
* ಪ್ರತಿ ಆರು ತಿಂಗಳಿಗೊಮ್ಮೆ ಮೂರುದಿನದ ಆತ್ಮಜ್ಞಾನ ಶಿಕ್ಷಣ ಶಿಬಿರ ಉಚಿತವಾಗಿ ನಡೆಯುತ್ತದೆ ಇದರ ವಿವರಗಳನ್ನು
* ಪ್ರತಿ ತಿಂಗಳಿಗೊಮ್ಮೆ ಒಂದು ದಿನ ಆತ್ಮಜ್ಞಾನ ಶಿಬಿರ ಉಚಿತವಾಗಿ ನಡೆಯುತ್ತದೆ.

ವಿವರಗಳಿಗೆ ಸಂಪರ್ಕಿಸಿ :–

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 30 |
| 2. | ನವವಿಧ ಧರ್ಮಗಳು | ರೂ. 30 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 30 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 50 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 50 |
| 7. | ಷಿರಿಡಿ ಸಾಯಿ ಸಂದೇಶಗಳು | ರೂ. 50 |
| 8. | ಪ್ರಾಣ ಶಕ್ತಿ | ರೂ. 100 |
| 9. | ಜೀವನದ ಸೂಕ್ಷ್ಮಗಳು | ರೂ. 100 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 50 |
| 11. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 12. | ತುಳಸಿ ದಳ (I) | ರೂ. 200 |
| 13. | ತುಳಸಿ ದಳ (ii) | ರೂ. 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ 80 |
| 16. | ಧ್ಯಾನದಿಂದಲೇ ಜ್ಞಾನ | ರೂ 70 |
| 17. | ಜ್ಞಾನ ಜ್ಯೋತಿ | ರೂ. 90 |

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

# "ಧ್ಯಾನ ಮಾಡುವ ವಿಧಾನ"

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.


ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಲೋಕದಲ್ಲಿ ಹಲವಾರು ವಿಧಗಳ ಶಾಸ್ತ್ರಗಳಿವೆ. ಹಿಂದಿನ ಕಾಲದಿಂದ ಎಷ್ಟೋ ಜನ ಯೋಗಿಗಳು, ಋಷಿಗಳು, ಪಂಡಿತರು, ಮೇಧಾವಿಗಳು, ಎಷ್ಟೋ ಶಾಸ್ತ್ರಗಳನ್ನು ಬರೆದಿದ್ದಾರೆ. ಆದರೆ ಎಲ್ಲಾ ಶಾಸ್ತ್ರಗಳಾಗಿಯೇ ಪರಿಗಣಿಸಲ್ಪಡುತ್ತಿವೆ.

ಶಾಸ್ತ್ರಗಳಲ್ಲಿರುವ ಪ್ರತಿ ವಿಷಯವನ್ನು ದೇಹಕ್ಕೆ ಅನ್ವಯಿಸಿಕೊಳ್ಳಬಹುದು. ಆತ್ಮಕ್ಕೆ ಅನ್ವಯಿಸಿಕೊಳ್ಳಬಹುದು. ದೇಹಕ್ಕೆ ಅನ್ವಯಿಸಿಕೊಂಡರೆ ಒಂದು ವಿಧವಾದ ಅರ್ಥಬರುತ್ತದೆ. ಆತ್ಮಕ್ಕೆ ಅನ್ವಯಿಸಿಕೊಂಡರೆ, ಮತ್ತೊಂದು ಅರ್ಥ ಬರುತ್ತದೆ.

ಉದಾಹಣೆಗೆ ಶ್ರೀ ಕೃಷ್ಣ ಭಗವಾನನು ನನ್ನನ್ನು ಆಶ್ರಯಿಸು ಎನ್ನುವ ಮಾತನ್ನು ಆತನನ್ನು ದೇಹವಾಗಿ ಅರ್ಥಮಾಡಿಕೊಂಡವರು. ವಿಗ್ರಹವನ್ನು ಆಶ್ರಿಯಿಸುತ್ತಾರೆ. ಪೂಜೆಗಳನ್ನು ಮಾಡುತ್ತಾರೆ. ಅದೇ ಆತನನ್ನು ಆತ್ಮವಾಗಿ ಅರ್ಥ ಮಾಡಿಕೊಂಡವರು ಆತ್ಮವನ್ನು ಆಶ್ರಯಿಸುತ್ತಾರೆ. ಧ್ಯಾನ ಮಾಡುತ್ತಾರೆ. ಶ್ರೀ ಕೃಷ್ಣ ಭಗವಾನ್ ಹೇಳಿದ ಒಂದೇ ಮಾತಿಗೆ ಹಾಗೆ ವಿಧವಿಧವಾದ ಅರ್ಥಗಳು ತೆಗೆದುಕೊಳ್ಳಬಹುದು. ತೆಗೆದುಕೊಳ್ಳುತ್ತಾರೆ ಕೂಡಾ.... ಆದರೆ ಶ್ರೀ ಕೃಷ್ಣ ಭಗವಾನನು ಇರುವುದು ಆತ್ಮಸ್ಥಿತಿಯಲ್ಲಿ ಹೇಳಿದ್ದು ಆತ್ಮಸ್ಥಿತಿಯಲ್ಲಿಯೇ.

ಹಾಗೆ ಈ ಶಾಸ್ತ್ರಗಳಿಗೂ. ಅವರವರ ಸ್ಥಾಯಿಯ ಅನುಸಾರ ವಿಧವಿಧವಾದ ಅರ್ಥಗಳು ಹೇಳುವವರು ಇದ್ದಾರೆ. ಆದ್ದರಿಂದ ಈ ಶಾಸ್ತ್ರಗಳ ಕೆಲವು ಅರ್ಥ ಅಂತರಾರ್ಥವನ್ನು ವಿಶ್ಲೇಷಿಸಿಕೊಳ್ಳೋಣ.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 80/-




**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org

● www.pssmovement.org

# ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ,

ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066

**ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503**

**ವಿಜಯಲಕ್ಷ್ಮಿ ಎಸ್.ಎನ್ / 8050082689**